
# ಪುಸ್ತಕ ಪ್ರಪಂಚ

ಸಂಪುಟ ೪೪ ನವಂಬರ್ ೧೯೬೩ ಸಂಚಿಕೆ ೩



# ವಿಷಯ ಸೂಚಿಕೆ



---

# ಪುಸ್ತಕ ಪ್ರಪಂಚ

**ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು**

ಸಂಪುಟ ೪೨ ನವಂಬರ್ ೧, ೧೯೬೩ ಸಂಚಿಕೆ ೨

## ಪುಸ್ತಕ ಪ್ರಪಂಚದ ಪುನರ್ಜನ್ಮ
## ಕನ್ನಡ ಜಾಗೃತಿಯ ಸಂಕೇತ

ಮಹಾಮೇಧಾವಿಗಳೂ ಕೀರ್ತಿಶೇಷರೂ ಆದ ಪ್ರೊ. ಎನ್. ಎಸ್. ಸುಬ್ಬರಾಯರು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಕಾಲ. "ಪ್ರಬುದ್ಧ ಕರ್ಣಾಟಕ ನಷ್ಟದಲ್ಲಿ ನಡೆಯುತ್ತಿದೆ. ಅದನ್ನೇಕೆ ನಿಲ್ಲಿಸಬಾರದು?" ಎಂಬುದಾಗಿ ವಿಶ್ವವಿದ್ಯಾನಿಲಯದ ಆಡಳಿತ ಮಂಡಲಿಯ ಸದಸ್ಯರ ಕೂಗಾಟ. ಆ ಬಗ್ಗೆ ವಿಚಾರಿಸುವುದಾಗಿ ಕುಲಪತಿಗಳ ಉತ್ತರ.

ಆಗ ಆ ಪತ್ರಿಕೆಯ ಸಂಪಾದಕರಾಗಿದ್ದವರು ಕನ್ನಡವನ್ನು ಕಟ್ಟಿದವರೂ ಮಹಾವಿದ್ವನ್ಮಣಿಗಳೂ ಆದ ಪ್ರೊ. ಎ.ಆರ್. ಕೃಷ್ಣ ಶಾಸ್ತ್ರಿಗಳು. ಸುಬ್ಬರಾಯರು ಅವರನ್ನು ಕರೆಸಿಕೊಂಡು ಆಡಳಿತ ಮಂಡಲಿಯಲ್ಲಿ ನಡೆದ ವಿದ್ಯಮಾನವನ್ನು ವಿವರಿಸುತ್ತಾರೆ. "ತನ್ನ ಕಾಲ ಮೇಲೆ ನಿಲ್ಲುವ ಶಕ್ತಿ ಇಲ್ಲವಾದರೆ ಪತ್ರಿಕೆಯನ್ನೇ ನಿಲ್ಲಿಸಿ ಬಿಡಿ" ಎಂದು ಕುಲಪತಿಗಳು ನಿರುದ್ವೇಗದಿಂದ ನುಡಿಯುತ್ತಾರೆ.

"ಪತ್ರಿಕೆಗೆ ಚಂದಾದಾರರು ಕಡಿಮೆ ನಿಜ, ಸ್ವಾಮಿ. ಅದು ವಿಶ್ವವಿದ್ಯಾನಿಲಯದ ಸಾಹಿತ್ಯಿಕ ಪತ್ರಿಕೆಯಾದ್ದರಿಂದ ನಾವು ಜಾಹೀರಾತುಗಳನ್ನು ಪ್ರಕಟಿಸುತ್ತಿಲ್ಲ. ಕನ್ನಡದಲ್ಲಿ ಸಾಹಿತ್ಯದ ಲೇಖನಗಳಿಗೆ ಮೀಸಲಾದ ಪತ್ರಿಕೆಗಳೇ ವಿರಳ. ಕನ್ನಡಿಗರಲ್ಲಿ ನವ ಚೈತನ್ಯ ಚಿಗುರುತ್ತಿದೆ. ದಿನೇ ದಿನೇ ಬರೆಯುವವರು ಹೆಚ್ಚುತ್ತಿದ್ದಾರೆ. ಅವರಿಗೆ ಪ್ರೋತ್ಸಾಹ ನೀಡಿದ್ದಾದರೆ ಕನ್ನಡ ವಿಶ್ವವಿಶಾಲವಾಗಿ ಬೆಳೆದೀತು. ನವೋದಯ ಪಂಥದ ಮಹಾಮಹಿಮರನ್ನು ಸೃಷ್ಟಿಸಿದ ಖ್ಯಾತಿ ಪ್ರಬುದ್ಧ ಕರ್ನಾಟಕಕ್ಕಿದೆ. ಸೃಷ್ಟಿಶೀಲ ಸಾಹಿತ್ಯದ ಜತೆಗೆ ವಿದ್ವತ್ತನ್ನು ಬೆಳೆಸು

ವಲ್ಲಿ, ಜನತೆಯಲ್ಲಿ ನವೋತ್ಸಾಹವನ್ನು ಮೂಡಿಸುವಲ್ಲಿ ಈ ಪತ್ರಿಕೆ ತುಂಬ ಸಹಕಾರಿಯಾಗಿದೆ. ಸಾಲ ಮಾಡಿಯಾದರೂ ಮನೆ ಕಟ್ಟಿಕೊಳ್ಳುತ್ತೇವೆ; ಅದರಿಂದ ಲಾಭ ಬರುವುದಿಲ್ಲ. ಇದು ಕನ್ನಡದ ಗುಡಿ. ಇದಕ್ಕಾಗುವ ವೆಚ್ಚವನ್ನು ನಷ್ಟದ ಖಾತೆಗೆ ಸೇರಿಸಲಾಗದು. ಅದರಿಂದಾಗುವ ಪರೋಕ್ಷ ಲಾಭವನ್ನು ಗಣನೆಗೆ ತೆಗೆದುಕೊಳ್ಳಬೇಕು" ಎಂದು ಶಾಸ್ತ್ರಿಗಳು ಸೇರಿಗೆ ಸವ್ವಾಸೇರು ಎನ್ನುವಂತೆ ತಮ್ಮ ವಾದವನ್ನು ಕುಲಪತಿಗಳ ಮುಂದೆ ಮಂಡಿಸುತ್ತಾರೆ.

ಅವರ ವಾದವನ್ನು ತಾಳ್ಮೆಯಿಂದ ಆಲಿಸಿದ ಕುಲಪತಿಗಳು "ನಿಮ್ಮ ವಾದ ನನಗರ್ಥವಾಗಿದೆ, ಶಾಸ್ತ್ರಿಗಳೆ. ಪತ್ರಿಕೆಯನ್ನು ಚೆನ್ನಾಗಿ ಬೆಳೆಸಿ. ಹೆಚ್ಚು ಹಣ ಬೇಕಾದರೆ ಕೇಳಿ" ಎಂದು ಶಾಸ್ತ್ರಿಗಳ ಬೆನ್ನು ತಟ್ಟಿ ಕಳಿಸುತ್ತಾರೆ. ಹೊಸ ಹೊಸ ವಿಚಾರಗಳನ್ನು ಸ್ವಾಗತಿಸಬಲ್ಲ, ನಾಡುನುಡಿಗಳ ವಿಕಾಸದಲ್ಲಿ ಆಸಕ್ತಿಯುಳ್ಳ, ಸೃಜನಶೀಲ ವಿದ್ವಾಂಸರಿಗೆ ಅರ್ಥವಾಗುವ ಸಂಗತಿಗಳು ದೂರದರ್ಶಿತ್ವ ಸಾಮರ್ಥ್ಯ ವಿಲ್ಲದ ನೌಕರಶಾಹಿ ಜನರಿಗೆ ಅರ್ಥವಾಗುವುದಿಲ್ಲವೆಂಬುದು ಜಗತ್ತಿಗೆ ತಿಳಿದಿರುವ ವಿಷಯ. ಇಂಥ ವಿಷಯಗಳಲ್ಲಿ ವಾಣಿಜ್ಯ ಮನೋವೃತ್ತಿ ಸಲ್ಲದು.

ಮೂರು ವರ್ಷಗಳ ಹಿಂದೆ ಅಂದಿನ ಡಿವಿಜನಲ್ ಕಮೀಷನ್ನರು ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ತಜ್ಞರನ್ನು ಕೇಳದೆ ಪುಸ್ತಕ ಪ್ರಪಂಚವನ್ನು ನಿಲ್ಲಿಸಲು ತೀರ್ಮಾನ ತೆಗೆದುಕೊಂಡ ಸಂದರ್ಭದಲ್ಲಿ ನಾನು ಶ್ರೀ ರಾ. ವೆಂ. ಶ್ರೀನಿವಾಸಮೂರ್ತಿಯವರೊಡಗೆ ಅವರನ್ನು ಭೇಟಿ ಮಾಡಿ 'ನಾಲ್ಕು ದಶಕಗಳಿಗಿಂತ ಮಿಗಿಲಾಗಿ ಈ ಪತ್ರಿಕೆ ಸಮರ್ಥವಾಗಿ ಕನ್ನಡದ ಕೆಲಸ ಮಾಡುತ್ತಿದೆ; ಕನ್ನಡಿಗರ ಆಶೆ ಆಕಾಂಕ್ಷೆಗಳನ್ನು ಪೂರೈಸುತ್ತಿದೆ. ಹಣದಿಂದ ಈ ಪತ್ರಿಕೆಯ ಬೆಲೆಯನ್ನಳೆಯಲಾಗದು. ಕರ್ನಾಟಕದಲ್ಲಿ ಈ ತರಹದ ಪತ್ರಿಕೆ ಇದೊಂದೇ. ಪ್ರಾಥಮಿಕ ಶಿಕ್ಷಣದ ಹಂತದಲ್ಲಿಯೇ ವಿದ್ಯಾಭ್ಯಾಸವನ್ನು ನಿಲ್ಲಿಸಿ, ಹಳ್ಳಿಗಳಲ್ಲಿಯೇ ನೆಲಸಬಹುದಾದ ಜನರಿಗೆ ಲೋಕಾನುಭವವನ್ನು ಮುಟ್ಟಿಸು ವುದೇ ಈ ಪತ್ರಿಕೆಯ ಗುರಿ. ಪತ್ರಿಕಾಪ್ರಪಂಚದಲ್ಲಿ ಇದಕ್ಕೊಂದು ವಿಶಿಷ್ಟ ಸ್ಥಾನ ವಿದೆ. ಜತೆಗೆ ಸಮಿತಿಯ ಪ್ರಮುಖ ಯೋಜನೆಗಳಲ್ಲಿ ಇದೂ ಒಂದು. ಎಷ್ಟೋ ಹಣ ಎಲ್ಲೆಲ್ಲಿಯೋ ಸೋರಿಹೋಗುತ್ತಿರುವಾಗ, ಇದರಿಂದೊದಗುವ ನಷ್ಟವನ್ನು ಸಹಿಸಿಕೊಳ್ಳಬೇಕು. ನಮ್ಮ ಗುರಿ ವಿಕಾಸೋನ್ಮುಖವಾಗಿರಬೇಕೇ ಹೊರತು ವಿನಾಶಾತ್ಮಕವಾಗಬಾರದು. ಸದ್ಯಕ್ಕಾದರೂ ಪತ್ರಿಕೆ ಮುಂದುವರಿಯಲಿ. ನಿಧಾನವಾಗಿ ಆಲೋಚಿಸಿ ನಿರ್ಧಾರ ತೆಗೆದುಕೊಳ್ಳಿ. ಅವಸರ ಸಲ್ಲದು" ಎಂದು ವಿವರಿಸಿದೆ. ಆ ಅಧಿಕಾರಿಗಳು "ನಿಮ್ಮ ವಾದದಲ್ಲಿ ಹುರುಳಿದೆ. ಈ ಬಗ್ಗೆ ಬೇಗ

ನಿರ್ಧಾರ ತೆಗೆದುಕೊಳ್ಳುತ್ತೇನೆ" ಎಂದರು. ಅಂಥ ಅಧಿಕಾರಿಗಳ ಗುರಿ ವಿನಾಶವೇ ಹೊರತು ಸೃಷ್ಟಿಯಲ್ಲ. ಅವರು ಹೊರ ರಾಜ್ಯದವರು, ಕನ್ನಡದಲ್ಲಿ ಆಸಕ್ತಿಯಿಲ್ಲದವರು ಎಂಬ ನಿಜ ಆ ಮೇಲೆ ಗೊತ್ತಾಯಿತು. ದೂರ ದೃಷ್ಟಿ ಇಲ್ಲದ ಅವರು ೧೯೮೯ರ ಸೆಪ್ಟೆಂಬರ್ ತಿಂಗಳಲ್ಲಿ (೪೪–೨ ಸಂಪುಟ) ಇತಿ ಶ್ರೀ ಹಾಡಿ, ಸರ್ಕಾರದ ಭಾರವನ್ನಿಳಿಸಿದರು, ಖಜಾನೆಯನ್ನು ಉಳಿಸಿದರು.

ಶ್ರೀ ವೀರಪ್ಪಮೊಯಿಲಿಯವರು ವಯಸ್ಕರ ಶಿಕ್ಷಣಕ್ಕೆಂದೇ ಮಂತ್ರಿಯೊಬ್ಬರನ್ನು ನೇಮಿಸಿದಾಗ ನನಗೆ ತುಂಬಾ ಸಂತೋಷವಾಯಿತು. ಒಂದು ದೇಶದ ಅಭ್ಯುದಯಕ್ಕೆ ಅಲ್ಲಿಯ ಶೈಕ್ಷಣಿಕ ಪ್ರಗತಿಯೇ ನಿರ್ದುಷ್ಟ ಸೂಚಿ. ಹಣಕಾಸಿನ ಇತಿಮಿತಿ ಇರುವಾಗ ಯಾವುದಕ್ಕೆ ಆದ್ಯತೆ ಕೊಡಬೇಕೆನ್ನುವುದನ್ನು ಸರ್ಕಾರ ಮರೆಯುವ ಸಂಭವವುಂಟು. ವಯಸ್ಕರ ಶಿಕ್ಷಣ ಮತ್ತು ಪ್ರೌಢ ಶಿಕ್ಷಣ ಸರ್ಕಾರದ ಹೊಣೆಗಾರಿಕೆಯಾಗಿರಬೇಕು. ನಯವಂತರಾದ ವಯಸ್ಕ ಶಿಕ್ಷಣ ಮಂತ್ರಿ ಶ್ರೀ ಪ್ರಭಾಕರ ರಾಣೆಯವರಿಗೆ ಪುಸ್ತಕ ಪ್ರಪಂಚದ ವಿಷಯ ತಿಳಿಸಿದಾಗ, ಅದರ ಪುನರುಜ್ಜೀವನದ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟರು. ಕನ್ನಡ ಪ್ರೇಮಿಗಳೂ, ಸೃಜನಶೀಲ ಪ್ರತಿಭಾವಂತರೂ ಆದ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಶ್ರೀ ಕೆ. ಶಿವರಾಮು ಐ.ಎ.ಎಸ್ ಅವರು ಆ ಹೊತ್ತಿಗಾಗಲೇ ಪತ್ರಿಕೆಯ ಪುನರುಜ್ಜೀವನದ ಬಗ್ಗೆ ಸಾಕಷ್ಟು ಪ್ರಯತ್ನ ನಡೆಸಿದ್ದರು. ಅವರು ಪ್ರಾಮಾಣಿಕ ಪ್ರಯತ್ನ ನಡೆಸದಿದ್ದರೆ ಪತ್ರಿಕೆ ಪುನರ್ಜನ್ಮ ಕಾಣುತ್ತಿರಲಿಲ್ಲ. ಈ ಪುನರ್ಜನ್ಮಕ್ಕೆ ಕಾರಣರಾದ ಅಧ್ಯಕ್ಷರಾದಿಯಾಗಿ ಎಲ್ಲ ಮಹನೀಯರನ್ನು ಸಂಪಾದಕ ಮಂಡಲಿಯ ಪರವಾಗಿ ವಂದಿಸುತ್ತೇನೆ.

ಪುಸ್ತಕ ಪ್ರಪಂಚ ಆರ್ಥಿಕ ದೃಷ್ಟಿಯಿಂದ ತನ್ನ ಪ್ರಪೂರ್ವಸ್ವರೂಪದಲ್ಲಿ, ಮುಖ್ಯವಾಗಿ ಗ್ರಾಮೀಣ ವಿದ್ಯಾವಂತರ ಜ್ಞಾನಾಭಿವೃದ್ಧಿಯನ್ನು ಗಮನದಲ್ಲಿರಿಸಿಕೊಂಡು, ಹೊರ ಬರಬೇಕೆಂದು ಸಂಪಾದಕ ಮಂಡಲಿ ತೀರ್ಮಾನಿಸಿದೆ. ಪತ್ರಿಕೆ ತಾತ್ಕಾಲಿಕವಾಗಿ ನಿಂತು ಹೋದಾಗ ತಾಳ್ಮೆಯಿಂದ ತೆಪ್ಪಗಿದ್ದ ಚಂದಾದಾರರ ಕ್ಷಮೆಯನ್ನು ಮಂಡಲಿ ಯಾಚಿಸುತ್ತದೆ. ನಾಲ್ಕು ವರ್ಷಗಳ ನಂತರವಾದರೂ ಇದಕ್ಕೆ ಪುನರ್ಜನ್ಮವೊದಗಿರುವಾಗ ಕನ್ನಡಾಭಿಮಾನಿಗಳ ಮತ್ತು ಜ್ಞಾನಭಿಕ್ಷುಗಳ ಹೃದಯಕ್ಕೆ ಸಮಾಧಾನವಾದೀತೆಂದು ನಂಬಲಾಗಿದೆ.

೧೯೯೩–೯೪ನೆಯ ಸಂವತ್ಸರವನ್ನು ಕನ್ನಡ ಜಾಗೃತಿ ವರ್ಷವೆಂದು ಸರ್ಕಾರ ಘೋಷಿಸಿದೆ. ಈ ದೇಶದಲ್ಲಿ ಇಂಥವೇ ಘೋಷಣೆಗಳ ಪಾಪರು ಬ್ಯಾಂಕುಗಳು

ಎಲ್ಲೆಲ್ಲೂ ಸೃಷ್ಟಿಯಾಗಿವೆ. ಈ ಘೋಷಣೆಯೂ ಆ ಗುಂಪಿಗೆ ಸೇರುವುದಿಲ್ಲವೆಂಬ ಆಸೆ ನನ್ನದಾಗಿದೆ. ಆಸೆಗಳು ಕುದುರೆಗಳಾಗಿದ್ದರೆ ಯಾರು ಬೇಕಾದರೂ ಸವಾರಿ ಮಾಡಬಹುದೆಂಬ ಗಾದೆಯೂ ನನ್ನ ಮನಸ್ಸಿನಲ್ಲಿದೆ. ಕನ್ನಡ ಸಂಪೂರ್ಣವಾಗಿ ಆಡಳಿತ ಮಾಧ್ಯಮವಾಗದ ಹೊರತು, ಶಿಕ್ಷಣ ಮಾಧ್ಯಮ ಯಶಸ್ವಿಯಾಗುವುದಿಲ್ಲ. ವೈದ್ಯ ಮತ್ತು ತಾಂತ್ರಿಕ ಶಿಕ್ಷಣವೂ ಕನ್ನಡ ಮಾಧ್ಯಮದಲ್ಲಿ ನಡೆಯುವುದಾದರೆ ಮಾತ್ರ ಪ್ರೌಢಶಿಕ್ಷಣ ಹಂತದಲ್ಲಿ ಮಕ್ಕಳು ಸ್ವಯಿಚ್ಛೆಯಿಂದ ಕನ್ನಡವನ್ನು ಕಲಿಯುತ್ತಾರೆ. ಐದು ವರ್ಷದೊಳಗಾಗಿ ವೈದ್ಯ ಮತ್ತು ತಾಂತ್ರಿಕ ಕಾಲೇಜುಗಳಲ್ಲಿ ಕನ್ನಡವನ್ನು ಜಾರಿಗೊಳಿಸಬೇಕು. ಅಲ್ಲಿಯ ತನಕ ಶೇಕಡ ಐವತ್ತು ಸೀಟುಗಳನ್ನು ಕನ್ನಡ ಮಾಧ್ಯಮದ ಮೂಲಕ ಪಿ.ಯು.ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಿಗೆ ಕಾದಿರಿಸಬೇಕು. ನಿಜಾಮರ ಸರ್ಕಾರದಲ್ಲಿ ಉರ್ದು ಇದ್ದಕ್ಕಿದ್ದಂತೆ ವೈದ್ಯ, ತಾಂತ್ರಿಕ ಶಿಕ್ಷಣದ ಮಾಧ್ಯಮವಾಗುವುದಾದರೆ ಕರ್ನಾಟಕ ಸರ್ಕಾರದಲ್ಲಿ ಕನ್ನಡವೇಕೆ ಅಂಥದೇ ಮಾಧ್ಯಮವಾಗಬಾರದು? ಸರ್ಕಾರಕ್ಕೆ ಪ್ರಾಮಾಣಿಕ ಮನಸಿದ್ದರೆ, ಧೈರ್ಯವಿದ್ದರೆ ದೂರದೃಷ್ಟಿಯಿದ್ದರೆ ಇದು ಸಾಧ್ಯವಾಗುತ್ತದೆ.

ಆಡಳಿತ ವ್ಯವಹಾರದ ದೃಷ್ಟಿಯಿಂದ ಕನ್ನಡ ಮಾಧ್ಯಮದ ವಿಸ್ತರಣೆಗೆ ಅಂಚೆ ಇಲಾಖೆ ಮತ್ತು ಬ್ಯಾಂಕುಗಳಿಂದ ಅಡಚಣೆಯುಂಟಾಗಿದೆ. ಅದರಲ್ಲಿಯೂ ಬ್ಯಾಂಕುಗಳು, ಕನ್ನಡಿಗರ ಹಣದಿಂದ ಬದುಕುತ್ತಿರುವ ಬ್ಯಾಂಕುಗಳು ಕನ್ನಡವನ್ನು ಮೂಲೆ ಗುಂಪು ಮಾಡಲು ಪ್ರಯತ್ನಿಸುತ್ತಿವೆ. ಹಿಂದಿ ದಿನಾಚರಣೆಯ ನೆಪದಲ್ಲಿ ಕನ್ನಡಕ್ಕೆ ಅಪಚಾರವೆಸಗುತ್ತಿವೆ. ಕೊನೆಗೆ ಅವು ಕನ್ನಡ ರಾಜ್ಯೋತ್ಸವವನ್ನಾದರೂ ವಿಜೃಂಭಣೆಯಿಂದ ನೆರವೇರಿಸುತ್ತವೆಯೆ? ಕನ್ನಡದಲ್ಲಿ ವ್ಯವಹಾರ ನಡಸುತ್ತಿವೆಯೆ? ಅವು ಭಾಷಾ ನೀತಿಯನ್ನು ಬದಲಾಯಿಸಿಕೊಳ್ಳದಿದ್ದರೆ ಅಪಾಯ ಕಾದಿದೆಯೆಂದು ಬೇರೆ ಉಪಾಯವಿಲ್ಲದೆ ಎಚ್ಚರಿಸಬೇಕಾಗಿದೆ.

ಕನ್ನಡ ಮಾಧ್ಯಮದ ಸಾಮಾಜಿಕಾರ್ಥಿಕ ಹಾಗೂ ರಾಜಕೀಯ ಪ್ರಯೋಜನವನ್ನು ರಾಜಕಾರಣಿಗಳು ಅರಿಯಬೇಕಾಗಿದೆ. ಕನ್ನಡ ಸರ್ವಮಾಧ್ಯಮವಾದಾಗ ಸಾಮಾಜಿಕ ಸಮಾನತೆಯನ್ನು ಸಾಧಿಸಿದಂತಾಗುತ್ತದೆ; ಕನ್ನಡಿಗರಿಗೆ ಉದ್ಯೋಗಾವಕಾಶಗಳು ಹೆಚ್ಚುತ್ತವೆ; ಅಧಿಕಾರದ ವಿಕೇಂದ್ರೀಕರಣ ಸಾಧ್ಯವಾಗುತ್ತದೆ; ಬೇರೆ ಭಾಷೆಯ ಜನರ ಹಾವಳಿ ತಪ್ಪುತ್ತದೆ; ಎಲ್ಲಕ್ಕಿಂತ ನಿಗಿಲಾಗಿ ಪರಭಾಷೆಯ ಭಾರದಿಂದ ತಲೆಯೆತ್ತಲಾರದ ಪ್ರತಿಭೆ ಬಹುಮುಖವಾಗಿ ಅರಳುವಂತಾಗುತ್ತದೆ; ಚೀಣೀಯರಿಗೆ, ಜಪಾನೀಯರಿಗೆ ಹೆಗಲೆಣೆ

ಯಾಗಿ ಅಭ್ಯುದಯ ಸಾಧಿಸುವ ಅವಕಾಶ ಕನ್ನಡಿಗರಿಗೂ ದೊರೆಯುತ್ತದೆ. ಕನ್ನಡ ಮಾಧ್ಯಮ ನಿಸರ್ಗಧರ್ಮ; ಕನ್ನಡಿಗರ ಆಜನ್ಮಸಿದ್ಧ ಹಕ್ಕು; ಮನೋವೈಜ್ಞಾನಿಕ ಸತ್ಯ.

ಕನ್ನಡ ಜಾಗೃತಿ ವರ್ಷದಲ್ಲಿ ಕನ್ನಡಿಗರಲ್ಲಿ ಜಾಗ್ರತಿಯುಂಟಾಗಿ, ಕನ್ನಡದ ಸಮಸ್ಯೆಗಳೆಲ್ಲ ಬಗೆ ಹರಿದು, ಕನ್ನಡ ನಾಡಿನ ಸಂದಿಗೊಂದಿಗಳಲ್ಲೆಲ್ಲ ಕನ್ನಡದ ಗಾಳಿ ಬೆಳಕುಗಳು ನಿರಾತಂಕವಾಗಿ ಹೋಗುವಂತಾಗಲಿ ಎಂದು ಪುಸ್ತಕ ಪ್ರಪಂಚ ಹಾರೈಸುತ್ತದೆ. ಈ ಪತ್ರಿಕೆಯ ಪುನರ್ಜನ್ಮ ಕನ್ನಡ ಜಾಗೃತಿಯ ಸಂಕೇತವಾಗಲಿ, ಅದು ನೂರಾರು ವರ್ಷ ನಿರ್ವಿಘ್ನವಾಗಿ ಬಾಳಿ, ಕನ್ನಡದ ಮತ್ತು ಕನ್ನಡಿಗರ ಸಮೃದ್ಧಿಗೆ ಪ್ರೇರಕಶಕ್ತಿಯಾಗಿ ಪರಿಣಮಿಸಲೆಂದು ಹಾರೈಸುತ್ತೇನೆ.

ಬಾರಿಸು ಕನ್ನಡ ಡಿಂಡಿಮವ
ಓ ಕರ್ನಾಟಕ ಹೃದಯ ಶಿವ।

ದೇಜಗೌ




ಮನುಷ್ಯ ಒಳ್ಳೆಯ ಆಹಾರವನ್ನು ತಿನ್ನುವುದರಿಂದ ಶಕ್ತಿವಂತನಾಗುತ್ತಾನೆ;
ಒಳ್ಳೆಯ ಪುಸ್ತಕ ಓದುವುದರಿಂದ ಜ್ಞಾನವಂತನಾಗುತ್ತಾನೆ.

—ಹಿತೋಪದೇಶ

# ಡಾ. ರಾಳ್ಳಪಲ್ಲಿ ಅನಂತಕೃಷ್ಣಶರ್ಮ : ಜೀವನ, ಸಾಧನೆ

ಆಂಧ್ರ ಕರ್ನಾಟಕಗಳ ಕೆಲವು ಸ್ಥಳಗಳಲ್ಲಿ ಈಗ ಆಸ್ಥಾನ ವಿದ್ವಾನ್ ಡಾ. ರಾಳ್ಳಪಲ್ಲಿ ಅನಂತಕೃಷ್ಣಶರ್ಮರ ಶತಮಾನೋತ್ಸವಗಳು ಜರುಗುತ್ತಿವೆ; ಅವರ ಜೀವನ ಸಾಧನೆಗಳನ್ನು ಕುರಿತ ಹಾಗೆ ಉಪನ್ಯಾಸಗಳೂ ಗೋಷ್ಠಿಗಳೂ ನಡೆಯುತ್ತಿವೆ. ಇದು ಸೂಕ್ತವಾದುದೇ ಸರಿ. ಒಂದು ಸುಸಂಸ್ಕೃತ, ವಿದ್ಯಾವಂತ ಸಮಾಜ ಅವಶ್ಯವಾಗಿ ಕೈಕೊಳ್ಳಬೇಕಾದ ಸಂಸ್ಮರಣ ಸಂದರ್ಭ, ಗೌರವ ಸಮರ್ಪಣೆಯ ಸದವಕಾಶ. ಋಷಿಋಣದ ತೀರುವಳಿ ಹೀಗೆಯೇ ಆಗತಕ್ಕದು.

ರಾಳ್ಳಪಲ್ಲಿಯವರ ನೆನಪು ಮಲ್ಲಿಗೆಯ ಪರಿಮಳದಂತೆ, ಚಂದನಚರ್ಚೆಯ ಸುಗಂಧದಂತೆ, ಬೆಳುದಿಂಗಳ ಹಾಲು ಬೆಳಕಿನಂತೆ. ಅವರನ್ನು ಬಲ್ಲವರು ಅವರ ಪರಿಶುಭ್ರವೂ ಸ್ಫಟಿಕನಿರ್ಮಲವೂ ಆದ ಸಾತ್ತ್ವಿಕ ವ್ಯಕ್ತಿತ್ವವನ್ನು ಈಗಲೂ ನೆನೆಯುತ್ತಾರೆ; ಅವರ ಪ್ರತಿಭೆ ಪಾಂಡಿತ್ಯಗಳ ಶಿಖರಸ್ಥಾನಗಳನ್ನು ಬೆರಗುಗಣ್ಣಲ್ಲಿ ಸ್ಮರಿಸುತ್ತಾರೆ.

ಶರ್ಮರು ತಮ್ಮ ಕಾಲದ ಮಹಾಮೇಧಾವಿಗಳಲ್ಲಿ ಒಬ್ಬರು; ತೇಜಸ್ವಿಗಳು, ವರ್ಚಸ್ವಿಗಳು; ಪ್ರಿಯವಾಕ್, ಮಧುರಭಾಷಿ; ಪರಮಸಂಭಾವಿತ, ನಿಗರ್ವ ಶಿರೋಮಣಿ; ಸ್ವಂತ ಬದುಕಿನ ಎಲ್ಲ ವಿವರಗಳಲ್ಲಿಯೂ ಪರಿಷ್ಕಾರವಂತರು, ಕಲಾಸಾಹಿತ್ಯಕ್ಷೇತ್ರಗಳಲ್ಲಿ ನವಾವಿಷ್ಕಾರವಿಚಕ್ಷಣರು; ಗಾಯನ ವಾದನಗಳಲ್ಲಿ ಕುಶಲಿಗಳು; ಪ್ರಗತಿಶೀಲ ಧೋರಣೆಗಳ, ಮುಕ್ತಮನಸ್ಸಿನ ಸಂಪ್ರದಾಯಸ್ಥರು; ಬಹುಜನರ ಸುಖ ಹಿತಗಳನ್ನು ಕೋರುವವರು; ಮಿತ್ರಗೋಷ್ಠಿ ವಿದ್ವಜ್ಜನಗೋಷ್ಠಿಗಳಲ್ಲಿ ಸದಾ ಸುಖಿಸುವವರು; ರಸಜ್ಞರು, ಸಂಯಮಶೀಲರು; ಏಕಕಾಲದಲ್ಲಿ ಶ್ರೇಷ್ಠಕವಿಗಳು, ಘನವಿದ್ವಾಂಸರು; ಸಾಹಿತ್ಯ ಸಂಗೀತಗಳಲ್ಲಿ ಯಾವ ಉನ್ನತಿ, ಯಾವ ಸಿದ್ಧಿ ರಸಿಕರಿಗೆ ಆದರ್ಶವಾಗಿರುವುದೋ, ಆ ಉನ್ನತಿ ಆ ಸಿದ್ಧಿಗಳನ್ನು ತಮ್ಮ ಬದುಕಿನಲ್ಲಿ ಸಾಧಿಸಿ ಕೃತಕೃತ್ಯರಾದವರು. ಒಂದು ಮಾತಿನಲ್ಲಿ ಹೇಳುವುದಾದರೆ, ಅವರು ಒಬ್ಬ ಸಮಗ್ರಸಾಧಕ, ಪೂರ್ಣ ವ್ಯಕ್ತಿ; ಪ್ರಸಾದ–ಮಾರ್ದವಗಳೂ ಮಾಧುರ್ಯ-ಗಾಂಭೀರ್ಯಗಳೂ ಸಮ್ಮಿಳನಗೊಂಡ ಭಾರತೀಮೂರ್ತಿ!

ಈಗ ಅಖಿಲಭಾರತ ವ್ಯಾಪ್ತಿಯಲ್ಲಿ ಅಧಿಕೃತವಾಗಿ ಬಳಕೆಯಲ್ಲಿರುವ ಆಕಾಶವಾಣಿ (ಎಐಆರ್) ಎಂಬ ಮಾತೂ ಮಕ್ಕಳ ಶಾಲೆಗಳ ಶಿಶುವಿಹಾರ ಎಂಬ ಮಾತೂ ಶರ್ಮರು ಟಂಕಿಸಿದವು ಎಂದು ಹಿರಿಯರು ಹೇಳುತ್ತಾರೆ.

ಶರ್ಮರ ಜನನ ೨೩-೧-೧೮೯೩ರಲ್ಲಿ; ಅವರ ಹುಟ್ಟೂರು ಆಂಧ್ರದ ಅನಂತಪುರ ಜಿಲ್ಲೆ ಕಲ್ಯಾಣದುರ್ಗ ತಾಲ್ಲೂಕು ರಾಳ್ಳಪಲ್ಲಿ; ತಂದೆ ತಾಯಿಗಳು ಕರ್ನಮಡಕಲ ಕೃಷ್ಣಮಾಚಾರ್ಯ-ಅಲಮೇಲು ಮಂಗಮ್ಮ. ಕೃಷ್ಣಮಾಚಾರ್ಯರ ಪೂರ್ವಜರು ರಾಯದುರ್ಗ ಸಂಸ್ಥಾನದ ಪಂಡಿತವಂಶಕ್ಕೆ ಸೇರಿದವರು; ಸಾಕಷ್ಟು ಸ್ಥಿತಿವಂತರು. ಆಚಾರ್ಯರ ದೊಡ್ಡ ಸಂಸಾರದಲ್ಲಿ ಮೊದಲ ಮಗ ಗೋಪಾಲ ಕೃಷ್ಣಮಾಚಾರ್ಯರು ಜ್ಯೋತಿಶ್ಶಾಸ್ತ್ರ ವಿಶಾರದರಾಗಿ ಖ್ಯಾತರಾದರೆ, ಎರಡನೆಯ ಮಗ ಅನಂತಕೃಷ್ಣಶರ್ಮರು ಸಂಗೀತ ಸಾಹಿತ್ಯ ವಿಶಾರದರಾಗಿ ಪ್ರಸಿದ್ಧ ರಾದರು.

ಹಿರಿಯರು ಗುರುತಿಸಿದ್ದ ಜನ್ಮನಕ್ಷತ್ರಾದಿಗಳನ್ನು ಹಿಡಿದು ಅಣ್ಣ ತಮ್ಮನ ಜಾತಕವನ್ನು ಬರೆದು, ಹೀಗೆ ಜಾತಕನ ಗುಣಲಕ್ಷಣಗಳನ್ನು ಗುರುತಿಸಿವರು: "ಆಕಾರಸೌಷ್ಠವ, ಒಳ್ಳೆಯ ಬಣ್ಣ, ಕಾರ್ಯಪಟುತೆ, ಸುಭಗತೆ, ಸ್ವಾತಂತ್ರ್ಯ ಪ್ರೀತಿ, ದೃಢಾಭಿಪ್ರಾಯ, ನ್ಯಾಯದೃಷ್ಟಿ, ಸ್ವಧರ್ಮಪಾಲನ ಶ್ರದ್ಧೆ, ಆದರ್ಶ-ಪರತೆ, ಸ್ವಾಭಿಪ್ರಾಯಸಾಧುತ್ವದ ಮೇಲೆ ಪ್ರಬಲವಿಶ್ವಾಸ, ದೃಢತೆ, ವಿಶಾಲ ಕೀರ್ತಿ, ಸತ್ಸಂತಾನ ಭಾಗ್ಯ, ಸುಶಿಕ್ಷಿತ ಜೀವನ, ಸಂಗೀತ ಸಾಹಿತ್ಯಗಳಲ್ಲಿ ಜನ್ಮ ಸಿದ್ಧವಾದ ಅಭಿರುಚಿ, ಉನ್ನತ ವಾದಶಕ್ತಿ, ರಚನೆಗಳಲ್ಲಿ ತೀಕ್ಷ್ಣಧಾರೆ, ರಸಮಾಧುರ್ಯ, ರಸಿಕ ಜೀವನ."

ಶರ್ಮರ ಬಾಲ್ಯವಿದ್ಯಾಭ್ಯಾಸ ವಿಚಕ್ಷಣೆಯ ಶಿಕ್ಷಕರಾದ ತಂದೆಯವರಿಂದಲೇ ಆಯಿತು. ಹದಿಮೂರನೆಯ ವಯಸ್ಸಿನವರೆಗೆ ಸಂಸ್ಕೃತ, ತೆಲುಗು ಭಾಷೆಗಳಲ್ಲಿ ಕಾವ್ಯ ನಾಟಕಾದಿಗಳ ಅಭ್ಯಾಸವಾಯಿತು. ತಾಯಿ ಸಂಗೀತದಲ್ಲಿ ಶಿಕ್ಷಣ ನೀಡಿದರು. ಬೇರೆ ಬೇರೆ ಭಾಷೆಗಳ ದೇವರ ನಾಮಗಳನ್ನು ಶರ್ಮರು ತಾಯಿಯವ ರಿಂದ ಕಲಿತು ಕಂಠಸ್ಥ ಮಾಡಿಕೊಂಡರು. ಫಲವಾಗಿ, ಸ್ವಸ್ಥಳದ ಭಜನಕೂಟ ಗಳಲ್ಲಿ ಅವರು ಭಾಗವಹಿಸುವುದು ಸಾಮಾನ್ಯವಾಯಿತು. ಬಂಧುವೊಬ್ಬರಿಂದ ಪಿಟೀಲವಾದನದ ಅಭ್ಯಾಸವೂ ಆಯಿತು.

ಈಗ ಶರ್ಮರು ರಾಳ್ಳಪಲ್ಲಿಯಲ್ಲಿ ಹೆಚ್ಚು ಓದಲು ಅವಕಾಶವಿಲ್ಲವೆಂದು ದತ್ತುತಾಯಿ ಲಕ್ಷ್ಮಮ್ಮನವರೊಂದಿಗೆ ಮೈಸೂರಿಗೆ ಬಂದರು (೧೯೦೬); ಸ್ವಲ್ಪ ದಿನ ಬಂಧುಗಳ ಮನೆಯಲ್ಲಿದ್ದು, ಬಳಿಕ ಭೋಜನ ವಸತಿಗಳ ಉಚಿತ ವ್ಯವಸ್ಥೆಯುಂಟು ಎಂಬ ಕಾರಣದಿಂದ ಪರಕಾಲಮಠವನ್ನು ಬಂದು ಸೇರಿದರು. ಒಂದೂವರೆ ವರ್ಷ ಸಜ್ಜಯಂ ತಾತಾಚಾರ್ಯರಲ್ಲಿ ಸಂಸ್ಕೃತಕಾವ್ಯಗಳ ಅಭ್ಯಾಸ ಸಾಗಿತು; ಮುಂದೆ ಚಾಮರಾಜೇಂದ್ರ ಸಂಸ್ಕೃತ ಪಾಠಶಾಲೆ ಸೇರಿ, ಅಲ್ಲಿ ಸಂಸ್ಕೃತ

ಪ್ರಾಕೃತ ವ್ಯಾಕರಣಗಳ, ಅಲಂಕಾರಗಳ ಹಾಗೂ ಶಾಕುಂತಲಾದಿ ನಾಟಕಗಳ ವ್ಯಾಸಂಗವನ್ನು ಕ್ರಮಬದ್ಧವಾಗಿ ನಡಸಿದರು.

ಅಂದು ಪರಕಾಲಮಠದ ಅಧ್ಯಕ್ಷರು ಕೃಷ್ಣ ಬ್ರಹ್ಮತಂತ್ರರು. ಮಹಾಕವಿಗಳೆಂದೂ ಪ್ರಕಾಂಡಪಂಡಿತರೆಂದೂ ಅವರು ಆ ದಿನಗಳಲ್ಲಿ ಪ್ರಸಿದ್ಧರಾಗಿದ್ದರು. ಒಮ್ಮೆ ಶ್ರಾವಣಮಾಸದ ವಿದ್ವತ್ ಸಭೆಯಲ್ಲಿ ಶಾಸ್ತ್ರವಿಚಾರ ಚರ್ಚೆಯ ಬಳಿಕ, ಶರ್ಮರು ತಾವು ಆಕಸ್ಮಿಕವಾಗಿ ಬರೆದು ತಂದಿದ್ದ ನಾಲ್ಕು ಸಂಸ್ಕೃತ ವೃತ್ತಗಳನ್ನು ಸಭೆಯಲ್ಲಿ ನಿವೇದಿಸಿದರು. ಸ್ವಾಮಿಗಳಿಗೆ ಅದು ಮೆಚ್ಚಾಯಿತು. ಆಗ ಅವರು 'ಅಲಂಕಾರ ಮಣಿಹಾರ' ಎಂಬ ಗ್ರಂಥದ ರಚನೆಯಲ್ಲಿ ತೊಡಗಿದ್ದು, ವೃದ್ಧಾಪ್ಯದ ದೆಸೆಯಿಂದ ತಮಗೆ ಅಗತ್ಯವಾಗಿದ್ದ ಗ್ರಂಥಭಾಗಗಳನ್ನು ತಮಗಾಗಿ ಓದಿ ಹೇಳಲು ಶರ್ಮರನ್ನು ಕೋರಿದರು; ಅವರ ವಿಚಾರ ವಿಮರ್ಶೆಗಳ ಫಲ ಆ ಗ್ರಂಥದ ಉತ್ತರಾರ್ಧಕ್ಕೆ ಇದರಿಂದ ದೊರೆಯುವಂತಾಯಿತು. ಯಾರಾದರೂ ಸ್ವಾಮಿಗಳ ಸನ್ನಿಧಿಯಲ್ಲಿ ಒಂದು ಶ್ಲೋಕವನ್ನೋ ವೃತ್ತವನ್ನೋ ಬಿನ್ನವಿಸಿದರೆ, ಅದನ್ನು ಏಕಸಂಧಿಗ್ರಾಹಿಯಾಗಿ ಶರ್ಮರು ತಮ್ಮಲ್ಲಿ ಹಿಡಿದಿಟ್ಟುಕೊಳ್ಳುತ್ತಿದ್ದು, ಬೇಕೆನ್ನಿಸಿದಾಗ ಸ್ವಾಮಿಗಳಿಗೆ ಅದನ್ನು ನಿವೇದಿಸುತ್ತಿದ್ದರಂತೆ.

ಶರ್ಮರ ಸಂಸ್ಕೃತವ್ಯಾಸಂಗ ಆ ಕಾಲದ ಪ್ರಸಿದ್ಧ ಕವಿ–ವಿದ್ವಾಂಸರಾಗಿದ್ದ ಚಾಮರಾಜನಗರದ ರಾಮಶಾಸ್ತ್ರಿಗಳಲ್ಲಿ ಮತ್ತೆ ಮುನ್ನಡೆಯಿತು. ಶಾಸ್ತ್ರಿಗಳು ಸ್ವಯಂ ಕವಿತ್ವಶಕ್ತಿಯುಳ್ಳ ರಸಜ್ಞ ವಿದ್ವಾಂಸರು; ಆ ಕಾಲದ ಪ್ರಖ್ಯಾತ ವ್ಯಾಕರಣ ವಿದ್ವಾಂಸರಾಗಿದ್ದ ಚಾಮರಾಜನಗರದ ಶ್ರೀಕಂಠಶಾಸ್ತ್ರಿಗಳ ತಮ್ಮಂದಿರು; ಅಪೂರ್ವ ಚಿತ್ರಕಾವ್ಯವಾದ 'ಸೀತಾರಾವಣ ಸಂವಾದಝುರಿ'ಯ ಕರ್ತೃಗಳು. ಇವರಲ್ಲಿ ಶರ್ಮರಿಗೆ ಕಾಲಿದಾಸಾದಿ ಕವಿಗಳ ಕೆಲವು ನಾಟಕಗಳೂ ಕಾದಂಬರಿಯ ಕೆಲಭಾಗಗಳೂ ಪಾಠವಾದುವು.

ಹೀಗೆ ಸಂಸ್ಕೃತ ಸಾಹಿತ್ಯದಲ್ಲಿ ಪ್ರಭುತ್ವಗಳಿಸಿದ ಅನಂತಕೃಷ್ಣಶರ್ಮರು ತೆಲುಗು ಭಾಷೆ ಸಾಹಿತ್ಯಗಳ ಕಡೆಗೆ ಹೊರಳಿದ್ದು, ಒಂದು ಸ್ವಾರಸ್ಯದ ಸಂಗತಿ. ಬಂಧುಗಳೊಬ್ಬರ ಮೂಲಕ ಅವರಿಗೆ ಆ ದಿನಗಳಲ್ಲಿ ಮೈಸೂರು ಮಹಾರಾಜ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದ ಸಿ. ಆರ್. ರೆಡ್ಡಿಯವರ ಪರಿಚಯಭಾಗ್ಯ ಲಭಿಸಿತು. ವಯಸ್ಸು ಪದವಿ ಪ್ರಸಿದ್ಧಿ ಮೊದಲಾದವುಗಳಲ್ಲಿ ಹಿರಿಯರಾಗಿದ್ದು ಸಹ, ರೆಡ್ಡಿಯವರು ಶರ್ಮರನ್ನು ಸ್ನೇಹಿತರಂತೆ, ಸಮಾನಸ್ಕಂಧರಂತೆ ಕಂಡರು. ಅವರೊಂದಿಗೆ ತಮಗೆ ಇಷ್ಟವಾದ ತೆಲುಗು ಪ್ರಾಚೀನಕಾವ್ಯಗಳ ವಾಚನ

ವ್ಯಾಖ್ಯಾನಗಳಲ್ಲಿ ಸಂತೋಷಿಸಿದರು. ಪಾಶ್ಚಾತ್ಯ ಜೀವನವಿಧಾನ, ವಿಶ್ವವಿಶಾಲ ಚಿಂತನಕ್ರಮ, ಸಾಹಿತ್ಯಸಂಪ್ರದಾಯಗಳನ್ನು ಬಲ್ಲವರಾಗಿದ್ದ ರೆಡ್ಡಿಯವರ ಸ್ನೇಹ ಸಂಪರ್ಕಗಳಿಂದ ಶರ್ಮರ ಬದುಕಿನಲ್ಲಿ ಘನಪರಿಣಾಮವಾಯಿತು. "ಅವರ ಸಹವಾಸದಿಂದಾಗಿ ನನಗೆ ಆಧುನಿಕ ಪ್ರಪಂಚದ ಬಾಗಿಲುಗಳು ತೆರೆದ ಆಹ್ವಾನಿಸಿದುವು" ಎಂದು ಶರ್ಮರೇ ಹೇಳಿಕೊಂಡಿದ್ದಾರೆ. ಇದರಿಂದ ತಮ್ಮ ಮುಖ್ಯಕಾರ್ಯಕ್ಷೇತ್ರವಾದ ಭಾರತೀಯ ಸಾಹಿತ್ಯಶಾಸ್ತ್ರದ ಸಿದ್ಧಾಂತಗಳನ್ನು ಅವರು ಪೂರ್ತಿ ನಿರಾಕರಿಸದೆ, ಸಮನ್ವಯಮಾರ್ಗ ಹಿಡಿಯುವುದು ಸಾಧ್ಯ ವಾಯಿತು.

ಇದಾದುದು ೧೯೧೦ ರ ಸುಮಾರಿನಲ್ಲಿ. ಆಗ ಶರ್ಮರಿಗೆ ೧೬–೧೭ ರ ಹರಯ. ಸ್ವಲ್ಪಕಾಲದಲ್ಲೇ, ರೆಡ್ಡಿಯವರು ಮಹಾರಾಜ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಅವಧಿಯಲ್ಲಿ, ಅಲ್ಲಿ ಹೊಸದಾಗಿ ತೆಲುಗುಶಾಖೆ ತೆರೆದು, ಶರ್ಮರು ರೆಡ್ಡಿಯವರ ಆಹ್ವಾನವನ್ನು ಒಪ್ಪಿ ತೆಲುಗುಪಂಡಿತರೆಂದು ನೇಮಕಗೊಂಡರು. ಶಾಲೆ ಕಾಲೇಜುಗಳ ಯಾವ ಪರೀಕ್ಷೆಗಳನ್ನೂ ಪಾಸು ಮಾಡಿರದ ಶರ್ಮರು ಹೀಗೆ ಅಧ್ಯಾಪಕರಾದುದು ಈ ಕಾಲಕ್ಕೆ ಒಂದು ಸೋಜಿಗವೇ ಸರಿ (ಜುಲೈ ೧೯೧೨). ಪಂಡಿತರಾಗಿ ಸೇರಿದ ಶರ್ಮರು ಪ್ರಾಧ್ಯಾಪಕರಂತೆ ಪಾಠಪ್ರವಚನಗಳನ್ನು ಮಾಡಿ ದರು ; ಮನ್ನಣೆ ಮರ್ಯಾದೆಗಳನ್ನು ಗಳಿಸಿದರು. ಇಲ್ಲಿಂದ ತಮ್ಮ ಹುದ್ದೆಯಲ್ಲಿ ಸುಮಾರು ೩೮ ವರ್ಷಕಾಲ (೧೯೧೯–೫೦) ಇದ್ದರು.

ಈ ವೇಳೆಗೆ ಶರ್ಮರು 'ತಾರಾಬಾಯಿ' (೧೯೧೧) ಮತ್ತು 'ಮೀರಾಬಾಯಿ' (೧೯೧೩) ಎಂಬೆರಡು ಖಂಡಕಾವ್ಯಗಳನ್ನು ತೆಲುಗಿನಲ್ಲಿ ರಚಿಸಿದರು ; ಇವನ್ನು ಓದಿಸಿ ಕೇಳಿದ ರೆಡ್ಡಿಯವರು ಮೆಚ್ಚಿ ಪ್ರೋತ್ಸಾಹಿಸಲಾಗಿ, ಇವು ಕ್ರಮವಾಗಿ ಕಾಕಿನಾಡದ 'ಸರಸ್ವತಿ' ಪತ್ರಿಕೆಯಲ್ಲೂ ರಾಜಮಂಡ್ರಿಯ 'ಮಾನವಸೇವಾ' ಪತ್ರಿಕೆಯಲ್ಲೂ ಪ್ರಕಟವಾದುವು. 'ಲೀಲಾದೇವಿ' ಎಂಬ ಒಂದು ಕಾದಂಬರಿ ಯನ್ನೂ ಅವರು ಬರೆದರೆಂದು (೧೯೧೩) ತಿಳಿದಿದೆ.

ಶರ್ಮರು ಒಪ್ಪ ಓರಣಗಳಿಗೆ, ಉತ್ಕೃಷ್ಟತೆಗೆ ಹೆಸರಾದವರು. ಹೀಗಾಗಿ ಅವರು ವೆಂಕಟಾಧ್ವರಿಯ 'ಸುಭಾಷಿತ ಕೌಸ್ತುಭ'ದ ನೂರು ಪದ್ಯಗಳನ್ನು ತೆಲುಗಿಗೆ ಅನುವಾದ ಮಾಡಿದರೂ, ಭಾಸನ 'ಸ್ವಪ್ನ ವಾಸವದತ್ತ' ವನ್ನು ತೆಲುಗಿಗೆ ಪರಿವರ್ತಿಸಿದರೂ, ತಮಗೆ ತೃಪ್ತಿ ನೀಡಲಿಲ್ಲವೆಂದು ಅವನ್ನು ಹರಿದು ಹಾಕಿದರಂತೆ. ಕಾಳಿದಾಸನ 'ರಘುವಂಶ'ದ ತೆಲುಗು ಅನುವಾದದ (೧೯೧೨) ಪ್ರಕಟನೆಗೆ ರೆಡ್ಡಿಯವರು ದ್ರವ್ಯಸಹಾಯ ಮಾಡಲು ಸಿದ್ಧರಿದ್ದರೂ ಅನುವಾದ

ದಲ್ಲಿ ಏನೋ ಅತೃಪ್ತಿಯುಂಟಾಗಿ ಪ್ರಕಟಿಸಲೇ ಇಲ್ಲ. ಕೆಲವು ಲೇಖನಗಳ ಕಥೆಯೂ ಹೀಗೆಯೇ. ಆದರೆ ಇವೆಲ್ಲ ಪ್ರಕಟವಾಗಿದ್ದರೆ, ಅವುಗಳ ದರ್ಜೆಯೇನೂ ಕಡಮೆಯಿರುತ್ತಿರಲಿಲ್ಲ; ತೆಲುಗು ಸಾಹಿತ್ಯದ ಶ್ರೀಮಂತಿಕೆ ಹೆಚ್ಚುತ್ತಿದ್ದಿತು. ಈ ಅವಧಿಯಲ್ಲೇ ರೆಡ್ಡಿಯವರ ಜನಪ್ರಿಯ 'ಕವಿತ್ವತತ್ತ್ವವಿಚಾರ', 'ಅರ್ಥ ಶಾಸ್ತ್ರ' ಎಂಬ ಗ್ರಂಥಗಳನ್ನು ಶರ್ಮರು ಪರಿಶೀಲಿಸಿ ಸಲಹೆ ಸೂಚನೆಗಳನ್ನು ನೀಡಿದರು.

ಶರ್ಮರು ಮೈಸೂರು ಸಂಸ್ಥಾನದ ಆಸ್ಥಾನವಿದ್ವಾಂಸರಾಗಿದ್ದರು; ಮಾಸಾಶನವೂ ಬರುತ್ತಿದ್ದಿತು. ಈ ಸಂಬಂಧವೂ ಕಾರಣವಾಗಿ, ಚಂಪ್ರಕವಿಯ 'ಶ್ರೀಕೃಷ್ಣಭೂಪಾಲೀಯ' ಎಂಬ ತೆಲುಗಿನ ಸಮಗ್ರ ಲಕ್ಷಣಗ್ರಂಥವನ್ನು ಪರಿಷ್ಕರಿಸಿ, ಪುಷ್ಟ ಪೀಠಿಕೆಯೊಂದಿಗೆ ಪ್ರಕಟಿಸಿದರು (೧೯೧೪); ಮಹಾರಾಜರೇ ವ್ಯವಸ್ಥೆಗೊಳಿಸಿದ ಕವಿತ್ವಸ್ಪರ್ಧೆಯೊಂದರಲ್ಲಿ ಭಾಗವಹಿಸಿ, ೪೦ ಮಂದಿ ಕವಿ ಪಂಡಿತರ ನಡುವೆ ಪ್ರಥಮ ಪುರಸ್ಕಾರವನ್ನು ಗಳಿಸಿ, 'ಶ್ರೀಮಹೀಶೂರ ರಾಜ್ಯಾಭ್ಯುದಯಾದರ್ಶಃ' ಎಂಬ ಸಂಸ್ಕೃತ ಚಂಪೂಪ್ರಬಂಧದ ಕರ್ತೃಗಳೆನಿಸಿ ದರು. ಆ ಮೊದಲೇ ಇನ್ನೊಂದು ಆಶುಕವಿತ್ವ ಸ್ಪರ್ಧೆಯಲ್ಲಿಯೂ ದ್ವಿತೀಯ ಬಹುಮಾನ ಗಳಿಸಿದ್ದರು; ಆಗ ಪರೀಕ್ಷಕರು ಪ್ರಸಿದ್ಧರಾದ ಎಂ. ಹಿರಿಯಣ್ಣ, ಮಂಡಿಕಲ್ ರಾಮಶಾಸ್ತ್ರಿ ಮೊದಲಾದವರು. ಶರ್ಮರ ಪ್ರಶಸ್ತಿಗಳಿಸಿದ ಸಂಸ್ಕೃತ ಚಂಪೂಪ್ರಬಂಧ ಏಪ್ರಿಲ್ ೧೯೩೫ ರಲ್ಲಿ ನಾಗರಿಲಿಪಿಯಲ್ಲಿ ಮುದ್ರಿತ ವಾಯಿತು; ಪ್ರಭುಗಳ ಮೂಲಕ ೧೫೦ ರೂ. ನಗದು, ಶಾಲುಜೋಡಿ ಸಹ ಲಭಿಸಿದುವು. ೧೯೩೭ ರಲ್ಲಿ 'ಭಾರ್ಗವೀಪಂಚಪಂಕ್ತಿ' ಎಂಬ ಅವರ ತೆಲುಗು ಪದ್ಯಮಾಲಿಕೆಯೊಂದು ಅನಂತಪುರದಿಂದ ಪ್ರಕಟವಾಯಿತು. ಹಣಕ್ಕಿಂತ ಮರ್ಯಾದೆಯ ಬದುಕನ್ನು ದಯಪಾಲಿಸೆಂದು ದೇವಿಯನ್ನು ಇಲ್ಲಿ ಶರ್ಮರು ಪ್ರಾರ್ಥಿಸುವುದು ಅವರ ಜೀವನದೃಷ್ಟಿಯನ್ನು ಬಿಂಬಿಸುತ್ತದೆ. ಹೀಗೆಯೇ ಭಾರತಿ, ಆಂಧ್ರಪತ್ರಿಕೆ ಮೊದಲಾದೆಡೆ ಅವರ ನಾಲ್ಕಾರು ಬಿಡಿಕವಿತೆಗಳು ಬಂದಿವೆ.

ಶರ್ಮರು ಕವಿಗಳು, ಗ್ರಂಥಪರಿಶೋಧಕರು, ಸಾಹಿತ್ಯಸಿದ್ಧಾಂತವೇತ್ತರು ಎಂದು ಪ್ರಸಿದ್ಧರಾಗಿರುವಂತೆಯೇ ಶ್ರೇಷ್ಠ ವಿಮರ್ಶಕರೆಂದು ಸಹ ಪ್ರಸಿದ್ಧ ರಾಗಿದ್ದಾರೆ. ಇದಕ್ಕೆ ಅವರು ಆಂಧ್ರ ವಿಶ್ವವಿದ್ಯಾನಿಲಯದ ಆಹ್ವಾನದಂತೆ ಅನಂತಪುರದ ಈಗಿನ ಸರ್ಕಾರಿ ಕಾಲೇಜಿನಲ್ಲಿ ನೀಡಿದ, ವೇಮನನನ್ನು ಕುರಿತ, ಏಳು ಉಪನ್ಯಾಸಗಳನ್ನು ಎತ್ತಿ ತೋರಬಹುದು (೧೯೨೮). ವಿಶ್ವವಿದ್ಯಾನಿಲಯದ

ಪ್ರಕಟನೆಯನ್ನು ಮಹಾರಾಜ ಕಾಲೇಜಿನ ಸಂಸ್ಕೃತ ಪ್ರಾಧ್ಯಾಪಕ ಸಿ. ಆರ್. ನರಸಿಂಹಶಾಸ್ತ್ರಿಗಳು (ಚಾಮರಾಜನಗರ ರಾಮಶಾಸ್ತ್ರಿಗಳ ಮಕ್ಕಳು) ಶರ್ಮರ ಗಮನಕ್ಕೆ ತಂದರು; ರೆಡ್ಡಿಯವರು ಒತ್ತಾಯ ಮಾಡಿದರು, ಸಲಹೆ ಸೂಚನೆಗಳನ್ನೂ ನೀಡಿದರು. ಹೀಗಾಗಿ ತೆಲುಗು ಸಾಹಿತ್ಯದ ಒಂದು ಅನನ್ಯ ವಿಮರ್ಶ ಕೃತಿ ಎನಿಸಿದ 'ವೇಮನ' (೧೯೨೯) ಬೆಳಕು ಕಂಡಿತು. ಈ ಉಪನ್ಯಾಸಗಳ ದೃಷ್ಟಿ ಧೋರಣೆಗಳು ನವೀನವಾದುವು; ಸೂಕ್ಷ್ಮವೂ ರಸವಂತವೂ ಆದುವು. ಈಚೆಗೆ ಇದರ ಕನ್ನಡ ಅನುವಾದ 'ಪ್ರಬುದ್ಧ ಕರ್ಣಾಟಕ'ದಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿದೆ. ಈ ಉಪನ್ಯಾಸಗಳನ್ನು ಕೇಳಿದ ಸಿ. ನಾರಾಯಣರಾವು ಶರ್ಮರ ಮೇಲೆ ಅಭಿನಂದನ ಕವಿತೆಯನ್ನೇ ಕಟ್ಟಿ ಮಿತ್ರಗೋಷ್ಠಿಯಲ್ಲಿ ವಾಚಿಸಿದರು. ಅವರನ್ನು ರಾಳ್ಳಪಲ್ಲಿ (=ಕಲ್ಲಹಳ್ಳಿ) ಯಲ್ಲಿ ಹುಟ್ಟಿದ ಅಮೂಲ್ಯವಾದ ವಜ್ರವೆಂದು ಕೀರ್ತಿಸಿದ್ದಾರೆ.

ಸ್ವಾರಸ್ಯವೆಂದರೆ, "ಎರಡು ಪಕ್ಕಗಳಲ್ಲಿಯೂ ಮೂರನೆಯಾತನಿಗೆ ಅವಕಾಶವಿಲ್ಲದ ಮುಗ್ಧ ಮಧುರ ಸಂಬಂಧ ನಮ್ಮದು" ಎಂಬುದಾಗಿ ಯಾರನ್ನು ಕುರಿತು ಹೇಳಿದ್ದರೋ, ಆ ರೆಡ್ಡಿಯವರ ಅಭಿಪ್ರಾಯವನ್ನೇ ವಿರೋಧಿಸುವಂತಾದ ಒಂದು ಸಂದರ್ಭ ಒಮ್ಮೆ ಒದಗಿತು. ವೇಟೂರಿ ಪ್ರಭಾಕರಶಾಸ್ತ್ರಿಗಳು ಪರಿಷ್ಕರಿಸಿ, ಸಿಂಗಳಿ ಲಕ್ಷ್ಮೀಕಾಂತಂ ಮತ್ತು ಸಿ. ಆರ್. ರೆಡ್ಡಿಯವರ ಪೀಠಿಕೆಗಳೊಂದಿಗೆ ಪ್ರಕಟವಾದ 'ರಂಗನಾಥ ರಾಮಾಯಣ'ವನ್ನು ಭಾರತಿಗೆ ವಿಮರ್ಶಿಸಲು ಇತರ ವಿದ್ವಾಂಸರು ಯಾರೂ ಒಪ್ಪದಿದ್ದಾಗ, ಶರ್ಮರು ಒಪ್ಪಿಕೊಂಡಿದ್ದಲ್ಲದೆ ರೆಡ್ಡಿಯವರಿಗೆ ಕಸಿವಿಸಿಯಾಗುವಂತೆ ವಿಮರ್ಶೆಯನ್ನು ಸ್ಪಷ್ಟೋಕ್ತಿಗಳಲ್ಲಿ ಬರೆದರು; ಅವರ ಸಿದ್ಧಾಂತಗಳನ್ನು ಮೃದುವಾಗಿ ಖಂಡಿಸಿದರು. ಇದು ಆ ದಿನಗಳಲ್ಲಿ ಒಂದು ಕೋಲಾಹಲವನ್ನೇ ಉಂಟುಮಾಡಿತು. ಈ ಮತಭೇದವೇನಿದ್ದರೂ, ರೆಡ್ಡಿಯವರ ಬಗೆಗೆ ಶರ್ಮರ ಭಕ್ತಿಗೌರವಗಳಿಗೆ ಚ್ಯುತಿ ಬರಲಿಲ್ಲ; ತಮ್ಮ 'ಗಾಥಾಸಪ್ತಶತೀಸಾರ'ವನ್ನು ಅವರಿಗೆ ಅಂಕಿತ ಮಾಡಿದರು (೧೯೩೨).

ಹೀಗೆ ಶರ್ಮರು ಸ್ವಾಭಿಪ್ರಾಯನಿವೇದನೆಯಲ್ಲಿ ನಿಷ್ಠುರರಾಗಿದ್ದರೂ, ಅವರ ವಿಮರ್ಶೆ ಗುಣಗ್ರಾಹಿಯಾದುದು, ಸಯುಕ್ತಿಕವಾದುದು, ಪಕ್ಷಪಾತವಿರಹಿತವಾದುದು. ಈ ವಿಮರ್ಶೆಗಳಲ್ಲಿ ಕೆಲವು 'ಸಾರಸ್ವತೋಪನ್ಯಾಸಮುಲು' (೧೯೩೧) ಮತ್ತು 'ಸಾರಸ್ವತಾಲೋಕಮು' (೧೯೫೪) ಎಂಬ ಎರಡು ಸಂಗ್ರಹಗಳಲ್ಲಿಯೂ ಈಚೆಗೆ ಪ್ರಕಟವಾದಂತೆ ತೀಯುವ ಪೀಠಿಕೆಗಳ ಸಂಕಲನದಲ್ಲಿಯೂ ಬಂದಿವೆ. ಇವುಗಳಲ್ಲಿ ಸಾರಸ್ವತೋಪನ್ಯಾಸಗಳ ಎರಡು ಪ್ರಬಂಧಗಳನ್ನು ಕೆ. ವೆಂಕಟ

ರಾಮಪ್ಪನವರು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿದ್ದಾರೆ (೧೯೩೭). ಭಾರತಿ ಪತ್ರಿಕೆಯಲ್ಲಿ ಬಂದ 'ನಾಟಕೋಪನ್ಯಾಸಮುಲು' (೧೯೩೫) ಪುಸ್ತಕವಾಗಿಯೂ ವಿತರಣೆಯಾಯಿತು.

ಶರ್ಮರು ತಮ್ಮ ಕಾಲದ ವಿರಳ ಪ್ರಾಕೃತಭಾಷಾವಿದ್ವಾಂಸರಲ್ಲಿ ಒಬ್ಬರು. ಶಾಲಿವಾಹನ ಸಂಕಲಿತವಾದ 'ಗಾಥಾಸಪ್ತಶತೀಸಾರ'ವನ್ನು ೧೯೩೧ರಲ್ಲಿ ಒನ್ಮೆಯೂ (೩೯೫ ಗಾಥೆಗಳು), ವೀಬರ್ ಪ್ರಕಟಿಸಿದ ಪ್ರತಿ ದೊರೆತ ಮೇಲೆ ಬೆಳಸಿದ ಆವೃತ್ತಿಯಾಗಿ ಇನ್ನೊಮ್ಮೆಯೂ (೧೯೬೪) ತೆಲುಗಿಗೆ ಅನುವಾದಿಸಿ ಪ್ರಕಟಿಸಿದರು. ಸರಸತೆ, ಸರಳತೆ, ಸ್ಪಷ್ಟತೆ ಈ ಅನುವಾದದ ಗುಣವೆಂದು ವಿದ್ವಾಂಸರು ಹೇಳುವರು.

ಶರ್ಮರು ಮೈಸೂರು ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದಾಗ, ಕುವೆಂಪು, ವೆಂಕಟರಾಮಪ್ಪ, ದೇಜಗೌ, ಜಿ. ಪಿ. ರಾಜರತ್ನಂ, ಎಂ. ವಿ. ಸೀತಾರಾಮಯ್ಯ ಈ ಕೆಲವರು ಅವರ ವಿದ್ಯಾರ್ಥಿಗಳಾಗಿದ್ದರು. ಅಂದಿನ ಎಲ್ಲ ತೆಲುಗು ವಿದ್ವಾಂಸರ ಸಂಬಂಧ ಸಂಪರ್ಕಗಳೂ ಅವರಿಗಿದ್ದುವು. ದೀಪಾಲ ಪಿಚ್ಚಯ್ಯಶಾಸ್ತ್ರಿ, ಸಿ. ನಾರಾಯಣರಾವು, ಪುಟ್ಟಪರ್ತಿ ನಾರಾಯಣಾಚಾರ್ಯ, ಸಾಳ್ವ ಕೃಷ್ಣಮೂರ್ತಿ, ದಿವಾಕರ್ಲ ವೆಂಕಟಾವಧಾನಿ ಈ ಮೊದಲಾದವರು ಅವರ ಬಗೆಗೆ ತುಂಬುಪ್ರಶಂಸೆ ವ್ಯಕ್ತಪಡಿಸಿದ್ದಾರೆ, ಕರ್ನಾಟಕದಲ್ಲಿ ಡಿ.ವಿ.ಜಿ., ಮಾಸ್ತಿ, ಎಸ್. ವಿ. ರಂಗಣ್ಣ, ಪು.ತಿ.ನ, ವಿ. ಸೀತಾರಾಮಯ್ಯ ಮೊದಲಾದವರು ತಮ್ಮ ಆದರ ಗೌರವಗಳನ್ನು ಪ್ರಕಟಿಸಿದ್ದಾರೆ. ಈ ಪ್ರಶಂಸೆ ಆದರಣೆಗಳಲ್ಲಿ ಯಾವ ಅರೆಕೊರೆಗಳೂ ಕಾಣಿಸುವುದಿಲ್ಲ.

ಶರ್ಮರು ೧೯೫೦ರಲ್ಲಿ ನಿವೃತ್ತರಾದ ಬಳಿಕ, ತಿರುಪತಿಯ ಪ್ರಾಚ್ಯ ಸಂಶೋಧನ ಶಾಖೆಯಲ್ಲಿ ಸಂಗೀತವಾಙ್ಮಯ ಪರಿಶೋಧಕರಾಗಿ ಕೆಲಸಮಾಡಲು ಆಹ್ವಾನಿತರಾದರು. ಆ ವೇಳೆಗಾಗಲೇ ಮೊದಲಾಗಿದ್ದ ತಾಳ್ಳಪಾಕ ಅನ್ನಮಾಚಾರ್ಯರ ಕೀರ್ತನೆಗಳ ಪರಿಷ್ಕರಣಕಾರ್ಯವನ್ನು ಮುನ್ನಡಸಿ, ಉಳಿದ ಸಂಪುಟಗಳನ್ನು ಹೊರತಂದರು: ಸ್ವರಸಂಯೋಜನೆ ಮಾಡಿದರು: ಪೀಠಿಕೆಗಳನ್ನು ಬರೆದರು. ಅವರ ಸಂಗೀತ ಸಾಹಿತ್ಯಗಳ ಜ್ಞಾನ ಇಲ್ಲಿ ಪೂರ್ಣವಾಗಿ ಫಲ ನೀಡಿತು. ಅವರ ವಿಸ್ತೃತ್ ಕಾರ್ಯಗಳಲ್ಲಿ ಇದು ಬಹು ಮುಖ್ಯವಾದುದು (೧೯೫೧-೬೭). ಹೀಗೆಯೇ ಶ್ರೀಮದಾಂಧ್ರ ಮಹಾಭಾಗವತ (೧೯೫೩) ಪರಿಷ್ಕರಣ ಬಂದಿತು; ೧೨ನೆಯ ಶ.ದ. ಪೂರ್ವಾರ್ಧದಲ್ಲಿದ್ದ ಜಾಯಪನೆಂಬ ಕವಿಯ ನಾಟ್ಯಶಾಸ್ತ್ರ ಗ್ರಂಥವಾದ 'ನೃತ್ತರತ್ನಾವಳಿ'ಯನ್ನು ಸಮೂಲವಾಗಿ ತೆಲುಗಿಗೆ ಅನುವಾದಿಸಿದ

ಶ್ರಮಸಾಧ್ಯವಾದ ಕಾರ್ಯವೂ ಆಯಿತು. ಸುಂದರ ಪಾಂಡ್ಯನ 'ಆರ್ಯಾ' ಎಂಬ ಪ್ರಾಚೀನ ಸಂಸ್ಕೃತ ಸುಭಾಷಿತ ಗ್ರಂಥವನ್ನು ದೇಸಿ ಛಂದಸ್ಸುಗಳು ಹಾಗೂ ಕಂದಪದ್ಯಗಳಲ್ಲಿ ತೆಲುಗಿಗೆ ಅನುವಾದಿಸಿದ್ದು ಇನ್ನೊಂದು ಗಣ್ಯವಾದ ಕೆಲಸ. ಅನುವಾದವಲ್ಲ, ಸ್ವತಂತ್ರಕೃತಿ ಎಂದು ಹೇಳುವ ಮಟ್ಟಿಗೆ ಇಲ್ಲಿಯ ಪದ್ಯಶಿಲ್ಪ ಸುಂದರವಾದುದು.

ಶರ್ಮರು ಸಾಹಿತ್ಯರಸವನ್ನು ಹೇಗೋ ಹಾಗೆ ಸಂಗೀತರಸವನ್ನೂ ಬಲ್ಲವರು. ಈ ಅನನ್ಯಸಾಧಾರಣ ಶಕ್ತಿವಿಶೇಷದಿಂದ ಅವರ ಸಾಹಿತ್ಯಶಕ್ತಿಗೆ ಇಮ್ಮಡಿ ತೇಜಸ್ಸು ಕೂಡಿತು. ಅವರು ಬಿಡಾರಂ ಕೃಷ್ಣಪ್ಪನವರ ಶಿಷ್ಯರಾಗಿ ನಾಲ್ಕೈದು ವರ್ಷ ಸಂಗೀತಾಭ್ಯಾಸ ಮಾಡಿದರು. ವೀಣೆ ಶೇಷಣ್ಣ ವಾಸುದೇವಾಚಾರ್ಯ ಮೊದಲಾದವರ ಕಛೇರಿಗಳನ್ನು ಕೇಳಿದರು. ನಡುವೆ ಶರೀರ ಅಸ್ವಸ್ಥವಾಗಿ, ಶಾರೀರ ಕೆಟ್ಟು, ಪಿಟೀಲು ವಾದನಕ್ಕೆ ತೃಪ್ತರಾಗಬೇಕಾಯಿತು. ಆದರೆ ೧೯೦೯ರಲ್ಲಿ ಕೃಷ್ಣಪ್ಪನವರು ದರ್ಬಾರಿನಲ್ಲಿ ಮಾಡಿದ ಒಂದು ಕಛೇರಿ ಕಾರ್ಯಕ್ರಮ, ಅವರ ಶಿಷ್ಯತ್ವ, ಅವರನ್ನು ಸಂಗೀತದ ಉಪಾಸಕರನ್ನಾಗಿ ಉಳಿಸಿದುದೇ ಅಲ್ಲದೆ, ಸಂಗೀತಶಾಸ್ತ್ರದ ಪಂಡಿತರನ್ನಾಗಿಯೂ ಮಾಡುವುದರಲ್ಲಿ ಸಫಲವಾದುವು. ೧೯೩೭ರಲ್ಲಿ ಸೇರಿದ್ದ ಆಂಧ್ರ ಕಾಂಗ್ರೆಸ್ ಸಮಾವೇಶದ ಭಾಗವಾದ ಆಂಧ್ರ ಗಾಯಕ ಮಹಾಸಭೆಯಲ್ಲಿ ಅವರು ನೀಡಿದ ಅಧ್ಯಕ್ಷಭಾಷಣ ಹಲವು ನವೀನ ವಿಚಾರಗಳಿಂದ ಹೃದ್ಯವೂ ಪ್ರಾಮಾಣಿಕವೂ ಆದ ವಿಮರ್ಶೆಯಿಂದ ಬಹುಬೇಗ ತೆಲುಗುಜನವನ್ನು ಮೋಹಿಸಿದುವು. ಭಾರತಿ, ಆಂಧ್ರ ಪತ್ರಿಕೆಗಳಲ್ಲಿ ಮೊದಲು ಪ್ರಕಟಿಸಿದ ಈ ಭಾಷಣದ ಹಲವು ನೂರು ಪ್ರತಿಗಳನ್ನು ಬಳಿಕ ಮುದ್ರಿಸಿ ಉಚಿತವಾಗಿ ವಿತರಿಸಲಾಯಿತು.

ಹಾಗೆ ನೋಡಿದರೆ, ಶರ್ಮರ ಬಹುಪಾಲು ಪ್ರಬಂಧಗಳು, ಸಾಹಿತ್ಯಶಾಸ್ತ್ರ ವಿಚಾರಗಳನ್ನು ಬಿಟ್ಟರೆ, ಸಂಗೀತದ ಮನೋಧರ್ಮ ಪರಿಭಾಷೆ ಶೈಲಿ ವಾದ್ಯಗಳು ವಾಗ್ಗೇಯಕಾರರು ಮೊದಲಾದುವನ್ನು ಕುರಿತ ಸವಿವರ ಮಾರ್ಮಿಕ ವಿವೇಚನೆಗಳಾಗಿವೆ. ಅವರ ತೆಲುಗುಪ್ರಬಂಧಗಳು, ಈ ಸಂಬಂಧವಾದವು, ಒಂದು ಸಂಪುಟವಾಗಿ ಇನ್ನೂ ಪ್ರಕಟವಾಗದಿರುವುದು ಒಂದು ಆಶ್ಚರ್ಯವೇ ಸರಿ. ಆದರೆ ಕನ್ನಡದಲ್ಲಿ 'ಗಾನಕಲೆ' (೧೯೫೩) ಎಂಬ ಸಂಕಲನ ಬಂದಿದ್ದು, ಕನ್ನಡಿಗರು ಆ ಮಟ್ಟಿಗೆ ಭಾಗ್ಯಶಾಲಿಗಳಾಗಿದ್ದಾರೆ. ಇಲ್ಲಿ ಶೇಷಣ್ಣ ಕೃಷ್ಣಪ್ಪ ಇವರ ವ್ಯಕ್ತಿಚಿತ್ರಗಳು, ದಾಕ್ಷಿಣಾತ್ಯ-ಉತ್ತರಾದಿ ಸಂಗೀತಗಳ ತುಲನೆ, ತ್ಯಾಗಯ್ಯನವರ ಕೃತಿವಿಮರ್ಶೆ ಮೊದಲಾದ ೧೨ ಲೇಖನಗಳು ಸಮಾವೇಶಗೊಂಡಿವೆ.

ಡಿ.ವಿ.ಜಿ. ಅವರು ಈ ಪುಸ್ತಕದ ವಿಸ್ತೃತ ಪರಾಮರ್ಶೆಯನ್ನು ಒಂದು ವಾರ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಿಸಿದ್ದು, ಇದರ ಹಿರಿಮೆಗೆ ಸಾಕ್ಷಿಯಾಗಿದೆ. ಸಂಗೀತವಿಮರ್ಶೆ ಕುರಿತ ಭಾರತದ ದೇಶಭಾಷೆಗಳ ಗ್ರಂಥಗಳಲ್ಲಿ ಇದರ ಸ್ಥಾನ ಅಗ್ರಶ್ರೇಣಿಯದು, ಅನನ್ಯವಾದುದು.

ಜೊತೆಗೇ ನೆನೆಯಬೇಕಾದ ಇನ್ನೊಂದು ಕನ್ನಡ ಕೃತಿಯೆಂದರೆ 'ಸಾಹಿತ್ಯ ಮತ್ತು ಜೀವನಕಲೆ (೧೯೫೪). ಹತ್ತು ಲೇಖನಗಳ ಈ ಸಂಕಲನ ಕಲಾಮಯ ಜೀವನ, ನಾಟಕ, ವಿಜಯನಗರ ಕಾಲದ ಸಾಹಿತ್ಯ ಸಂಸ್ಕೃತಿಗಳು, ಸರ್ವಜ್ಞ, ತೆಲುಗು ಸಾಹಿತ್ಯ ಈ ಕೆಲವನ್ನು ಕುರಿತಿವೆ. ಇಲ್ಲಿ ಕಂಡುಬರುವ ಶರ್ಮರ ರಸಿಕತೆ, ಸ್ವತಂತ್ರ ವಿಚಾರಶಕ್ತಿಗಳು ಹೃದ್ಯವಾದವು.

ಒಟ್ಟಾಗಿ ಶರ್ಮರ ಬರಹದ ಶೈಲಿಯ ಬಗೆಗೆ ಡಿ. ವಿ. ಜಿ. ಅವರು ಪ್ರಾಸಂಗಿಕವಾಗಿ ಆಡಿದ ಈ ಮಾತುಗಳನ್ನು ನೆನೆಯಬಹುದಾಗಿದೆ: "ಶರ್ಮರವರ ಪ್ರತಿಪಾದನಕ್ರಮ ಮನೋರಂಜಕವಾಗಿದೆ. ಸಣ್ಣ ಸಣ್ಣ ವಾಕ್ಯಗಳು, ಬಳಕೆಯಲ್ಲಿದ್ದರೂ ಹಳಸಲಾಗದೆ ಅರ್ಥವತ್ತಾಗಿರುವ ಪದಗಳು, ಪಾಂಡಿತ್ಯಾಡಂಬರವನ್ನು ವರ್ಜಿಸಿರುವ ಸಂವಾದಶೈಲಿ, ತನ್ನ ವಾದಕ್ಕೆ ತನ್ನ [illegible] ಬೇರೊಂದು ಪಕ್ಷವಿದ್ದರೂ ಇರಬಹುದೆಂಬ ವಿನಮ್ರಪ್ರಜ್ಞಾಸಿದ್ಧತೆ —ಈ ಗುಣಗಳಿಂದ ಶರ್ಮರ ಬರವಣಿಗೆ ಸ್ನಿಗ್ಧಕಾಂತಿ ವಿಶಿಷ್ಟವಾಗಿದೆ."

ಹೀಗೆ ಆಂಧ್ರದಲ್ಲಿ ಹುಟ್ಟಿ, ಕರ್ನಾಟಕದಲ್ಲಿ ಬೆಳೆದು, ಸಂಗೀತ ಸಾಹಿತ್ಯಗಳ ಕೈಂಕರ್ಯವನ್ನು ಒಬ್ಬ ಸಾಂಸ್ಕೃತಿಕ ರಾಯಭಾರಿಯಾಗಿ ಕೈಕೊಂಡು ಕೃತಕೃತ್ಯರಾಗಿದ್ದಾರೆ, ಆಚಾರ್ಯ ಅನಂತಕೃಷ್ಣ ಶರ್ಮರು. ಅವರ ಸಾಹಿತ್ಯ ಸಾಧನೆಗಳು ಆಂಧ್ರ–ಕರ್ನಾಟಕಗಳನ್ನು ತುಂಬಿಕೊಂಡರೆ, ಸಂಗೀತಸಾಧನೆ ಅಖಿಲಭಾರತ ವ್ಯಾಪ್ತಿ ಪಡೆದಿದೆ. ಅವರು ಒಂದು ಶಿಷ್ಯಪರಂಪರೆಯನ್ನೂ ವಿದ್ವತ್ಪರಂಪರೆಯನ್ನೂ ನೆಲೆಗೊಳಿಸಿದವರು. ಅವರು ಆಂಧ್ರ ಪ್ರದೇಶ ಸಾಹಿತ್ಯ ಅಕಾಡೆಮಿಯ ಕಾರ್ಯನಿರ್ವಾಹಕ ಸದಸ್ಯರಾಗಿಯೂ ಸಂಗೀತ ನಾಟಕ ಅಕಾಡೆಮಿಯ ಉಪಾಧ್ಯಕ್ಷರಾಗಿಯೂ ಹಲವು ವರ್ಷ ಸೇವೆ ಸಲ್ಲಿಸಿದವರು. ಅವರನ್ನು ಅಭಿಮಾನಿಗಳು ವಾಙ್ಮಯ ಪಾರಾವಾರದಲ್ಲಿ ಸ್ವೈರವಿಹಾರ ಮಾಡಿದ ಮಹಾಮತ್ಸ್ಯವೆಂದೂ ಸಾಹಿತ್ಯಸರೋವರದಲ್ಲಿ ಸುಲಲಿತವಾಗಿ, ಸರಾಗವಾಗಿ ಸಂಚರಿಸಿದ ರಾಜಮರಾಳವೆಂದೂ ಕರೆದರು: ಸಾರಸ್ವತ ತ್ರಿವಿಕ್ರಮ, ಸತ್ಕಳಾಪರ ಸರಸ್ವತಿ, ಭಾರತೀಮೂರ್ತಿ, ವಿದ್ವನ್ಮಣಿ, ದೇಶಿಕೋತ್ತಮ, ನಿಗರ್ವಶಿರೋಮಣಿ, ಜ್ಞಾನಾನಂದೋಪಾಸಕ ಎಂದು ಮುಂತಾಗಿ ಪ್ರಶಂಸೋಕ್ತಿಗಳನ್ನಾಡಿದರು.

ಅವರ ಸಾಹಿತ್ಯಶಾಸ್ತ್ರಪಾಂಡಿತ್ಯವನ್ನೂ ಕವಿತ್ವಶಕ್ತಿಯನ್ನೂ ಲಕ್ಷಿಸಿ, ಶ್ರೇಷ್ಠ ವಕ್ತೃ, ವ್ಯಾವಹಾರಿಕ ಭಾಷಾಪ್ರಿಯ, ವಿದ್ವತ್ಕವಿ, ಪಾಂಡಿತ್ಯದ ಗಂಭೀರಸಾಗರ, ಬಹುಭಾಷಾಪಂಡಿತ, ವಿಮರ್ಶನಕಳಾವಿಶಾರದ, ಸಂಸ್ಕೃತ ಪ್ರಾಕೃತಾಂಧ್ರ ಕರ್ಣಾಟ ಭಾಷಾ ಮಹಾಪ್ರವಾಹ ಸಂಗಮ—ಮುಂತಾಗಿ ಅವರನ್ನು ಗುರುತಿಸಿದರು. ಅವರ ಆಸಕ್ತಿಗಳು ಬಹುಮುಖವಾದವು. ಅದು ಸಾಹಿತ್ಯ, ಸಂಗೀತ ಮತ್ತು ವೇದಾಂತಗಳ ಮುಕ್ಕೂಡಲು. ಅವರು ವಿವೇಕಚೂಡಾಮಣಿ, ವೇದಾಂತಸಾರ, ಪಂಚದಶೀ ಮೊದಲಾದ ಅಧ್ಯಾತ್ಮಗ್ರಂಥಗಳನ್ನು ಆಸಕ್ತರಿಗೆ ಪಾಠ ಹೇಳಿರುವರೆಂದು ತಿಳಿದಿದೆ.

ಅನಂತಕೃಷ್ಣಶರ್ಮರ ಸಾಧನೆಗಳಿಗೆ ಸಂದ ಪ್ರಶಸ್ತಿಗಳು ಹಲವು: ೧೯೬೧ ರಲ್ಲಿ ಮೈಸೂರಿನಲ್ಲಿ ಜರುಗಿದ ನಾಲ್ಕನೆಯ ಸಂಗೀತ ಸಮ್ಮೇಳನದಲ್ಲಿ ಅಧ್ಯಕ್ಷತೆ ಮತ್ತು 'ಗಾನಕಲಾಸಿಂಧು' ಎಂಬ ಬಿರುದು; ಆಂಧ್ರಪ್ರದೇಶ್ ಸಂಗೀತ ನಾಟಕ ಅಕಾಡೆಮಿಯಿಂದ 'ಗಾನಕಳಾಪ್ರಪೂರ್ಣ' ಎಂಬ ಬಿರುದು ಮತ್ತು ಸನ್ಮಾನ; ೧೯೬೯ ರಲ್ಲಿ ಕರ್ನಾಟಕ ಸಂಗೀತ ನಾಟಕ ಅಕಾಡೆಮಿಯಿಂದ ಶರ್ಮರಿಗೆ ಪ್ರಶಸ್ತಿಪೂರ್ವಕ ಸನ್ಮಾನ; ೧೯೭೦ ರಲ್ಲಿ ಬೆಂಗಳೂರು ಗಾಯನ ಸಮಾಜದ ದ್ವಿತೀಯ ಸಂಗೀತ ಸಮ್ಮೇಳನದ ಅಧ್ಯಕ್ಷತೆ ಮತ್ತು 'ಸಂಗೀತ ಕಲಾರತ್ನ' ಬಿರುದು; ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಫೆಲೋಶಿಪ್ ಗೌರವ; ೧೯೭೪ ರಲ್ಲಿ ಮದರಾಸು ಸಂಗೀತ ಅಕಾಡೆಮಿಯವರು 'ಸಂಗೀತ ಕಳಾನಿಧಿ' ಬಿರುದು ನೀಡಿ ಸನ್ಮಾನಿಸಿದುದು; ಇವುಗಳಿಗೆ ಮುಕುಟಪ್ರಾಯವಾಗಿ ತಿರುಪತಿಯ ವೆಂಕಟೇಶ್ವರ ವಿಶ್ವವಿದ್ಯಾನಿಲಯ ೧೯೭೪ ರಲ್ಲಿಯೇ ಗೌರವ ಡಿ.ಲಿಟ್ ಪದವಿಯನ್ನು ನೀಡಿದುದು—ಹೀಗೆ ಹಲವನ್ನು ಹೇಳಬಹುದು. ೧೯೬೧ ರಲ್ಲಿ ಶರ್ಮರಿಗೆ ೬೯ ವರ್ಷಗಳಾದಾಗ, ಒಂದು ಸನ್ಮಾನಸಂಚಿಕೆಯನ್ನೂ ೧೯೭೭ ರಲ್ಲಿ, ಅವರಿಗೆ ೮೫ ವರ್ಷಗಳಾದಾಗ ಒಂದು ಅಭಿನಂದನಗ್ರಂಥವನ್ನೂ ಪ್ರಕಟಿಸಲಾಯಿತು ಎಂಬುದನ್ನಿಲ್ಲಿ ವಿಶೇಷವಾಗಿ ನೆನೆಯಬೇಕು.

ಕೆಲವು ದಶಕಗಳಿಗೆ ಹಿಂದೆ ಕೇಂದ್ರ ಸರ್ಕಾರದಲ್ಲಿ ಮಂತ್ರಿಗಳೂ ಉತ್ತರ ಪ್ರದೇಶದ ರಾಜ್ಯಪಾಲರೂ ಆಗಿದ್ದ, ಆಂಧ್ರ ಪ್ರದೇಶ್ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿಯೂ ಕೆಲಸ ಮಾಡಿದ ಡಾ. ಬಿ. ಗೋಪಾಲರೆಡ್ಡಿಯವರ ಒಂದು ಮಾತಿನಿಂದ ಈ ಸ್ಮರಣಲೇಖನವನ್ನು ಮುಗಿಸಬಹುದಾಗಿದೆ: "ಡಾ. ರಾಳ್ಳಪಲ್ಲಿ ಅನಂತಕೃಷ್ಣಶರ್ಮರನ್ನು ತಿಳಿಯುವುದು ಎಂದರೆ, ಅವರನ್ನು ಅಭಿಮಾನ ಗೌರವ ಪೂರ್ವಕವಾಗಿ ಮೆಚ್ಚಿಕೊಳ್ಳುವುದೇ ಆಗಿದೆ."

**ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರೀ**

# ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ, ಒ.ಬಿ.ಇ.

## ಸ್ವತಂತ್ರ ಭಾರತದ ಮೊದಲ ಮತ್ತು ಕೊನೆಯ ಮಹಾದಂಡನಾಯಕ

## ೧೯೦೦–೧೯೯೩

* ೧೯೬೨, ೧೯೬೫, ೧೯೭೧ರಲ್ಲಿ ಭಾರತ ವಿನಾಕಾರಣ ಸಮರಕ್ಕೆ ದುಮುಕಬೇಕಾಯಿತು—ನೆರೆ ರಾಷ್ಟ್ರ ಕಾಲ್ಕೆರೆದು ಕಳಕ್ಕಿಳಿದಾಗ ದೇಶರಕ್ಷಣೆಗೆ ಅದ್ಯತೆ ಸಲ್ಲಬೇಕಾದದ್ದು ಕರ್ತವ್ಯ. ಆಗ ಕಾರ್ಯಪ್ಪನವರು ಸ್ವಪ್ರೇರಣೆಯಿಂದ, ಮರಳಿ ಸೈನ್ಯ ಸೇರಲು ಮತ್ತು ತಮಗೆ ವಹಿಸಬಹುದಾದ ಯಾವುದೇ ಹೊಣೆ ನಿರ್ವಹಿಸಲು ಮುಂದಾದರು. ಆದರೆ ಈ ತ್ಯಾಗಮನೋಧರ್ಮದ ಹಿನ್ನೆಲೆಯಲ್ಲಿ ಜ್ವಲಿಸುತ್ತಿದ್ದ ದೇಶಪ್ರೇಮ ಗುರುತಿಸಬಲ್ಲ ನಾಯಕರಿರಲಿಲ್ಲ. ಕಾರ್ಯಪ್ಪನವರು ಗಡಿಗೆರೆಗಳಲ್ಲಿದ್ದ ಸೇನಾಬಲಗಳಿಗೆ ಖುದ್ದು ಭೇಟಿ ನೀಡಿ ಅವರ ಧೃತಿ ಏರಿಸುವಲ್ಲಿ ಅಪಾರ ಸಹಾಯವಿತ್ತರು.

* ೧೯೬೫ರ ಭಾರತ-ಪಾಕಿಸ್ತಾನ ಯುದ್ಧದಲ್ಲಿ ಕಾರ್ಯಪ್ಪನವರ ಮಗ ಸ್ಕ್ವಾಡ್ರನ್ ಲೀಡರ್ ಕೆ. ಸಿ. ಕಾರ್ಯಪ್ಪನವರನ್ನು ಪಾಕ್ ಬಲಗಳು ಸೆರೆ ಹಿಡಿದಿದ್ದುವು. ಪಾಕ್ ಅಧ್ಯಕ್ಷ ಅಯೂಬ್ ಖಾನ್ ಅವರಿಗೆ ಇವರು ತಮ್ಮ ಹಿಂದಿನ ಮೇಲಧಿಕಾರಿ ಮತ್ತು ಮಿತ್ರ ಜನರಲ್ ಕೆ. ಎಂ. ಕಾರ್ಯಪ್ಪನವರ ಪುತ್ರ ಎಂದು ತಿಳಿಯಿತು. ತಮ್ಮ ಗೌರವಾನ್ವಿತ ಹಿರಿಯ ನಾಯಕನಿಗೆ ಕೃತಜ್ಞತೆಯ ಪ್ರತೀಕವಾಗಿ ತಾವು ಕೆ. ಸಿ. ಅವರನ್ನು ಬಿಡುಗಡೆ ಮಾಡುವುದಾಗಿ ಅಯೂಬ್ ಖಾನರು ಕೆ. ಎಂ. ಅವರಿಗೆ ತಿಳಿಸಿದರು. ಎರಡನೆಯ ಮಾತಿಲ್ಲದೇ ಕಾರ್ಯಪ್ಪನವರು ಈ 'ಕೊಡುಗೆ'ಯನ್ನು ಅಥವಾ 'ದಾನ'ವನ್ನು ತಿರಸ್ಕರಿಸಿದರು: "ಜವಾನನಿಗೆ ಒದಗದ ಸೌಕರ್ಯ ನನ್ನ ಮಗನಿಗೆ ದೊರೆಯತಕ್ಕದ್ದಲ್ಲ!"

* DEEPCUD ಎಂಬ ಸಪ್ತಾಕ್ಷರೀ ಮಂತ್ರ ಕಾರ್ಯಪ್ಪನವರಿಗೆ ಬಲು ಪ್ರಿಯ. ವಿದ್ಯಾರ್ಥಿ ಸಮುದಾಯವನ್ನು ಉದ್ದೇಶಿಸಿ ಮಾತಾಡಬೇಕಾದಾಗ ಪ್ರತಿಸಲವೂ ಇದನ್ನು ಅವರು ಬೋಧಿಸುತ್ತಿದ್ದರು: Discipline ಶಿಸ್ತು; Efficiency ದಕ್ಷತೆ; Energy ಸಾಮರ್ಥ್ಯ; Perseverance ಮುನ್ನಡೆ; ಹಿಂಗದ ಪ್ರಯತ್ನ ಅಥವಾ ಮರಳಿ ಯತ್ನ; Courage ಧೈರ್ಯ; Unselfishness ನಿಸ್ವಾರ್ಥ; Determination ದೃಢನಿರ್ಧಾರ—ಈ

ಸಪ್ತ ಸೂತ್ರಗಳನ್ನು ಅನುಷ್ಠಾನಿಸಿದರೆ ವ್ಯಕ್ತಿ, ಸಮಾಜ ಹಾಗೂ ದೇಶ ನಿರಂತರ ಅಭ್ಯುದಯ ಸ್ಥಿತಿಯಲ್ಲಿರುವುವು ಎಂಬುದು ಅವರ ಸಂದೇಶ. ಅವರಂತೂ ಹಾಗೆಯೇ ಬಾಳಿದರು.

* ಅವರಿಗೆ ತೀರ ತಡವಾಗಿ ಭಾರತ ಸರ್ಕಾರ ಫೀಲ್ಡ್ ಮಾರ್ಷಲ್ ಪದವಿ ನೀಡಿತು—ನಿವೃತ್ತರಾದ ಅನೇಕ ವರ್ಷಗಳ ಬಳಿಕ.

"ಯೋಧನಿಗೆ ಮರಣವಿಲ್ಲ. ಆತ ಕರ್ಪೂರದಂತೆ ಬೆಳಕು, ಕಾವು, ಪರಿಮಳ ಸೂಸಿ ಪರಿಸರದೊಂದಿಗೆ ಒಂದಾಗುತ್ತಾನೆ." ಈ ಅನುಭವೋಕ್ತಿಗೆ ದಿವ್ಯ ನಿದರ್ಶನ ಇದೇ ಮೇ ೧೫ ರಂದು ಬೆಂಗಳೂರಿನಲ್ಲಿ ಕೊನೆ ಉಸಿರೆಳೆದ ನಮ್ಮ ಪ್ರೀತಿಯ ಕೊಡಂದೆರ ಮಾದಪ್ಪ ಕಾರ್ಯಪ್ಪನವರ ಸುದೀರ್ಘ ಸೇವಾ ಜೀವನ. ಅವರ ಸ್ವಗೃಹ "ರೋಷನಾರಾ"ದಲ್ಲಿ (ಮಡಿಕೇರಿ) ರಾಷ್ಟ್ರದ ಕೃತಜ್ಞ ಜನತೆ ಕಾರ್ಯಪ್ಪನವರ ಪಾರ್ಥಿವ ಶರೀರಕ್ಕೆ ಅಂತಿಮ ಪ್ರಣಾಮ ಅರ್ಪಿಸಿತು.

ಭಾರತವನ್ನು ಅವರಿಗಿಂತ ಹೆಚ್ಚು ಪ್ರೀತಿಸಿದವರಿಲ್ಲ. "ನಾನು ಭಾರತೀಯ" ಎನ್ನುವ ಅಭಿಮಾನ ಅವರ ಸಮಗ್ರ ವ್ಯಕ್ತಿತ್ವವನ್ನೂ ರೂಪಿಸಿ ನಿರ್ದೇಶಿಸು ತ್ತಿತ್ತು. ಈ ಮಣ್ಣಿನ ಮಗ ಸ್ವತಂತ್ರ ಭಾರತದ ಮಹಾದಂಡನಾಯಕನಾದ ದ್ದೊಂದು ರೋಮಾಂಚಕ ಇತಿಹಾಸ. ಸಂಬಂಧಿಕರಿಗೆ 'ಚಿಮ್ಮ' ಮತ್ತು ಸ್ನೇಹಿತರಿಗೆ 'ಕಿಪ್ಪರ್' (ಸ್ಫೂರ್ತಿದೀಪ್ತ) ಎಂದು ಪ್ರಿಯರಾಗಿದ್ದ ಈ ಮಹಾ ಯೋಧ ಕೊಡಗು ಶಂಂಠಿಕೊಪ್ಪದ ಹಸುರ ಹಂದರದಲ್ಲಿ ಜನಿಸಿದರು (೨೮-೧-೧೯೦೦). ಮಾದಪ್ಪ ದಂಪತಿಗಳು ತಮ್ಮ ನಡೆನುಡಿ ಬಗೆಗಳಿಂದ ಮಕ್ಕಳಲ್ಲಿ ಭವ್ಯಾದರ್ಶವನ್ನು ಬಿತ್ತಿದರು, ಬೆಳೆಸಿದರು. "ನಾವು ಕೊಡವರು. ಕೊಡವ ಸಂಸ್ಕೃತಿಯ ಕುಡಿಗಳು. ಸತ್ಯ, ಧರ್ಮ, ದಾನ, ಧೈರ್ಯ ಸಾಹಸ ಮತ್ತು ದೇಶಪ್ರೇಮ ನಮ್ಮ ಜೀವನ ಮಂತ್ರ ಮತ್ತು ಕಾರ್ಯತಂತ್ರ."

ಹದಿ ಹರೆಯದ ಕಾರ್ಯಪ್ಪ ಮಡಿಕೇರಿ ಸೆಂಟ್ರಲ್ ಹೈಸ್ಕೂಲ್ ಶಾಲಾ ಶಿಕ್ಷಣಾನಂತರ ಮದ್ರಾಸು ಪ್ರೆಸಿಡೆನ್ಸಿ ಕಾಲೇಜ್ ಸೇರಿದರು. ಒಂದನೆಯ ಮಹಾಯುದ್ಧದ, ೧೯೧೪-೧೮, ಆ ದಿನಗಳಂದು ದೇಶದೊಳಗಿನ ರಾಜಕೀಯ ಒತ್ತಡದಿಂದಲೂ ಭಾರತೀಯ ಯೋಧರು ರಣಾಂಗಣದಲ್ಲಿ ಪ್ರದರ್ಶಿಸಿದ ಧುರೀಣತ್ವದಿಂದಲೂ ಪ್ರಭಾವಿತರಾದ ಬ್ರಿಟಿಷ್ ಆಳರಸರು 'ನೇಟಿವ್' ಮಂದಿಗೂ (ಭಾರತೀಯರು) ಪ್ರತಿಷ್ಠಿತ 'ಕಿಂಗ್ಸ್ ಕಮಿಷನ್' (ಸೇನಾಧಿಕಾರಿ) ಅವಕಾಶ ಕೊಡುವುದಾಗಿ ಒಲ್ಲದ ಮನಸ್ಸಿನಿಂದ ಸಾರಿದರು. ಆದರೆ ಆಯ್ಕೆಯಲ್ಲಿ

ಅತಿಶಯ ಕಠಿಣ ಮತ್ತು ನಿಷ್ಠುರ ಪರೀಕ್ಷೆ, ಸೂತ್ರ ಮುಂತಾದವನ್ನು ವಿಧಿಸಿದರು. ಆಗ ಉತ್ತೀರ್ಣರಾದ ಬೆರಳೆಣಿಕೆಯ ವಜ್ರಗಳ ಪೈಕಿ ನಮ್ಮ 'ಚಿಮ್ಮ' ಅಥವಾ 'ಕಿಪ್ಪರ್' ಸೇರಿದ್ದರು! ಇದು ನಡೆದದ್ದು ೧೯೧೯ ಡಿಸೆಂಬರಿನಲ್ಲಿ: ಸ್ಫುರದ್ರೂಪಿ, ಮಹಾಗಾತ್ರಿ, ಉತ್ಸಾಹಿ, ಪ್ರಪಂಚವನ್ನೇ ಜಯಿಸಬಲ್ಲ ಅದಟು, ಧೈರ್ಯ ಸಾಹಸಗಳೇ ಮೈವೆತ್ತ ದಿಟ್ಟ.

ಪೂರ್ತಿ ಬ್ರಿಟಿಷ್ ಸೈನಿಕರಿಂದಲೇ ಕೂಡಿದ್ದ ತುಕ್ಕಡಿಗಳ ನಾಯಕ ಇವರಾದರು. ಈ ಅಧಿಕಾರಿ ಹೇಗಿದ್ದರು? ಪ್ರತಿಯೊಬ್ಬ ಜವಾನನೂ (ಸೈನಿಕನನ್ನು ಪ್ರೀತಿಯಿಂದ ಸಂಬೋಧಿಸುವ ಪರಿ) ಇವರ ಆತ್ಮೀಯ ಮಿತ್ರ; ಅವನ ಯೋಗಕ್ಷೇಮ ಪೂರ್ತಿ ಈ ನಾಯಕನ ಹೊಣೆ. "ಸೈನಿಕರಲ್ಲಿ ಕೆಟ್ಟವರು ಒಳ್ಳೆಯವರು ಎಂದಿಲ್ಲ. ಎಲ್ಲರೂ ಒಳ್ಳೆಯವರೇ. ಆದರೆ ಅಧಿಕಾರಿಗಳಲ್ಲಿದ್ದಾರೆ." ಇದು ಕಾರ್ಯಪ್ಪನವರ ಜೀವನ ನೀತಿ. ಇವರ ವರಿಷ್ಠಾಧಿಕಾರಿಯಾಗಿದ್ದ ಫೀಲ್ಡ್ ಮಾರ್ಷಲ್ ಚೆಟ್‌ವುಡ್ ಅವರ ಬೋಧನೆಯನ್ನು ಕಾರ್ಯಪ್ಪನವರು ಅಕ್ಷರಶಃ ಅನುಷ್ಠಾನಿಸಿದ್ದರು: "ಕೊಡು ನಿನ್ನ ದೇಶದ ಸುರಕ್ಷೆ, ಗೌರವ ಮತ್ತು ಕ್ಷೇಮಗಳಿಗೆ ಸದಾ ಮತ್ತು ಪ್ರತಿ ಸಲವೂ ಅಗ್ರಸ್ಥಾನ; ಕೊಡು ನಿನ್ನ ವಶದಲ್ಲಿರುವ ಯೋಧರ ಸುರಕ್ಷೆ ಮತ್ತು ಕ್ಷೇಮಗಳಿಗೆ ಮುಂದಿನ ಸ್ಥಾನ; ಸದಾ ಮತ್ತು ಪ್ರತಿಸಲವೂ ಕೊನೆಯ ಸ್ಥಾನದಲ್ಲಿ ಬರಲಿ ನಿನ್ನ ಸೌಕರ್ಯ ಮತ್ತು ವಿರಾಮ."

ಸ್ಟಾಫ್ ಕಾಲೇಜ್ ಕ್ವೆಟ್ಟದಲ್ಲಿ ಉನ್ನತ ಸೇನಾ ಶಿಕ್ಷಣ ಪಡೆದ (೧೯೩೩) ಪ್ರಥಮ ಭಾರತೀಯರಿವರು. ಮುಂದೆ ಎರಡನೆಯ ಮಹಾಯುದ್ಧದಲ್ಲಿ ಪ್ರತ್ಯಕ್ಷ ರಣರಂಗಾನುಭವ ಗಳಿಸಿದರು. ೧೯೪೪ರಲ್ಲಿ ಭಾರತೀಯ ಸೇನಾ ಪುನರ್ವ್ಯವಸ್ಥೀಕರಣ ಸಮಿತಿಯ ಸದಸ್ಯರಾಗಿ ನೇಮಕಗೊಂಡು ತಮ್ಮ ಅಧ್ಯಯನ ಮತ್ತು ಸಲಹೆಗಳಿಂದ ರಾಷ್ಟ್ರನಾಯಕರ ಗೌರವಭಾಜನರಾದರು. ಪ್ರಥಮ ಭಾರತೀಯ ಬ್ರಿಗೇಡಿಯರ್ ಆಗಿ ಬಡ್ತಿ ಪಡೆದು (೧೯೪೬) ಫ್ರಾಂಟಿಯರ್ ಬ್ರಿಗೇಡ್ ಗ್ರೂಪಿನ ನಾಯಕರಾದರು. (೧೯೬೫ರ ಭಾರತ–ಪಾಕಿಸ್ತಾನ ಸಮರದ ವೇಳೆ ಪಾಕಿಸ್ತಾನದ ಅಧ್ಯಕ್ಷರಾಗಿದ್ದ ಕರ್ನಲ್ ಅಯೂಬ್ ಖಾನ್ ೧೯೪೬ರಲ್ಲಿ ಬ್ರಿಗೇಡಿಯರ್ ಕಾರ್ಯಪ್ಪನವರ ಕೆಳಗೆ ಅಧಿಕಾರಿಯಾಗಿದ್ದರು.) ೧೯೪೭ರಲ್ಲಿ ಕಾರ್ಯಪ್ಪನವರನ್ನು ಇಂಗ್ಲೆಂಡಿನ ಇಂಪಿರಿಯಲ್ ಡಿಫೆನ್ಸ್ ಕಾಲೇಜಿನಲ್ಲಿ (ಕೆಂಬರ್ಲೀ) ಉತ್ತಮ ಸೇನಾ ಶಿಕ್ಷಣಕ್ಕಾಗಿ ಬ್ರಿಟಿಷ್ ಸರ್ಕಾರ ನಿಯೋಜಿಸಿತು. ಇಲ್ಲಿಯೂ ಇವರು ಪ್ರಥಮ ಭಾರತೀಯರೇ.

ಭಾರತಕ್ಕೆ ಸ್ವಾತಂತ್ರ್ಯ ಬಂದು (೧೯೪೭) ದೇಶ ವಿಭಜನೆಗೊಂಡಾಗ ಸೇನಾಪಡೆಗಳನ್ನು ವ್ಯವಸ್ಥಿತವಾಗಿ ವಿಂಗಡಿಸುವ ಅಥವಾ ವಿಭಜಿಸುವ ಸೂಕ್ಷ್ಮ ಮತ್ತು ವಿಸ್ಫೋಟಕ ಹೊಣೆ ಈ ಮಹಾ ದೇಶಪ್ರೇಮಿ ನಿಷ್ಠುರ ಯೋಧನ ಮೇಲೆ ಬಿತ್ತು. ಆಗ ಇವರು ಪ್ರದರ್ಶಿಸಿದ ಮುತ್ಸದ್ದಿತನ, ವ್ಯಾವಹಾರಿಕ ಕೌಶಲ, ವೃತ್ತಿ ಪ್ರಾವೀಣ್ಯ ಮತ್ತು ಧುರೀಣತ್ವ ಗುಣಗಳು ಸ್ವತಂತ್ರ ಭಾರತದ ಸೇನಾಬಲಗಳನ್ನು ಭದ್ರ ಅಡಿಪಾಯದ ಮೇಲೆ ನೆಲೆಗೊಳಿಸಿದುವು. (ಪಾಕಿಸ್ತಾನದಲ್ಲಿ ಹೀಗಾಗಲಿಲ್ಲ, ಛಿದ್ರವಾಯಿತು ಎಂಬುದನ್ನು ಇಲ್ಲಿ ಹೇಳಬಹುದು.)

ಮುಂದಿನ ದಿನಗಳಲ್ಲಿ ಕಾರ್ಯಪ್ಪನವರು ಮೂರು ವಿಭಿನ್ನ ರಂಗಗಳಲ್ಲಿ ಕಾರ್ಯಪ್ರವೃತ್ತರಾಗಬೇಕಾಯಿತು: ಸೇನಾ ವಿಚಾರಗಳಲ್ಲಿ ತೀರ ಮುಗ್ಧರಾಗಿದ್ದ. ರಾಷ್ಟ್ರನಾಯಕರ ಜೊತೆ ಸಮಾಲೋಚನೆ ಮತ್ತು ಅವರಿಂದ ನಿರ್ದೇಶನ ಸ್ವೀಕಾರ, ಈ ನಿರ್ದೇಶನಗಳನ್ನು ಕಾರ್ಯರೂಪಕ್ಕಿಳಿಸುವ ಅಗಾಧ ಹೊಣೆ, ಮತ್ತು ದೇಶಾದ್ಯಂತ, ಮುಖ್ಯವಾಗಿ ಗಡಿ ವಲಯಗಳಲ್ಲಿ, ವಿತರಣೆಗೊಂಡಿದ್ದ ಯೋಧರ ಜೊತೆ ನಿಕಟ ಸಂಪರ್ಕ. ಆ ದುರ್ದಿನಗಳಲ್ಲಿ ಪಾಕಿಸ್ತಾನ ಸಾರಿದ ಸಮರದಿಂದಾಗಲೀ ಹೈದರಾಬಾದಿನಲ್ಲಿ ಉದ್ಭವಿಸಿದ ದೇಶಘಾತಕ ಹಿಂಸಾಕೃತ್ಯಗಳಿಂದಾಗಲೀ ಭಾರತ ನಾಶವಾಗದಿದ್ದುದು, ಬದಲಾಗಿ ಅವನ್ನು ಯಶಸ್ವಿಯಾಗಿ ಎದುರಿಸಿ ಜಯಿಸಿ ದೇಶದ ಅಖಂಡತ್ವವನ್ನು ಕಾಪಾಡಿಕೊಂಡದ್ದು, ಕಾರ್ಯಪ್ಪನವರ ಮಾಂತ್ರಿಕ ಧುರೀಣತ್ವಕ್ಕೆ ಹಿಡಿದ ಕನ್ನಡಿ.

ಕಾರ್ಯಶೀಲ ಕಾರ್ಯಪ್ಪನವರನ್ನು ಅರಸಿಬಂದಿತು ರಾಷ್ಟ್ರದ ವರಿಷ್ಠ ಸೇನಾನಾಯಕ ಪದವಿ: ೧೫–೧–೧೯೪೯ರಂದು ಜನರಲ್ ಕೆ. ಎಂ. ಕಾರ್ಯಪ್ಪನವರು ಭಾರತದ ಮಹಾದಂಡನಾಯಕರಾದರು. ಹಳ್ಳಿಯಿಂದ ದಿಲ್ಲಿಗೆ ಹೋದ, ಸಾಮಾನ್ಯನಿಂದ ಅಸಾಮಾನ್ಯನಿಗೆ ಏರಿದ ಈ ವ್ಯಕ್ತಿ—ಜನರಲ್ ಕೆ. ಎಂ. ಕಾರ್ಯಪ್ಪ—ಮುಂದಿನ ನಾಲ್ಕು ವರ್ಷ ಪರ್ಯಂತ ರಾಷ್ಟ್ರದ ಸಮಸ್ತ ಸೇನಾಬಲಗಳ ಐಕ್ಯದ ಪ್ರತೀಕವಾಗಿ, ಪ್ರಜಾಪ್ರಭುತ್ವದ ಸುಭದ್ರ ಅಡಿಪಾಯವಾಗಿ, ಶಿಸ್ತು ಸೌಜನ್ಯಗಳ ಸಾಕಾರಮೂರ್ತಿಯಾಗಿ ಜವಾನರಿಗೆ ಅಂತಸ್ತು ಆದರ್ಶ ಸ್ಫೂರ್ತಿ ನೀಡಿದ ಪರಿ ಅನುಪಮವಾದದ್ದು. ಅವರು ಅಂದು, ೧೯೪೯–೫೩, ನೀಡಿದ 'ಮಾಡು, ಮಾಡದಿರು'ಗಳು ಇಂದಿಗೂ (ಪ್ರಾಯಶಃ ಹೆಚ್ಚಿಗೆ) ಪ್ರಸ್ತುತವಾಗಿವೆ. ಆದರೆ ದೇಶದಲ್ಲಿಯ ಶಿಥಿಲ ನೀತಿ ಆ 'ಮಾಡು, ಮಾಡದಿರು'ಗಳಿಗೆ ಇಂದು (೧೯೯೩) ಅರ್ಥ ನೀಡುತ್ತಿಲ್ಲವೋ ಎನ್ನಿಸುತ್ತಿದೆ.

ಜನವರಿ ೧೯೫೩ರಲ್ಲಿ ಅವರು ವೃತ್ತಿ ನಿವೃತ್ತರಾದರು. ಅವರೊಂದಿಗೆ ಮಹಾ ದಂಡನಾಯಕತ್ವವೂ (Commander-in-Chief post) ಕೊನೆಗೊಂಡಿತು. ಮುಂದೆ ಸೈನ್ಯ, ವಾಯುಬಲ ಹಾಗೂ ನೌಕಾ ಪಡೆಗಳಿಗೆ ಬೇರೆ ಬೇರೆ ಮಹಾನಾಯಕರು ನಿಯೋಜಿತರಾದರು. ಸೇನಾವೃತ್ತಿ ಮತ್ತು ಸೇವಾಬುದ್ಧಿ ಪರಿಣತರಿಗಿಂತ ಹೆಚ್ಚಾಗಿ ರಾಜಕಾರಣಿಗಳು ಸೇನಾಬಲಗಳ ತಿರುಳನ್ನು ಹೊಕ್ಕು ಕಾರ್ಯಪ್ಪನವರ ಆದರ್ಶಗಳನ್ನು ಕಡೆಗಣಿಸುತ್ತಿರುವುದು ದೇಶದ ದುರದೃಷ್ಟ.

ಅನುಭವ, ಆರೋಗ್ಯ, ಉತ್ಸಾಹ, ಸೇವಾಕಾಂಕ್ಷೆ ಎಲ್ಲವೂ ಅತ್ಯುನ್ನತ ಮಟ್ಟದಲ್ಲಿದ್ದಾಗ ಅವರು ನಿವೃತ್ತರಾಗಬೇಕಾಯಿತು—ಪ್ರಾಯ ಕೇವಲ ೫೫. ಕಾರ್ಯಪ್ಪನವರನ್ನು ಆಸ್ಟ್ರೇಲಿಯಾಕ್ಕೆ ಭಾರತದ ರಾಯಭಾರಿಯಾಗಿ ನಿಯೋಜಿಸಿದರು. ಆದರೆ ಇವರ ನಿಸ್ಪೃಹ ವರ್ತನೆ, ಸರಳ ನುಡಿ, ದಿಟ್ಟ ನಿಲವು ಮುಂತಾದವು ರಾಜಕಾರಣದ ಅಥವಾ ರಾಜಕೀಯದ ಜಾರುನೆಲದಲ್ಲಿ ಪ್ರಯೋಜನವಾಗಲಿಲ್ಲ. ಬಲುಬೇಗನೆ ಈ ರಾಯಭಾರಿಯನ್ನು ಭಾರತ ಸರ್ಕಾರ ಹಿಂದೆ ಕರೆಸಿಕೊಂಡಿತು: "ಮೋಸದ ನೆಲದಲಿ ನನ್ನಿಯ ಮೊರೆಯನು ಆಲಿಪರಾರು!"

ಕಾರ್ಯತತ್ಪರ ಕಾರ್ಯಪ್ಪನವರಿಗೆ ವೃತ್ತಿ ಕೇವಲ ನೆಪ—ಸೇವೆ ಸಲ್ಲಿಸಲು ವೃತ್ತಿ ಇಲ್ಲದಾಗ ಇವರೇ ಅದನ್ನು ಸೃಷ್ಟಿಸಿ ಸಮಾಜಸೇವೆ ಮಾಡಬಲ್ಲ ಚೇತನ ಇವರದು. ಸರಳ ಜೀವನ, ಗಹನಚಿಂತನ ಇವರ ಬದುಕಿನ ಸೂತ್ರ. 'ರೋಷನಾರಾ'-ಅಸುಪಾಸಿನ ಎಲ್ಲ ಬಡವರಿಗೂ ಇವರು ಆದರ್ಶನೇತಾರರಾಗಿದ್ದು, ಅವರ ಆರ್ಥಿಕ ಅಭಿವೃದ್ಧಿಗೆ, ಸಾಮಾಜಿಕ ಕ್ಷೇಮವರ್ಧನೆಗೆ ಮತ್ತು ಕೌಟುಂಬಿಕ ಸ್ವಾಸ್ಥ್ಯಕ್ಕೆ ಅಪಾರ ಸೇವೆ ಸಲ್ಲಿಸಿದರು.


ಇವರ ಮಾರ್ಗದರ್ಶನ, ನೆರವು, ಸಲಹೆ ಬೇಡಿಬಂದ ಸಂಸ್ಥೆಗಳು, ಸೇನಾ ವಿಭಾಗಗಳು, ಜನನಾಯಕರು ದೇಶಾದ್ಯಂತ ಹರಡಿ ಹೋಗಿದ್ದಾರೆ. ಪ್ರತಿಯೊಂದು ವಿಷಯದಲ್ಲಿಯೂ ಆಸಕ್ತಿ ಈ ಮಹಾವ್ಯಕ್ತಿಗೆ. ಮಾಜಿ ಯೋಧರ ಪುನರ್ನಿವೇಶನ ಕುರಿತಂತೆ ಧರ್ಮಪ್ರಚಾರಕನ ನಿಷ್ಠೆಯಿಂದ ಕೆಲಸ ಮಾಡಿದರು, ಮಾಡಿಸಿದರು.

ಶಿಸ್ತು, ಸಂಯಮ, ಶೀಲಗಳೇ ಮೈದಳೆನಂತಿದ್ದ ಕಾರ್ಯಪ್ಪನವರು ದೇಶ ಅನಾಗರಿಕ ರಾಜಕಾರಣಿಗಳ ಪಿತೂರಿ ಜಗಳಗಳಿಂದ ನಶಿಸುತ್ತಿರುವುದನ್ನು ಗಮನಿಸಿ ತೀವ್ರ ವ್ಯಾಕುಲದಗ್ಧರಾದರು. ಐದು ವರ್ಷ ಕಾಲ ಸಮಗ್ರ ರಾಷ್ಟ್ರವನ್ನು ರಾಷ್ಟ್ರಪತಿ ಆಳ್ವಿಕೆಗೆ ಒಳಪಡಿಸಬೇಕು ಎಂದು ಇವರೊಮ್ಮೆ ಕರೆ ಕೊಟ್ಟ

ದ್ದರು. ತಾವೇ ರಾಜಕೀಯವನ್ನು ಪ್ರವೇಶಿಸಿ ಸಂಸತ್ತಿಗೆ ಸ್ಪರ್ಧಿಸಿ ಏನಾದರೂ ರಚನಾತ್ಮಕ ಕ್ರಿಯೆ ಎಸಗೋಣವೆಂದು ಬಗೆದರು. ಆದರೆ ಸೈನ್ಯದ ನೇರನಡೆ ಅಲ್ಲ ರಾಜಕೀಯದ ಕರ್ಕಟಗಮನ! ಕಾರ್ಯಪ್ಪನವರು ಚುನಾವಣೆಯಲ್ಲಿ ಪರಾಜಿತರಾದರು—ಮಹಾಸಮರಗಳ ವೀರನಿಗೆ ರಾಜಕೀಯದಲ್ಲಿ ಸೋಲು! ಇದು ಅವರ ಸೋಲಲ್ಲ—ದೇಶದ ನೀತಿಗೆ ಆದ ಅಪಚಾರ.

ಈ ಮಹಾಪುರುಷನ ಚೇತನ ಬಯಸುವುದು ಸದಾ ಒಂದನ್ನೇ: ನನ್ನ ನೆಲ, ನನ್ನ ಜನ, ನನ್ನ ಪರಿಸರ ಸದಾ ಉತ್ಕರ್ಷೆಯಲ್ಲಿರಲಿ, ಪ್ರಪಂಚದ ಇತರ ಯಾವ ರಾಷ್ಟ್ರಕ್ಕೂ ನಾವು ಎರಡನೆಯವರಾಗದಿರಲಿ!

ಮೇಜರ್ ಜನರಲ್ ಸಿ. ಕೆ. ಕರುಂಬಯ್ಯ, ಎಸ್.ಎಂ. (ನಿವೃತ್ತ)



ಮಿತ್ರನನ್ನು ಆಪತ್ಕಾಲದಲ್ಲೂ, ವೀರನನ್ನು ಯುದ್ಧರಂಗದಲ್ಲೂ, ಹೆಂಡತಿಯನ್ನು ಕಷ್ಟ ಕಾಲದಲ್ಲೂ, ಬಂಧುಗಳನ್ನು ಸಂಕಟ ಕಾಲದಲ್ಲೂ ಪರೀಕ್ಷಿಸಿರಿ.

—ಹಿತೋಪದೇಶ

# ಮೊತ್ತಮೊದಲ ಮಕ್ಕಳ ವಿಶ್ವವಿದ್ಯಾನಿಲಯ

ಪ್ರಪಂಚದ ಮೊದಲ 'ಮಕ್ಕಳ ವಿಶ್ವವಿದ್ಯಾನಿಲಯ' ತನ್ನದೇ ಆದ ರೀತಿಯಲ್ಲಿ ರೂಪುಗೊಳ್ಳುತ್ತಿದೆ. ಇದನ್ನು ಹರಿಯಾಣದಲ್ಲಿ ಸ್ಥಾಪಿಸಲು ಯೋಚಿಸಲಾಗಿದೆ.

ಈ ಬಾಲ ವಿಶ್ವವಿದ್ಯಾನಿಲಯದ ಸ್ಥಾಪನೆಗಾಗಿ ಹರಿಯಾಣ-ದೆಹಲಿಯ ಗಡಿ ಪ್ರದೇಶದ ಸಮೀಪದಲ್ಲಿ ೨೦೦ ಎಕರೆ ಭೂಮಿಯನ್ನು ಪಡೆದುಕೊಳ್ಳಲಾಗಿದೆ. ಶಿಕ್ಷಣ ಶಾಸ್ತ್ರಜ್ಞರೂ, ಪತ್ರಕರ್ತರೂ ಸಮಾಜಸೇವಕರೂ ಸೇರಿದಂತೆ ದೇಶದ ೬೦೦ಕ್ಕೂ ಮೀರಿದ ಸಂಖ್ಯೆಯಲ್ಲಿ ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನವೊಂದರಲ್ಲಿ ಭಾಗವಹಿಸಿ ಈ ವಿಶ್ವವಿದ್ಯಾನಿಲಯದ ವಿಸ್ತೃತ ಯೋಜನೆಯ ಬಗ್ಗೆ ಚರ್ಚೆ ನಡೆಸಿದರು. ಈ ಸಮ್ಮೇಳನದಲ್ಲಿ ಪ್ರಸಿದ್ಧ ಮಕ್ಕಳ ಪತ್ರಿಕೆ 'ನಂದನ'ದ ಸಂಪಾದಕರೂ, ಅಖಿಲಭಾರತ ಬಾಲ ಶಿಕ್ಷಕ' ಪರಿಷತ್ತಿನ ಪ್ರಧಾನ ಕಾರ್ಯದರ್ಶಿಗಳೂ ಆದ ಶ್ರೀ ಜಯಪ್ರಕಾಶ್ ಭಾರತಿಯವರ ಹೊಸ ಪೀಳಿಗೆಯಲ್ಲಿ ಏಕತೆ, ಸದ್ಭಾವನೆ ಮತ್ತು ಮಾನವೀಯತೆಯನ್ನು ಹರಡುವುದಕ್ಕಾಗಿ ಬಾಲ ವಿಶ್ವವಿದ್ಯಾನಿಲಯದ ಪರಿಕಲ್ಪನೆಯನ್ನು ಮುಂದಿರಿಸಿ ಅದಕ್ಕೆ ಸಂಬಂಧಿಸಿದಂತೆ ಬರೆದು ಪ್ರಸ್ತುತಪಡಿಸಿದ ಲೇಖನವೊಂದನ್ನು ಇಲ್ಲಿ ಕೊಡಲಾಗಿದೆ.

ಇಂದು ಎಲ್ಲಿ ನೋಡಿದರಲ್ಲಿ ಆತಂಕ, ಉಗ್ರವಾದಿ ಮನೋಭಾವ, ಪ್ರಾಂತೀಯತೆ ಮತ್ತು ರಾಷ್ಟ್ರವಿರೋಧಿ ನಿಲುವು ತಲೆಎತ್ತುತ್ತಿವೆ. ಇಂದಿನ ಆಡಳಿತ ಇವುಗಳನ್ನು ತಡೆದು ಹಾಕುವಲ್ಲಿ ಯಶಸ್ವಿಯಾಗಿಲ್ಲ. ಈ ಉಗ್ರವಾದಿ ಭಾವನೆಯು ನಮ್ಮ ಮುಖಂಡರಲ್ಲಿ ಸಮಸ್ಯೆಯನ್ನು ತಂದೊಡ್ಡಿದೆ. ಅವರು ಎಲ್ಲೆಲ್ಲಿ ಯಾರಮೇಲೆ ಪಹರೆ ಇಡಲು ತಾನೆ ಸಾಧ್ಯ? ವಾಸ್ತವವಾಗಿ ಇಂದಿನ ಬಾಲಕರೇ ಈ ಸಮಸ್ಯೆಗೆ ಉತ್ತರವನ್ನು ಹುಡುಕಬಲ್ಲರು. ಹಿಂದಿನ ೪೦ ವರ್ಷಗಳಿಂದಲೂ ಮಕ್ಕಳನ್ನು ಉಪೇಕ್ಷಿಸುತ್ತಿರುವುದು ಕಂಡು ಬರುತ್ತಿದೆ. ಸ್ವತಂತ್ರ ಭಾರತದಲ್ಲಿ ಹುಟ್ಟಿದ ಮಕ್ಕಳು ಬೆಳೆದು ದೊಡ್ಡವರಾಗಿ ತಂದೆ–ತಾಯಿ, ತಾತ–ಅಜ್ಜಿ ಎನಿಸಿಕೊಂಡಿದ್ದರೂ ಅವರಲ್ಲಿ ಬಹುಮಂದಿ ಸ್ವತಂತ್ರ ದೇಶದ

---

೧೯೮೯ರ ಜೂನ್ ತಿಂಗಳ 'ನವನೀತ್' ಮಾಸಿಕದಲ್ಲಿ ಪ್ರಕಟವಾದ ಶ್ರೀ ಜಯಪ್ರಕಾಶ್ ಭಾರತಿಯವರ 'ವಿಶ್ವ ಕಾ ಪಹಲಾ ಬಾಲ ವಿಶ್ವವಿದ್ಯಾನಿಲಯ್' ಲೇಖನದ ಕನ್ನಡಾನುವಾದ.

ನಾಗರೀಕರ ರೀತಿಯ ನಡೆನುಡಿಗಳನ್ನು ತಮ್ಮದಾಗಿಸಿಕೊಳ್ಳದವರಾಗಿದ್ದಾರೆ. ಅವರ ನಡವಳಿಕೆಯೂ ಹಾಗಿಲ್ಲ. ದೇಶದ ಶೇಕಡ ೭೦ಕ್ಕೂ ಹೆಚ್ಚು ಬಾಲಕರು ಶಿಕ್ಷಣದಂತಹ ಮೂಲಭೂತ ಸೌಕರ್ಯ ಸವಲತ್ತುಗಳಿಂದ ವಂಚಿತರಾಗಿದ್ದಾರೆ. ಅವರ ಬದುಕಿನ ಕನಸುಗಳು ಒಡೆದು ನುಚ್ಚುನೂರಾಗಿವೆ. ಇಂದು ದೂರದರ್ಶನದಂತಹ ಮಾಧ್ಯಮ ಇವರಲ್ಲಿ ಹೊಸ ಮಾದರಿಯ ಆಸೆ ಆಕಾಂಕ್ಷೆಗಳನ್ನು ಹುಟ್ಟಿಸುವ ಆಶಾದೀಪವಾಗಿದೆ. ಆದರೆ ಅವರು ಆರೋಗ್ಯವಂತ ಅಥವಾ ಶಿಸ್ತಿನ ನಾಗರೀಕರಾಗಿ ಇವುಗಳನ್ನು ಅಳವಡಿಸಿಕೊಳ್ಳಲಾರದವರಾಗಿದ್ದಾರೆ. ಈ ಭೂಮಿಯ ಜೊತೆ ಸಾಮಾನ್ಯ ಭಾರತೀಯನ ಸಂಬಂಧವನ್ನು ಕಲ್ಪಿಸುವ ಹಿಂದಿನಿಂದ ಬಂದ ಸಂಸ್ಕೃತಿಯನ್ನೇ ಬುಡಮೇಲು ಮಾಡುವ ಪ್ರಯತ್ನ ನಡೆಯುತ್ತಿದೆ. ಇಂತಹ ಸ್ಥಿತಿಯಲ್ಲಿ ನಾವು ಶಾಂತಿಮಂತ್ರವನ್ನೇನೋ ಓದಬಲ್ಲೆವು; ಆದರೆ ದೇಶದ ಸುಖಶಾಂತಿ ಮತ್ತು ಸಮೃದ್ಧಿಗಳನ್ನು ಸಾಕಾರಗೊಳಿಸಲಾರೆವು.

ಈ ಕಾರ್ಮೋಡಗಳ ನಡುವೆ ಆಶಾಕಿರಣವೊಂದು ಇದೀಗ ಮೂಡಿಬಂದಿದೆ. ಪ್ರಪಂಚದಲ್ಲೇ ಮೊಟ್ಟಮೊದಲ ಬಾರಿಗೆ ಮಕ್ಕಳ ವಿಶ್ವವಿದ್ಯಾನಿಲಯ ಅಂದರೆ 'ಚಿಲ್ಡ್ರನ್ಸ್ ಯೂನಿವರ್ಸಿಟಿ'ಯನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಇಂದಿನ ಬಾಲಕ ಸಾಮಾಜಿಕ ಕುಂದುಕೊರತೆಗಳನ್ನು ನೀಗಿ ಉನ್ನತಿಯ ಕಡೆಗೆ ಸಾಗುವ ದಾರಿಯನ್ನು ನಿರ್ಮಿಸಬಲ್ಲ. ಹಿಂದಿನ ನಾಲ್ಕು ದಶಕಗಳಲ್ಲಿ ಪಡೆದ ಶಿಕ್ಷಣ ಸಾರ್ಥಕವಾಗಿಲ್ಲ ಎಂಬುದನ್ನು ನಾವು ಈಗಾಗಲೇ ಕಂಡುಕೊಂಡಿದ್ದೇವೆ. ಬ್ರಹ್ಮಾಂಡದ ಅತಿ ಚಿಕ್ಕ ಸ್ವರೂಪಿ ಬಾಲಕ. ತಾಯಿ ಯಶೋಧೆಯು ಒಂದು ದಿನ ಬಾಲಕೃಷ್ಣನನ್ನು ಜ್ಞೈದಳು. ಅವನು ಎಲ್ಲಿ ಬೆಣ್ಣೆಯನ್ನು ಕದ್ದು ತಿಂದಿರುವನೋ ಎಂಬ ಸಂದೇಹ ಅವಳನ್ನು ಕಾಡುತ್ತಿತ್ತು. ಬಾಯಿತೆರೆದು ತೋರೆಂದು ಹೇಳಿದಾಗ ಅಲ್ಲಿ ಅವಳಿಗೆ ವಿಶ್ವದರ್ಶನವಾಯಿತು.

ಮಕ್ಕಳ ವಿಶ್ವವಿದ್ಯಾನಿಲಯದ ಈ ಕಲ್ಪನೆ ಅನುಪಮವಾದದ್ದು. 'ಬಾಲಕ' ಮತ್ತು 'ವಿಶ್ವವಿದ್ಯಾನಿಲಯ' ಈ ಎರಡೂ ಶಬ್ದಗಳು ಒಟ್ಟಾಗಿರುವುದನ್ನು ನಮ್ಮ ಶಿಕ್ಷಣ ಶಾಸ್ತ್ರಜ್ಞರು ಒಪ್ಪಿಕೊಳ್ಳುವುದಿಲ್ಲ. ಪರಂಪರಾಗತ ವಿಶ್ವವಿದ್ಯಾನಿಲಯದ ಕಲ್ಪನೆಯನ್ನು ಬಿಟ್ಟು ಬೇರೊಂದನ್ನು ಕಲ್ಪಿಸಿಕೊಳ್ಳುವುದನ್ನು ಅವರು ಒಪ್ಪುವುದಿಲ್ಲ. ವಿಶ್ವವಿದ್ಯಾನಿಲಯ ಅನುದಾನ ಆಯೋಗದ ಮೇಲ್ವಿಚಾರಣೆಯಡಿಯಲ್ಲಿ ಬಹಳಷ್ಟು ವಿಶ್ವವಿದ್ಯಾನಿಲಯಗಳು ಇಂದು ಶವಾಗಾರಗಳಂತೆ ಕಾಣಿಸುತ್ತಿವೆ. ಇಂದಿನ ಬುದ್ಧಿಜೀವಿ ಸಮಾಜ ಪಾಶ್ಚಾತ್ಯದೇಶಗಳ ಸಾಕುಪಶುವಿನಂತಿದೆ. ಇಂತಹ ಸ್ಥಿತಿಯಲ್ಲಿ ಪರಂಪರೆಯ ಜಾಡಿನಿಂದ ದೂರಸರಿದ ವಿಶ್ವವಿದ್ಯಾನಿಲಯಗಳೇ ಈ

ದೇಶವನ್ನು ಸರಿಯಾದ ಶಿಕ್ಷಣದ ದಾರಿಯಲ್ಲಿ ಕರೆದುಕೊಂಡು ಹೋಗಬಲ್ಲವು. ಮಕ್ಕಳ ವಿಶ್ವವಿದ್ಯಾನಿಲಯದಲ್ಲಿ ಮಕ್ಕಳ ಶಿಕ್ಷಣ ಹಾಗೂ ಸಂಶೋಧನ ಶಕ್ತಿಗಳನ್ನು ಒಂದೇ ಪರಿಸರದಲ್ಲಿ ಬೆಳೆಸಲಾಗುವುದು.

ಮಕ್ಕಳ ವಿಶ್ವವಿದ್ಯಾನಿಲಯವು ಪರಂಪರಾಗತ ಭಾವನೆಯಿಂದ ದೂರವಾಗಿ ಆಯೋಗದ ಭುಜಕ್ಕೆ ನೇತುಬೀಳದ ವಿಶ್ವವಿದ್ಯಾನಿಲಯವಾಗುವುದು. ಅವರಲ್ಲಿ ೩ ಭಾಗಗಳುಂಟು.

೧. ಬಾಲಶಿಕ್ಷಣದ ಬಗೆಗಿನ ಪರಿಕಲ್ಪನೆಗೆ ಸಾಕಾರ ರೂಪು ಕೊಡುವ ವಿದ್ಯಾಲಯ.

೨. ವಿಶೇಷ ಶಿಕ್ಷಣ ಶಾಖೆಗಳು ಹಾಗೂ ಭಿನ್ನ ಭಿನ್ನ ಸಂಶೋಧನ ಸಂಸ್ಥೆಗಳು.

೩. ವಿಶ್ವವಿದ್ಯಾನಿಲಯದ ಆವರಣದಲ್ಲಿ ಭಾರತ ದರ್ಶನ

ವಿದ್ಯಾನಿಲಯದ ಶಿಶು ವಿಭಾಗದಲ್ಲಿ ಕುಣಿದು ಕುಪ್ಪಳಿಸಿ ನಕ್ಕು ನಲಿಯುವ ೩ ರಿಂದ ೫ ವರ್ಷಗಳಿಗೆ ಒಳಪಟ್ಟು ಮಕ್ಕಳು ಮಾತ್ರ ಇರುವರು. ಅವರಿಗೆ ಆಟದ ಮೂಲಕವೇ ಶಿಕ್ಷಣವನ್ನು ಕೊಡಲಾಗುತ್ತದೆ. ಇದಕ್ಕಾಗಿ ಯಾವ ಪ್ರತೇಕ ಪಠ್ಯಪುಸ್ತಕಗಳನ್ನೂ ಗೊತ್ತುಪಡಿಸಲಾಗುವುದಿಲ್ಲ.

ಮುಖ್ಯ ವಿದ್ಯಾಲಯದಲ್ಲಿ ೫ ವರ್ಷಕ್ಕೂ ಮೇಲ್ಪಟ್ಟ ಮಕ್ಕಳು ಪ್ರವೇಶ ಪಡೆಯಲು ಅರ್ಹರು ಈ ಯೋಜನೆಯ ಅನ್ವಯ ಪ್ರಾರಂಭದಲ್ಲಿ ೧೦೦೦ ಮಕ್ಕಳೂ, ಅನಂತರ ಪ್ರತಿ ವರ್ಷಕ್ಕೆ ೧೦೦೦ ಮಕ್ಕಳು ವಿದ್ಯಾನಿಲಯ ಸೇರಲು ಅರ್ಹರು. ಆದರೆ ವಿಶ್ವವಿದ್ಯಾನಿಲಯದಲ್ಲಿ ೧೦,೦೦೦ ಕ್ಕೂ ಹೆಚ್ಚು ಮಕ್ಕಳನ್ನು ಸೇರಿಸಿಕೊಳ್ಳಲಾಗುವುದಿಲ್ಲ. ಹಿಂದುಳಿದ ಹಾಗೂ ಗ್ರಾಮೀಣ ಮಕ್ಕಳಿಗೂ ಪ್ರವೇಶಾವಕಾಶ ಉಂಟು. ಹೀಗೆ ವಿದ್ಯಾನಿಲಯ ಸೇರಿದ ಮಕ್ಕಳು ೧೧ ನೆಯ ವಯಸ್ಸಿನವರೆಗೂ ಶಿಕ್ಷಣ ಪಡೆಯುವರು. ಶಿಕ್ಷಣ ಕಾಲದಲ್ಲಿ ಅವರು ೩ ಭಾಷೆಗಳನ್ನು ಕಲಿಯುವರು. ಇವಲ್ಲದೆ ದಿನನಿತ್ಯದ ಬಳಕೆಯಲ್ಲಿರುವ ಗಣಿತ ಮತ್ತಿತರ ವಿಷಯಗಳನ್ನು ಅವರಿಗೆ ಕಲಿಸಲಾಗುವುದು. ಈ ಶಿಕ್ಷಣ ವಿಭಾಗದಲ್ಲಿ ಪುಸ್ತಕಗಳ ರಾಶಿ ಇರುವುದಿಲ್ಲ ಅಷ್ಟೇ ಅಲ್ಲ, ಅಧ್ಯಯನದ ಅವಧಿಯಲ್ಲಿ ವಿಶ್ವವಿದ್ಯಾನಿಲಯದ ಆವರಣದಲ್ಲಿ ಕೆಲಸವನ್ನು ಸಹ ಅವರು ಮಾಡುವರು. ಯಾವುದಾದರೊಂದು ಕಸುಬನ್ನು ಕಲಿತು ೧೭ ವರ್ಷಗಳಾಗುತ್ತಲೇ ಅವರು ಇಷ್ಟಪಟ್ಟಲ್ಲಿ ಆ ಕ್ಷೇತ್ರದಲ್ಲಿ ಕೆಲಸ ಶುರು ಮಾಡಬಹುದು. ಹನ್ನೊಂದು

ವರ್ಷಗಳ ಈ ಶಿಕ್ಷಣ ಕಾಲದಲ್ಲಿ ಅವರು ಪರೀಕ್ಷೆಗಳ ಇಲ್ಲವೇ ಪ್ರಮಾಣ ಪತ್ರಗಳ ಬಂಧನಕ್ಕೊಳಗಾಗುವುದಿಲ್ಲ.

ಇದಾದ ಮೇಲೆ ಮಕ್ಕಳ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ವಿಶೇಷ ವಿಷಯದ ಬಗೆಗಿನ ಹೆಚ್ಚಿನ ಶಿಕ್ಷಣ ಪಡೆಯುವರು. ತಮ್ಮ ಅಭಿರುಚಿಯ ವಿಷಯದಲ್ಲಿ ಹೆಚ್ಚಿನ ಪರಿಣತಿ ಪಡೆಯುವುದಕ್ಕಾಗಿ ಅವರು ಆಯಾ ಕ್ಷೇತ್ರದ ವಿಶೇಷಜ್ಞರ ನೆರವಿನಿಂದ ಅಧ್ಯಯನ ಮಾಡುವರು. ಈ ರೀತಿಯ ಅಧ್ಯಯನದ ಅವಧಿ ೬ ರಿಂದ ೭ ವರ್ಷಗಳು. ಕೆಲವು ಸಂದರ್ಭಗಳಲ್ಲಿ ಹೆಚ್ಚೆಂದರೆ ಈ ಅವಧಿಯನ್ನು ೧೦ ವರ್ಷಗಳವರೆಗೆ ಹೆಚ್ಚಿಸಲಾಗುವುದು.

ಮಕ್ಕಳ ವಿಶ್ವವಿದ್ಯಾನಿಲಯದಲ್ಲಿ ಈ ವಿಶೇಷ ಶಿಕ್ಷಣವನ್ನು ಮುಗಿಸಿ ಹೊರ ಬರುವ ವಿದ್ಯಾರ್ಥಿಗಳು ಕೆಲಸಕ್ಕಾಗಿ ಅಲೆಯುವ ಅಗತ್ಯವಿಲ್ಲ. ಅವರು ಇಷ್ಟಪಟ್ಟಲ್ಲಿ ಜೀವನ ಪರ್ಯಂತ ವಿಶ್ವವಿದ್ಯಾನಿಲಯದಲ್ಲೇ ತಮ್ಮ ದುಡಿಮೆಯನ್ನು ಮುಂದುವರಿಸಬಹುದು. ಇದಕ್ಕಾಗಿ ಅವರಿಗೆ ಒಳ್ಳೆಯ ಸಂಬಳವನ್ನು ನೀಡಲಾಗುವುದು.

ಮಕ್ಕಳ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಬುದ್ಧಿ ಮತ್ತು ತಿಳಿವಳಿಕೆ ತಾನೇತಾನಾಗಿ ವಿಕಸಿತಗೊಳ್ಳುವುವು. ವಿಶ್ವವಿದ್ಯಾನಿಲಯದ ಆವರಣದಲ್ಲಿ 'ಕಿರು ಭಾರತ' ವೊಂದನ್ನು ನಿರ್ಮಿಸಲಾಗುವುದು. ಹೀಗೆ ಸಾಂಸ್ಕೃತಿಕ ಕೇಂದ್ರದ ಸ್ಥಾಪನೆಗೆಂದು ಪ್ರತಿಯೊಂದು ರಾಜ್ಯಕ್ಕೂ ಅಲ್ಲಿ ಭೂಮಿಯನ್ನು ಕೊಡಲಾಗುವುದು. ಈ ಕೇಂದ್ರಗಳ ಕೆಲಸಕಾರ್ಯಗಳು ವರ್ಷದಲ್ಲಿ ೧೨ ತಿಂಗಳು ನಡೆಯುತ್ತದೆ. ಆಯಾ ರಾಜ್ಯದ ಜನಜೀವನದ ಆಚಾರವಿಚಾರಗಳು, ಸಂಸ್ಕೃತಿ ನಡವಳಿಕೆ, ಊಟ–ಉಡಿಗೆಗಳ ಪ್ರಭಾವ ಪ್ರತಿಯೊಬ್ಬ ವಿದ್ಯಾರ್ಥಿಯ ಮೇಲೂ ಬೀಳುವುದು. ಆಯಾ ರಾಜ್ಯದ ಹಬ್ಬ ಹರಿದಿನಗಳನ್ನೂ ಅಲ್ಲಿ ಆಚರಿಸಲಾಗುವುದು.

ಮಕ್ಕಳ ಈ ವಿಶ್ವವಿದ್ಯಾನಿಲಯದಲ್ಲಿ ಮಕ್ಕಳಿಗೆ ಸಂಬಂಧಿಸಿದಂತೆ ಎಲ್ಲಾ ರೀತಿಯ ಸಂಶೋಧನ ಕಾರ್ಯಗಳನ್ನು ಕೈಗೊಳ್ಳಲಾಗುವುದು. ಅವರ ಆರೋಗ್ಯ, ಮನೋವಿಜ್ಞಾನ, ಆಚರಣೆ, ಮನರಂಜನೆ, ಆಟಪಾಠಗಳು, ಶಿಕ್ಷಣ ವಿಧಾನ ಹಾಗೂ ವಿಜ್ಞಾನ ಇವೇ ಮೊದಲಾದ ವಿಷಯಗಳಲ್ಲಿ ಸಂಶೋಧನೆ ಮಾಡುವ ಅವಕಾಶವನ್ನು ಕಲ್ಪಿಸಿಕೊಡಲಾಗುವುದು. ಪ್ರಾರಂಭಕ್ಕೆ ಈ ವಿಶ್ವವಿದ್ಯಾನಿಲಯದಲ್ಲಿ ಕೆಳಕಂಡ ಐದು ಸಂಸ್ಥೆಗಳನ್ನು ಸ್ಥಾಪಿಸುವ ಯೋಜನೆ ಇದೆ.

ಮಕ್ಕಳ ಆರೋಗ್ಯ ಸಂಶೋಧನ ಸಂಸ್ಥೆ (Institute for child health)

ಮಕ್ಕಳ ಮನರಂಜನೆ ಸಂಸ್ಥೆ (Institute of toys & Hobbies)

ಮಕ್ಕಳ ಶಿಕ್ಷಣ ಅಧ್ಯಯನ ಮತ್ತು ಸಂಶೋಧನ ಸಂಸ್ಥೆ (Institute of school)

ಮಕ್ಕಳ ಕ್ರೀಡಾ ಚಟುವಟಿಕೆಗಳ ಸಂಸ್ಥೆ Institute of Games & sports)

ವಿಶ್ವ ಮಕ್ಕಳ ಸಾಹಿತ್ಯ ಸಂಸ್ಥೆ (Institute for world child-ran's literature)

ಇವರಲ್ಲಿ ನವೀನ ಮಾದರಿಯ ದೃಶ್ಯ-ಶ್ರವ್ಯ ಸಾಮಗ್ರಿಗಳು ಮತ್ತು ಅತಿದೊಡ್ಡ ಗ್ರಂಥಾಲಯಗಳೂ ಸೇರಿವೆ.

ಮಕ್ಕಳ ವಿಶ್ವವಿದ್ಯಾನಿಲಯ ಸಂಪೂರ್ಣ ರೂಪರೇಷೆಯನ್ನು ನಿರ್ಮಿಸಲು ರಚಿಸಲಾದ ಸಮಿತಿಯ ಅಧ್ಯಕ್ಷರಾಗಿ ದೇಶದ ಪ್ರಮುಖ ಶಿಕ್ಷಣ ಶಾಸ್ತ್ರಜ್ಞ ಪ್ರೊಫೆಸರ್ ಮುನಿಸ್ ರಜಾರವರು ನೇಮಕಗೊಂಡಿದ್ದಾರೆ. ಅವರ ಹೇಳಿಕೆಯಂತೆ ರಾಜಧಾನಿಯ ಬಳಿಯಲ್ಲಿ ಪ್ರಾರಂಭಿಸಲಾಗುವ ಈ ಮಕ್ಕಳ ವಿಶ್ವವಿದ್ಯಾನಿಲಯ ಮೂಲಕ್ಷೇತ್ರದಂತಿದ್ದು ದೇಶದ ವಿಭಿನ್ನ ಭಾಗಗಳಲ್ಲಿ ವಿಶ್ವವಿದ್ಯಾನಿಲಯಕ್ಕೆ ಸೇರಿದಂತೆ ಬೇರೆಬೇರೆ ಆವರಣಗಳನ್ನು (ಕ್ಯಾಂಪಸ್) ಪ್ರಾರಂಭಿಸಿ, ಇವರ ವ್ಯಾಪ್ತಿಯನ್ನು ವಿಸ್ತರಿಸಲಾಗುವುದು. ಭಾರತದ ಮಾಜಿ ಉಪರಾಷ್ಟ್ರಪತಿ ಶ್ರೀ ಬಿ. ಡಿ. ಜತ್ತಿಯವರು ಇದರ ಸೂತ್ರಧಾರರು. ಭಾರತೀಯ ಬಾಲ ಶಿಕ್ಷಣ ಪರಿಷತ್ತಿನವರು ಈಗಾಗಲೇ ಈ ನಿಟ್ಟಿನಲ್ಲಿ ಮುನ್ನಡೆ ಇಟ್ಟು ೩೦೦ಎಕರೆ ಜಮೀನು ಪಡೆದುಕೊಂಡಿದ್ದಾರೆ. ಭಿನ್ನ ಭಿನ್ನ ಕ್ಷೇತ್ರದಲ್ಲಿನ ತಜ್ಞರು ಈ ವಿಭಿನ್ನ ಸಂಸ್ಥೆಗಳ ಕೆಲಸಕಾರ್ಯಗಳ ಸ್ವರೂಪದ ಕರಡನ್ನು ತಯಾರಿಸುತ್ತಿದ್ದಾರೆ.

ಗುರು ರವೀಂದ್ರರ ಶಾಂತಿನಿಕೇತನ, ಪಾಂಡಿಚರಿಯ ಅರವಿಂದರ ಆಶ್ರಮ, ಗುರುಕುಲಪದ್ಧತಿ ಗಿಜುಭಾಯಿಯವರ ಬಾಲಮಂದಿರ ಹಾಗೂ ಇವಾನ್ ಇಲೀಚರ 'ಶಾಲೆಯಿಲ್ಲದ ಸಮಾಜ'ದ ಎಲ್ಲಾ ಒಳ್ಳೆಯ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮಕ್ಕಳ ವಿಶ್ವವಿದ್ಯಾನಿಲಯದ ಯೋಜನೆಯನ್ನು ಮುಂದುವರಿಸಲಾಗುವುದು. ಇದು ಸಂಪೂರ್ಣವಾಗಿ ಅಸ್ತಿತ್ವಕ್ಕೆ ಬರುವುದಕ್ಕೆ ಇನ್ನೂ ಕೆಲಕಾಲ ಬೇಕಾಗುವುದು. ನವೆಂಬರ್ ೧೯೮೭ರಲ್ಲಿ ನಡೆದ 'ರಾಷ್ಟ್ರೀಯ ಮಕ್ಕಳ ಶಿಕ್ಷಣ ಸಮ್ಮೇಳನ'ದಲ್ಲಿ ದೇಶದ ವಿವಿಧ ಭಾಗಗಳಿಂದ ಒಂದು ಸಾವಿರ

ಮಂದಿ ಶಿಕ್ಷಣ ಶಾಸ್ತ್ರಜ್ಞರೂ ಶಿಕ್ಷಕರೂ ವಿಚಾರವಂತರೂ ಮಕ್ಕಳ ಬಗ್ಗೆ ಆಳವಾಗಿ ಆಲೋಚಿಸಬಲ್ಲ ತಜ್ಞರೂ ಭಾಗವಹಿಸಿದ್ದರು. ಆ ದಿನಗಳಲ್ಲಿ ಶಿಕ್ಷಣ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿಯಾಗಿದ್ದ ಶ್ರೀಮತಿ ಕೃಷ್ಣಾ ಸಾಹಿ ಅವರು ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಸಾಹಿಯವರು ಈ ವಿಶ್ವವಿದ್ಯಾನಿಲಯವನ್ನು ಕುರಿತು ಹೀಗೆ ಹೇಳಿರುವರು—'ಈ ಮಕ್ಕಳ ವಿಶ್ವ ವಿದ್ಯಾನಿಲಯು ಮಕ್ಕಳ ಸರ್ವತೋಮುಖ ವಿಕಾಸಕ್ಕೆ ನಾಂದಿ. ಈ ಯೋಜನೆ ಯನ್ವಯ, ಮಕ್ಕಳ ಜ್ಞಾನಾರ್ಜನೆಗಾಗಿ ಪಠ್ಯಪುಸ್ತಕಗಳ ದಬ್ಬಾಳಿಕೆ ಇಲ್ಲ. ಬದಲಾಗಿ ಅವರ ಆಟಪಾಠ, ಆರೋಗ್ಯ, ಮನರಂಜನೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಮಕ್ಕಳ ಬಹುಮುಖ ವಿಕಾಸದತ್ತ ಗಮನ ಹರಿಸಲಾಗುವುದು. ಇದರಿಂದ ಅವರ ಮಾನಸಿಕ ಶಕ್ತಿ ಹೆಚ್ಚುವುದು, ಮಾತ್ರ ವಲ್ಲದೆ ಇದು ರಾಷ್ಟ್ರೀಯ ಏಕತೆ ಹಾಗೂ ಸದ್ಭಾವನೆಯನ್ನು ರೂಢಿಸುವ ಒಂದು ಯಶಸ್ವಿ ಪ್ರಯಾಸ.'

ಮಕ್ಕಳ ವಿಶ್ವವಿದ್ಯಾನಿಲಯದ ಕಾರ್ಯಕರ್ತರು 'ಜೀವನ ಶಿಕ್ಷಣ' (ಅನುಭವದ ಶಿಕ್ಷಣ)ವನ್ನು ಆದರ್ಶವಾಗಿಟ್ಟು ಕೊಂಡಿರುವರು.

ಈ ಯೋಜನೆಯು ನಿಶ್ಚಯವಾಗಿಯೂ ಹೊಸಪೀಳಿಗೆಯಲ್ಲಿ ಏಕತೆ, ಸದ್ಭಾವನೆ ಹಾಗೂ ಮಾನವೀಯತೆಯ ಬೀಜವನ್ನು ಬಿತ್ತುವುದು.

ಭಾರತದ ಮುಖ್ಯ ನ್ಯಾಯಾಧೀಶರೂ, ಪರಿಷತ್ತಿನ ಮುಖ್ಯ ಸಂರಕ್ಷಕರೂ ಆದ ಶ್ರೀ ರಘುನಂದನ ಸ್ವರೂಪ್ ಪಾಠಕರು ಸಮ್ಮೇಳನದಲ್ಲಿ ಹೀಗೆ ಹೇಳಿದರು 'ಭಾರತೀಯ ಬಾಲ ಶಿಕ್ಷಣ ಪರಿಷತ್ತು ಇಂದು ಮಕ್ಕಳ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ದಿಕ್ಕಿನಲ್ಲಿ ಮುನ್ನಡೆಯಲು ಪ್ರಾರಂಭಿಸಿದೆ. ಶಾಂತಿ-ಅಹಿಂಸೆ, ಹಾಗೂ ಸಹೋದರ ಭಾವವನ್ನು ಮೂಡಿಸುವ ಸಂಸ್ಕೃತಿ ಮತ್ತು ಜೀವನದ ಶಾಶ್ವತ ಮೌಲ್ಯಗಳು ನಮ್ಮ ಈ ಪ್ರಯತ್ನಗಳ ಅವಿಭಾಜ್ಯ ಅಂಗಗಳಾಗಲೆಂದು ಆಶಿಸು ತ್ತೇನೆ. ನಮ್ಮ ಮಕ್ಕಳ ಜಾತಿ-ಧರ್ಮ ಒಂದೇ; ಅವರು ಭಾರತದ ನಾಗರಿಕರು ಮತ್ತು ಈ ಭಾರತೀಯ ಸಮಾಜ ವಿಶಾಲ ಪ್ರಪಂಚದ ಒಂದು ಅಂಗ ಎಂಬ ತಿಳುವಳಿಕೆಯನ್ನು ನಾವು ನಮ್ಮ ಮಕ್ಕಳಿಗೆ ನೀಡಬೇಕು. ಸದ್ವಿಚಾರ, ವಿವೇಕ ಹಾಗೂ ಕ್ರಿಯಾಶೀಲತೆಯ ಬಗ್ಗೆ ನೀಡುವ ಶಿಕ್ಷಣವೇ ನಿಜವಾದ ಶಿಕ್ಷಣ. ಈ ಶಿಕ್ಷಣದಲ್ಲಿ ಸೃಜನಾತ್ಮಕತೆ, ಮೌಲಿಕತೆ ಹಾಗೂ ಉನ್ನತಿಗೆ ಹೆಚ್ಚು ಮಹತ್ವ ಕೊಡಬೇಕು. ಇಂತಹ ಶಿಕ್ಷಣ ನಮ್ಮ ಸಮಾಜದ ಸಚ್ಚಾರಿತ್ರ್ಯ ಮತ್ತು ಸುಸಂಸ್ಕೃತಿಯ ಆಧಾರಸ್ತಂಭವಾಗಿರಬೇಕು.

ಈ ಮಕ್ಕಳ ವಿಶ್ವವಿದ್ಯಾನಿಲಯಗಳು ಉನ್ನತ ಜ್ಞಾನ ಮತ್ತು ವ್ಯಕ್ತಿತ್ವವನ್ನು ಹೊಂದಿ ಮುಂಬರುವ ದಿನಗಳನ್ನು ದೃಢವಿಶ್ವಾಸ ಹಾಗೂ ನಂಬಿಕೆಯಿಂದ ಎದುರಿಸುತ್ತ ದೇಶದ ಹಿರಿಮೆಯನ್ನು ಹೆಚ್ಚಿಸುವ ಪೂರ್ಣ ನಾಗರೀಕರನ್ನು ಸೃಷ್ಟಿಸುವುವು ಎಂಬ ನಂಬಿಕೆ ನನಗಿದೆ.

ಉಮಾಅರೋರಾ

---

ಸಭಾನಾಯಕನಾದ ವಿದ್ವಾಂಸನು ಯಾವುದೋ ಜಾತಿಗೆ ಸೇರಿದ ಯಾವುದೋ ತಾಳದಲ್ಲಿ ಪಲ್ಲವಿ ಎತ್ತಿ, ಬೇರೆ ಬೇರೆ ವಿಚಿತ್ರ ವಿನ್ಯಾಸಗಳಿಂದ ಜಾತಿ ಭೇದಗಳನ್ನು ತೋರುವಾಗ, ತಾಳ ತಪ್ಪಿ ಹೋಗುವುದೆಂಬ ಭಯದಿಂದ ಮುಖವೆಲ್ಲವೂ ಬೆವರುತ್ತಿರಲು, ತೊಡೆಯ ಮೇಲೆ ತೊಗಲೇಳುವ ಹಾಗೆ ಕೈ ತಟ್ಟುತ್ತ, ಮುಖವನ್ನು ಮುಡಿಹಾಕಿ, ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು, ನರಗಳೆಲ್ಲವನ್ನೂ ಬಿಗಿ ಮಾಡಿಕೊಂಡು, ಗಂಟಲು ಒಣಗಿ ಗರಸಾಗುತ್ತಿರಲು, ಕೈಗಳನ್ನು ಬೀಸುತ್ತ ಮಾಡುವ ವಿಕಾರಗಳ ಜೊತೆಗೆ, ಪಿಟೀಲು ಮೃದಂಗಗಳವರೂ ಹೀಗೆ ಒಬ್ಬರನ್ನ ಮೀರಿಸಿ ಇನ್ನೊಬ್ಬರು ಮಾಡುತ್ತಿರುವ ಕಟ ಕಟ ಡಮ ಡಮ ಧ್ವನಿಗಳೊಡನೆ ಸಭ್ಯರಲ್ಲಿ ಇಂಥ ವೀರಾವೇಶವುಳ್ಳವರು ಕೆಲವರು ಶಕ್ತ್ಯನುಸಾರವಾಗಿ ತಾಳವನ್ನು ಕೈಗಳಿಂದ ತಟ್ಟುವ ಪಟಪಟ ಧ್ವನಿಗಳನ್ನು ಸಾರಿ ನಾದ ನಶಿಸಿ, ಲಯ ಲಯಿಸಿ, ಯಾವುದೋ ನಿರ್ಘೋಷವೊಂದು ಕಿವಿಗಳನ್ನ ದಿಮ್ಮು ಹಿಡಿಸುತ್ತಿರಲು—ಅಂಥ ಸಂಗೀತದ ಜಂಝಾಮಾರುತದಲ್ಲಿ ಭಾವಕ್ಕೂ ರಸಕ್ಕೂ ಭ್ರಾಂತಿಪಟ್ಟು ಬಂದ ರಸಿಕರಿಗೆ ಬೇಸರವಲ್ಲದೆ ಇನ್ನೇನು ಬಂದೀತು? ಕಬ್ಬಿಣದ ಅಂಗಡಿಯಲ್ಲಿ ದುಂಬಿಗಳಿಗೇನಿದೆ?

—ರಾಳ್ಳಪಲ್ಲಿ ವಾಣಿ

# ಆನಂದಿಬಾಯಿ ಜೋಷಿ: ವಿಜಯ ಹಾಗೂ ದುರಂತ

ಇಂಗ್ಲೆಂಡಿನಲ್ಲಿ ಉಚ್ಚ ಗಣಿತಶಿಕ್ಷಣ ಪಡೆದು ಆದರೆ ಆ ವೇಳೆ ಸ್ವಂತಾರೋಗ್ಯ ವನ್ನು ಲಕ್ಷಿಸದೇ ಕ್ಷಯರೋಗಗ್ರಸ್ತ ರಾಗಿ ಭಾರತಕ್ಕೆ ಮರಳಿ ಪತ್ನಿಯ ಎದುರೇ ಕೊನೆಯುಸಿರೆಳೆದ ಗಣಿತ ಪ್ರಭೃತಿ ಶ್ರೀನಿವಾಸ ರಾಮಾನುಜನ್ ಅವರ (೧೮೮೭-೧೯೨೦) ಉಲ್ಕಾಸದೃಶ ಜೀವನಕ್ಕೂ ಅಮೆರಿಕದಲ್ಲಿ ವೈದ್ಯಶಿಕ್ಷಣ ಪಡೆದು ಆದರೆ ಆ ವೇಳೆ ಸ್ವಂತಾರೋಗ್ಯವನ್ನು ಲಕ್ಷಿಸದೇ ಕ್ಷಯರೋಗಗ್ರಸ್ತ ರಾಗಿ ಭಾರತಕ್ಕೆ ಮರಳಿ ಪತಿಯ ಎದುರೇ ಕೊನೆಯುಸಿರೆಳೆದ ವೈದ್ಯ ಪದವೀಧರೆ ಆನಂದಿಬಾಯಿ ಜೋಷಿ (೧೮೬೫-೧೮೮೭) ಅವರ ಉಲ್ಕಾಸದೃಶ ಜೀವನಕ್ಕೂ ನಡುವೆ ಎದ್ದು ಕಾಣುವ ಸಾಮ್ಯ ಕೇವಲ ಆಕಸ್ಮಿಕವಲ್ಲ. ಇದು ಅಂದಿನ ಭಾರತದ ಸ್ಥಗಿತ ಪರಂಪರೆಗೆ ಈ ಯುವ ಜೀವಗಳು ಅರ್ಪಿಸಿದ ಬಲಿದಾನ. ದೇಶ ಇಂಥ ದುರ್ಘಟನೆಗಳಿಂದ ಪಾಠ ಕಲಿತಿದೆ ಎನ್ನುವುದಕ್ಕೆ ಇಂದಾದರೂ ಸ್ಪಷ್ಟ ಪುರಾವೆಗಳು ಲಭಿಸುತ್ತಿಲ್ಲ. ಪರಂಪರೆಯ ಹೆಣಭಾರ ಯುವ ಜನತೆಗೆ ಉರುಳಾಗಿ ಮುಂದುವರಿದೇ ಇದೆ.

**ಸಂಪಾದಕ**

ತಮ್ಮ ನಿರೀಕ್ಷಣಾಕೋಣೆಯಲ್ಲಿ ಹಳೆಯ ನಿಯತಕಾಲಿಕೆಗಳು ಮತ್ತು ವರ್ತಮಾನ ಪತ್ರಿಕೆಗಳನ್ನಿಡುವ ವೈದ್ಯರ ಪರವಾಗಿ ಹೇಳಬೇಕಾದ ಕೆಲವು ವಿಚಾರಗಳಿವೆ. ಒಂದು ಶತಮಾನಕ್ಕೂ ಹಿಂದಿನ ಘಟನೆ ಇದು. ಅಂದು ಅಮೆರಿಕದ ಫಿಲಡೆಲ್ಫಿಯಾದಲ್ಲಿದ್ದ ಕರುಣಾಮಯಿಯೂ ಸೂಕ್ಷ್ಮಗ್ರಾಹಿಯೂ ಆದ ಬಿ. ಕಾರ್ಪೆಂಟರ್ ಎಂಬ ಮಹಿಳೆ ತನ್ನ ದಂತವೈದ್ಯರ ಕಛೇರಿಯಲ್ಲಿ ಪುಣೆಯ ಉಗ್ರ ಸಮಾಜಸುಧಾರಕ ಗೋಪಾಲರಾವ್ ಜೋಷಿ ಮತ್ತು ಅಮೆರಿಕದ ಪ್ರಿನ್ಸ್‌ಟನ್ನಿನ ವಿಲ್ಡರ್ ಎಂಬುವರ ನಡುವೆ ನಡೆದ ಪತ್ರವ್ಯವಹಾರವನ್ನು 'ಅಮೆರಿಕನ್ ಕ್ರಿಶ್ಚಿಯನ್ ರಿವ್ಯೂ' ಪತ್ರಿಕೆಯ ಹಳೆಯ ಸಂಚಿಕೆಯೊಂದರಲ್ಲಿ ಓದಿದರು. ಈ ಆಕಸ್ಮಿಕ ಓದು ಜೋಷಿಯವರ ಪತ್ನಿಯ ಜೀವನದ ಒಂದು ತಿರುವಾಯಿತು. ಆನಂದಿಬಾಯಿ ಭಾರತದ ಪ್ರಥಮ ವೈದ್ಯೆಯಾದುದಲ್ಲದೆ ಆಕೆಯನ್ನು ವಿಜಯ ಮತ್ತು ದುರಂತದ ಕಡೆಗೆ ಕರೆದೊಯ್ಯಲು ಕಾರಣವಾಯಿತು.

---

೧೯೮೮ರ ಡಿಸೆಂಬರ್ ತಿಂಗಳ 'ಸ್ಪ್ಯಾನ್' ಪತ್ರಿಕೆಯಲ್ಲಿ ಪ್ರಕಟವಾದ ಜಯಂತ ರಘುನಾಥ ಜೋಷಿ ಅವರ "ಆನಂದಿಬಾಯಿ ಜೋಷಿ ಟ್ರೈಂಫ್ ಅಂಡ್ ಟ್ರ್ಯಾಜೆಡಿ" ಎಂಬ ಲೇಖನದ ಅನುವಾದ.

ಮುಂಬೈ ಸಮೀಪದ ಕಲ್ಯಾಣದಲ್ಲಿ ಈಕೆ ೩೧-೩-೧೮೬೫ರಂದು ಜನಿಸಿದರು. ಚಿಕ್ಕಂದಿನಲ್ಲಿ ಈಕೆಯನ್ನು ಯಮುನ ಎಂದು ಕರೆಯುತ್ತಿದ್ದರು. ಸಂಪ್ರದಾಯಕ್ಕನುಗುಣವಾಗಿ ಆಗಿನ್ನೂ ಒಂಬತ್ತು ವರ್ಷ ತುಂಬಿದ್ದ ಈಕೆಯ ವಿವಾಹ ಅಂಚೆ ಇಲಾಖೆಯ ಗುಮಾಸ್ತೆ ಗೋಪಾಲರಾವ್ ಜೋಷಿಯವರೊಂದಿಗೆ ನಡೆಯಿತು. ಪತಿ ಗೃಹದಲ್ಲಿ ಈಕೆಗೆ ಆನಂದಿ—'ಹೃದಯದ ಹರ್ಷ' ಎಂದು ಪುನರ್ನಾಮಕರಣ ಮಾಡಿದರು. ಸಾಮಾಜಿಕ ದುಷ್ಪದ್ಧತಿಗಳಾದ ಬಾಲ್ಯವಿವಾಹ ಮತ್ತು ಅನಕ್ಷರತೆಯಿಂದ ಆ ಕಾಲದಲ್ಲಿ ಭಾರತದ ಅನೇಕ ಮಹಿಳೆಯರು ನರಳುತ್ತಿದ್ದರು. ಗೋಪಾಲರಾವ್ ಮೊದಲನೆಯದಕ್ಕೆ ಏನನ್ನೂ ಮಾಡುವಂತಿರಲಿಲ್ಲ. ಆದರೆ ಇನ್ನೊಂದನ್ನು ನಿವಾರಿಸಲು ನಿರ್ಧರಿಸಿ ಪತ್ನಿಯನ್ನು ಓದಿಸಬೇಕೆಂದು ತೀರ್ಮಾನಿಸಿ ಮೊದಲು ಓದು, ಬರಹ ಮತ್ತು ಗಣಿತಗಳಿಗೆ ಸೀಮಿತವಾದ ಶಿಕ್ಷಣವನ್ನು ನೀಡಿದರು. ಆದರೆ ಅವರ ಮೊದಲ ಮಗ ತೀರಿಕೊಂಡ ಆಗ ಆನಂದಿಗೆ ವಯಸ್ಸು ಕೇವಲ ಹದಿನಾಲ್ಕು ಆಗಲೇ ಜೋಷಿ ತೀರ್ಮಾನಿಸಿದರು; ತನ್ನ ಪತ್ನಿ ವೈದ್ಯಳಾಗಿ ಜನರ ಜೀವ ಉಳಿಸಬೇಕು.

ಇತ್ತ ಆನಂದಿಗೆ ವಯೋಮಾನಕ್ಕೂ ಮೀರಿದ ಪ್ರಬುದ್ಧತೆ ಇತ್ತು. ಮಹಿಳಾ ವೈದ್ಯೆ ಮಾತ್ರ ಭಾರತೀಯ ಮಹಿಳೆಗೆ ಸಹಾಯಮಾಡಬಲ್ಲಳೆಂದು ಭಾವಿಸಿದ್ದಳು. ಆ ಕಾಲದಲ್ಲಿ ಅವರೂ ಸಾಮಾಜಿಕ ಬಹಿಷ್ಕಾರ ಮತ್ತು ಪರದಾದಂತಹ ಕೆಟ್ಟ ಪದ್ಧತಿಗಳಿಂದ ನಲುಗಿದ್ದರು. ತಿಳಿವಳಿಕಸ್ಥ ಬ್ರಿಟಿಷ್ ಅಧಿಕಾರಿಗಳು ಮತ್ತು ಅರ್ಪಣಾಮನೋಭಾವದ ಸುಧಾರಕ ರಾಜಾರಾಮಮೋಹನರಾಯ್ (೧೭೭೨-೧೮೩೩) ಅವರಂಥವರು ಜನರನ್ನು ಪ್ರಚಲಿತ ಸಾಮಾಜಿಕ ಅನಿಷ್ಟಗಳ ವಿರುದ್ಧ ಜಾಗೃತಗೊಳಿಸಿದರು. ಇಂಥ ಪ್ರಯತ್ನಗಳ ನಡುವೆಯೂ ಆ ಕಾಲದಲ್ಲಿ ಶಿಕ್ಷಣ ಬಯಸುವ ಭಾರತದ ಮಹಿಳೆಯ ಹಾದಿಯಲ್ಲಿ ಅನೇಕ ಅಡೆತಡೆಗಳಿದ್ದವು. ಮಹಾತ್ಮ ಫುಲೆ ಮತ್ತು ಅವರ ಪತ್ನಿ ಸಾವಿತ್ರಿಬಾಯಿಯವರು ಪಶ್ಚಿಮ ಭಾರತದಲ್ಲಿ ಸ್ತ್ರೀವಿದ್ಯಾಭ್ಯಾಸಕ್ಕೆ ಅಡಿಗಲ್ಲು ಹಾಕಿದ್ದರು. ಮಹಾಸಮಾಜ ಸುಧಾರಕ ಮತ್ತು ಭಾರತದ ಅರ್ಥಶಾಸ್ತ್ರ ಪಿತಾಮಹ ನ್ಯಾಯವಾದಿ ಎಂ. ಜಿ. ರಾನಡೆಯವರು (೧೮೪೨-೧೯೦೧) ತಮ್ಮ ಪತ್ನಿ ರಮಾಬಾಯಿಯವರಿಗೆ ಶಿಕ್ಷಣ ನೀಡಿದ ನಿದರ್ಶನ ಹಲವಾರು ಮಹಿಳೆಯರಿಗೆ ಸ್ಫೂರ್ತಿಯೊದಗಿಸಿತ್ತು. ಮುಂಬೈ ವಿಶ್ವವಿದ್ಯಾನಿಲಯ "ಇನ್ನುಮುಂದೆ ವಿಶ್ವವಿದ್ಯಾನಿಲಯದ ಕಟ್ಟಳೆಯಲ್ಲಿಯ ಪುಲ್ಲಿಂಗ ಶಬ್ದಗಳಲ್ಲಿ ಸ್ತ್ರೀಲಿಂಗವೂ ಒಳಗೊಳ್ಳುತ್ತದೆ" ಎನ್ನುವ ಬದಲಾವಣೆಯ ಹಂತದಲ್ಲಿದ್ದಿತ್ತು.

ಆದರೂ ಒಂದು ಹೆಣ್ಣು ಶಾಲೆಗೆ ಹೋಗುವುದು ಇನ್ನೂ ಕುತೂಹಲ ಮತ್ತು ಪರಿಹಾಸ್ಯದ ವಿಷಯವಾಗಿತ್ತು. ಸ್ತ್ರೀ ವಿದ್ಯಾಭ್ಯಾಸ ಸಾಮಾಜಿಕವಾಗಿ ಮತ್ತು ನೈತಿಕವಾಗಿ ಅಪಾಯಕರವೆಂದು ಭಾವಿಸಲಾಗಿತ್ತು. ಆದರೆ ಗೋಪಾಲರಾವ್ ಮತ್ತು ಆನಂದಿಬಾಯಿ ಈ ಸಾಮಾಜಿಕ ಪಿಡುಗಿನ ವಿರುದ್ಧ ಹೋರಾಡಲು ನಿಶ್ಚಯಿಸಿದ್ದರು. ಆನಂದಿಬಾಯಿಯ ಓದಿಗಾಗಿ ಗೋಪಾಲರಾವ್ ಮುಂಬೈಗೆ ವರ್ಗ ಮಾಡಿಸಿಕೊಂಡರು. ವೈದ್ಯಕೀಯ ಶಿಕ್ಷಣಕ್ಕೆ ಅಮೆರಿಕದಲ್ಲಿ ಉತ್ತಮ ಅವಕಾಶಗಳಿವೆ ಎಂಬುದನ್ನು ಮನಗಂಡಿದ್ದರೂ ಅದಕ್ಕಾಗಿ ಅವರಲ್ಲಿ ಹಣವಿರಲಿಲ್ಲ. ಅಮೆರಿಕದ ಸಂಘಸಂಸ್ಥೆಗಳಿಗೆ ಮತ್ತು ವ್ಯಕ್ತಿಗಳಿಗೆ ಧನಸಹಾಯ ಕೋರಿ ನಿರ್ಭಿಡೆಯಿಂದ ಬರೆಯತೊಡಗಿದರು. ಗೋಪಾಲರಾವ್ ಅವರಲ್ಲಿ ಅರ್ಪಣಾ ಮನೋಭಾವ ಮತ್ತು ಸ್ಥೈರ್ಯವಿತ್ತು. ಆದರೆ ಈ ಅವಿಶ್ರಾಂತ ಸುಧಾರಕನಿಗೆ ಬೇಕಾದ ತಾಳ್ಮೆಯಿರಲಿಲ್ಲ. ಆನಂದಿ ಆದಷ್ಟು ಬೇಗ ವೈದ್ಯೆಯಾಗಬೇಕೆಂಬುದು ಆತನ ಅಪೇಕ್ಷೆ. ಹಣಸಿಗುವ ಸಾಧ್ಯತೆಗಳಿದ್ದರೆ ಆತ ಹಿಂದೂಧರ್ಮವನ್ನು ತೊರೆದು ಕ್ರೈಸ್ತಧರ್ಮ ಸ್ವೀಕರಿಸಲು ಸಿದ್ಧನಿದ್ದ. ಕ್ರೈಸ್ತಧರ್ಮದ ಗುಣಾಂಶಗಳನ್ನು ಮನಗಂಡಿದ್ದರೂ ಆನಂದಿಬಾಯಿ ತನ್ನ ಧರ್ಮವನ್ನು ತೊರೆಯಲು ಸಿದ್ಧಳಿರಲಿಲ್ಲ.

ಕಾರ್ಪೆಂಟರ್ 'ಅಮೆರಿಕನ್ ಕ್ರಿಶ್ಚಿಯನ್ ರಿವ್ಯೂ' ಪತ್ರಿಕೆ ಓದಿ ಆನಂದಿಬಾಯಿಗೆ ಪತ್ರಗಳನ್ನು ಬರೆಯತೊಡಗಿದರು. ಆಕೆ ತನ್ನನ್ನು ಆನಂದಿಬಾಯಿಯ ಸೋದರಿ ಎಂದು ಕರೆದುಕೊಂಡರು. ತರುಣಿ ಆನಂದಿಬಾಯಿ ಈ ಅಮೆರಿಕದ ಗೆಳತಿಯನ್ನು 'ಮಾವಶಿ' (ಮರಾಠಿಯಲ್ಲಿ ತಾಯಿಯ ತಂಗಿ, ಚಿಕ್ಕಮ್ಮ) ಎಂದು ಕರೆದಳು. ೧೮೭೮ ರಿಂದ ೧೮೮೩ರ ನಡುವಣ ಪತ್ರವ್ಯವಹಾರದಿಂದ ಇವರಿಬ್ಬರಲ್ಲಿಯೂ ಒಂದು ಬಗೆಯ ಆತ್ಮೀಯ ಸಂಬಂಧ ಏರ್ಪಟ್ಟಿತು. ಆ ಪತ್ರಗಳಿಂದ ಒಂದು ರೀತಿಯ ಸಾಂಸ್ಕೃತಿಕ ಕೊಳುಕೊಡುಗೆ ಉಂಟಾಯಿತು. ಆನಂದಿಬಾಯಿಯ ಪತ್ರಗಳಲ್ಲಿ ಭಾರತೀಯ ಬದುಕಿನ ಬಗ್ಗೆ ಅನೇಕ ಮಾಹಿತಿಗಳಿರುತ್ತಿದ್ದುವು. ಹಬ್ಬಗಳು, ಆಚರಣೆಗಳು, ಹಲ್ವ ಮತ್ತಿತರ ಭಾರತೀಯ ಅಡುಗೆಗಳ ತಯಾರಿ, ಇಟ್ಟಿಗೆ ಹಾಗೂ ಮಣ್ಣಿನ ಮನೆಗಳನ್ನು ಚೆನ್ನಾಗಿ ಇಟ್ಟುಕೊಳ್ಳುವಲ್ಲಿ ಸಗಣಿಯ ಪ್ರಯೋಜನವೇ ಅಲ್ಲದೆ ಭಾರತೀಯ ತತ್ವಶಾಸ್ತ್ರ ಮುಂತಾದವು ಆನಂದಿಬಾಯಿಯ ಪತ್ರದಲ್ಲಿ ಇರುತ್ತಿದ್ದುವು.

೧೮೮೩ರ ಹೊತ್ತಿಗೆ ಗೋಪಾಲರಾವ್ ಮತ್ತು ಆನಂದಿಬಾಯಿ ಪಶ್ಚಿಮ ಭಾರತದ ಭುಜ್‌ಮೂಲೆಯಿಂದ ಕಲ್ಕತ್ತದವರೆಗೆ ಅನೇಕ ಪಟ್ಟಣಗಳಲ್ಲಿ ವಾಸ

ಮಾಡಿದರು. ಎದೆ ಢವಗುಟ್ಟಿಸುವ ಕಲ್ಕತ್ತ ಭಾರತದ ಅಂದಿನ ರಾಜಧಾನಿಯಾಗಿತ್ತು. ಗೋಪಾಲರಾವ್ ಸ್ವಲ್ಪ ಹಣವನ್ನೇನೊ ಉಳಿತಾಯಮಾಡಿದರು. ಆದರೆ ಅದು ಇಬ್ಬರು ಅಮೆರಿಕಕ್ಕೆ ಹೋಗಲು ಸಾಕಾಗುವಂತಿರಲಿಲ್ಲ. ಆದ್ದರಿಂದ ಆನಂದಿಬಾಯಿ ಒಬ್ಬಳೇ ಅಮೆರಿಕಕ್ಕೆ ಹೋಗುವುದೆಂದು ಅವರು ನಿರ್ಧರಿಸಿದರು. ಇಂಥದೊಂದು ಘಟನೆ ಆವರೆಗೆ ಭಾರತದಲ್ಲಿ ನಡೆದದ್ದು ಇಲ್ಲ. ಹೆಂಗಸೊಬ್ಬಳು ಒಂಟಿಯಾಗಿ 'ಸಪ್ತಸಮುದ್ರ'ವನ್ನು ದಾಟಿ ಅಪರಿಚಿತ ಪ್ರಪಂಚಕ್ಕೆ ಹೋಗುವುದು ಸಂಪ್ರದಾಯಸ್ಥ ಹಿಂದೂಗಳಲ್ಲಿ ಪ್ರತಿಭಟನೆಯ ಬಿರುಗಾಳಿ ಎಬ್ಬಿಸಿತು.

ಆನಂದಿಬಾಯಿ ಬಿರುಗಾಳಿಯನ್ನು ಧೈರ್ಯವಾಗಿ ಎದುರಿಸಿದಳು. ಅವಳು ವೈದ್ಯೆ ಆಗಬೇಕೆಂಬ ಅವಳ ಮತ್ತು ಅವಳ ಗಂಡನ ಅದಮ್ಯ ಆಸೆಯೆ ಅವಳಿಗೆ ಸ್ಫೂರ್ತಿ ನೀಡಿತು. ಅಮೆರಿಕದ ಗೆಳತಿಯ ದಯೆ ಮತ್ತು ನೆರವು ದೊರೆಯುವುದೆಂಬ ಭರವಸೆ ಅವಳನ್ನು ಧೃತಿಗೊಳಿಸಿತು. ಅವಳು ಅಮೆರಿಕಕ್ಕೆ ಸಮುದ್ರಯಾನ ಮಾಡುವ ಮೊದಲು ಉತ್ಸಾಹಶಾಲಿ ಸಮಾಜಸುಧಾರಕರು ಅವಳ ಗೌರವಾರ್ಥ ಬೀಳ್ಕೊಡಿಗೆ ಸಮಾರಂಭ ಏರ್ಪಡಿಸಿದರು. ಆನಂದಿಬಾಯಿ ತಾನು ಯಾವ ಉದ್ದೇಶಕ್ಕಾಗಿ ಅಮೆರಿಕಕ್ಕೆ ಹೋಗುತ್ತೇನೆಂಬುದನ್ನು ಹೀಗೆ ಸ್ಪಷ್ಟಪಡಿಸಿದಳು— 'ನಾನು ಪ್ರಯಾಣ ಕೈಗೊಂಡಿರುವೆ. ಏಕೆಂದರೆ ಅದು ಯೋಗ್ಯವಾದ ಕೆಲಸ. ಅದು ನನ್ನ ಧಾರ್ಮಿಕ ನೀತಿಯಲ್ಲಿ ಯಾವುದೇ ಬದಲಾವಣೆ ಉಂಟುಮಾಡುವುದಿಲ್ಲ. ನಾನು ಹಿಂದೂವಾಗಿ ಹೋಗುತ್ತಿದ್ದೇನೆ. ಹಿಂದೂವಾಗಿ ಹಿಂದಿರುಗುತ್ತೇನೆ.' ಸಂಪ್ರದಾಯವಾದಿಗಳು ಆಕೆಯನ್ನು ಬಹಿಷ್ಕರಿಸಲು ಅಪೇಕ್ಷಿಸಿದ್ದರು. ಆದರೆ ಪ್ರತಿಯೊಬ್ಬನೂ ತನಗೆ ಸರಿಕಂಡದ್ದನ್ನು ಮಾಡುತ್ತಾನೆ. ಆಕೆ ತನ್ನ ಭಾರತೀಯ ಸಹೋದರಿಯರಿಗೆ ಪ್ರಯೋಜನಕಾರಿಯಾಗಬೇಕೆಂದಿದ್ದಳು.

ಆನಂದಿಬಾಯಿ ೭-೪-೧೮೮೩ ರಂದು 'ದ ಸಿಟಿ ಆಫ್ ಕಲ್ಕತ್ತ' ಹಡಗಿನಲ್ಲಿ ಕುಳಿತು ಅಮೆರಿಕ ತಲಪಿದಳು. ಸಹಸ್ರಾರು ವಲಸೆಗಾರರನ್ನು ಹಾಗೂ ಪ್ರವಾಸಿಗರನ್ನು ಕೈದೀವಿಗೆ ಹಿಡಿದು ಅಮೆರಿಕಕ್ಕೆ ಸ್ವಾಗತಿಸಿದ ಆ ಮಹಾಮಹಿಳೆ ನ್ಯೂಯಾರ್ಕಿನ ಮುಗಿಲಿನ ಒಂದು ಭಾಗವಾಗುವ ಮೊದಲೇ ಆನಂದಿಬಾಯಿ ಅಮೆರಿಕ ತಲಪಿದಳು. ಕಾರ್ಪೆಂಟರ್ ಕುಟುಂಬ ಸಹಿತ ಸ್ವಾಗತಿಸಿದರು. ಆನಂದಿಬಾಯಿ ಅಮೆರಿಕದಲ್ಲಿದ್ದಷ್ಟು ವರ್ಷವೂ ಕಾರ್ಪೆಂಟರ್ ಆಕೆಯ ಅನುಕೂಲತೆಗಳನ್ನು ಪೂರೈಸುವ ಮೂಲವಾಗಿದ್ದರು. ಆನಂದಿಬಾಯಿಗೆ ತನ್ನ ಅಮೆರಿಕನ್ ಚಿಕ್ಕಮ್ಮನಲ್ಲಿದ್ದ ನಂಬಿಕೆ ಸಂಪೂರ್ಣ ದೃಢವಾಯಿತು.

ಆನಂದಿಬಾಯಿ ಪೆನ್ಸಿಲ್ವೇನಿಯಾದ ಮಹಿಳಾ ವೈದ್ಯಕೀಯ ಕಾಲೇಜಿನಲ್ಲಿ ಪ್ರವೇಶ ಪಡೆಯುವಲ್ಲಿ ಯಶಸ್ವಿಯಾದಳು. ವಿದ್ಯಾರ್ಥಿವೇತನ ದೊರೆತು ಹಣಕಾಸಿನ ತೊಂದರೆಯಿಲ್ಲದೆ ಅವಳ ಓದು ಸಾಗಿತ್ತು. ಅವಳ ಜೀವನ-ವಿಧಾನ ಕಠಿಣವಾಗಿತ್ತು. ಅವಳು ಯಾವಾಗಲೂ ಎಂಟು ಮೀಟರ್ ಉದ್ದದ ಮಹಾರಾಷ್ಟ್ರ ಸೀರೆ ಉಡುತ್ತಿದ್ದಳು ಮತ್ತು ಸಸ್ಯಾಹಾರವನ್ನೇ ಸೇವಿಸುತ್ತಿದ್ದಳು.

ಕಾರ್ಪೆಂಟರ್ ನೈಜಗೆಳತಿಯಾಗಿದ್ದರು. ಅವರು ಮಾನಸಿಕ ನೆಮ್ಮದಿಯ ಮೂಲವಾಗಿದ್ದರು. ಮತ್ತು ಹೊಸ ಪ್ರಪಂಚದ ಬದುಕಿಗೆ ಹೊಂದಿಕೊಳ್ಳಲು ಮಾರ್ಗದರ್ಶಿಯಾಗಿದ್ದರು. ಆನಂದಿಬಾಯಿಯ ಅಮೆರಿಕ ವಾಸಕ್ಕೆ ಐತಿಹಾಸಿಕ ಮಹತ್ವವಿದೆ ಎಂಬುದನ್ನು ಕಾರ್ಪೆಂಟರ್ ಅರಿತಿದ್ದರು. ಆದ್ದರಿಂದ ಇಂಡಿಯಾ ದಿಂದ ಆನಂದಿಬಾಯಿ ಬರೆದ ಪತ್ರಗಳನ್ನು ಆಕೆ ಜೋಪಾನಗೊಳಿಸಿದ್ದರು ಮತ್ತು ಅವರಿಬ್ಬರ ನಡುವೆ ನಡೆದ ಮಾತುಕತೆಗಳ ಬಗ್ಗೆ ಟಿಪ್ಪಣಿ ಬರೆದಿಟ್ಟಿದ್ದರು. ಕಾರ್ಪೆಂಟರ್ ಆನಂದಿಬಾಯಿಗೆ ಒಂದು ಚಿಕ್ಕ ಪ್ರಶ್ನಾಮಾಲಿಕೆಯನ್ನು ಕೊಟ್ಟು ಅವುಗಳ ಉತ್ತರವನ್ನು ಆಲ್ಬಮ್‌ನಲ್ಲಿ ದಾಖಲಿಸಿದ್ದರು. ಬಾಸ್ಟನ್ನಿನ ರಾಬರ್ಟ್ಸಹೋದರರು ಪ್ರಕಟಿಸಿದ ಆನಂದಿಬಾಯಿಯ ಜೀವನಚರಿತ್ರೆಯಲ್ಲಿ ಕಾರೊಲಿನ್ ಹೀಲೆಡಾಲ್ ಅವರು ಆ ದಾಖಲೆಯನ್ನು 'ಮಾನಸಿಕ ಛಾಯಾ ಚಿತ್ರ' ಎಂದು ಕರೆದಿದ್ದಾರೆ. ಕಾರ್ಪೆಂಟರ್‌ನ ತಿಳಿವಳಿಕೆಯುಳ್ಳ ಪ್ರಶ್ನೆಗಳು ಮತ್ತು ಆನಂದಿಬಾಯಿಯ ಯುಕ್ತ ಉತ್ತರಗಳನ್ನು ನೋಡಿದಾಗ ಈ ವರ್ಣನೆಯ ಸತ್ಯತೆ ಅರಿವಾಗದಿರದು. ಅವಳ ಉತ್ತರಗಳು ಹತ್ತೊಂಬತ್ತರ ಹರೆಯದಲ್ಲಿಯೆ ಆನಂದಿಬಾಯಿ ಎಂಥ ಸ್ಪಷ್ಟವಾದ ಆಲೋಚನೆ ಮತ್ತು ಭಾವನಾತ್ಮಕ ಪ್ರಬುದ್ಧತೆಯನ್ನು ಪಡೆದಿದ್ದಳೆಂಬುದನ್ನು ಪ್ರಕಟಪಡಿಸುತ್ತವೆ. ಆ ಉತ್ತರಗಳಲ್ಲಿ ಆನಂದಿಬಾಯಿಯ ವಿಚಾರಧಾರೆಯನ್ನು ಹೀಗೆ ತಿಳಿಯಬಹುದು—ಸಂತೋಷವೆಂದರೆ ದೇವರಲ್ಲಿ ನಂಬಿಕೆ; ಅಸಂತೋಷವೆಂದರೆ ಬೇಜವಾಬ್ದಾರಿ ನಡವಳಿಕೆ. ಅವಳು ಪ್ರೀತಿಸಿದ ಕೆಲಸವೆಂದರೆ ಪರರಿಗೆ ಉಪಕಾರಿಯಾಗಿರುವುದು. ಅವಳು ದ್ವೇಷಿಸಿದ ವಸ್ತುಗಳು ಗುಲಾಮಗಿರಿ ಮತ್ತು ಪರಾಶ್ರಯ. ಅವಳ ಪ್ರಿಯವಾದ ಮನೋರಂಜನೆ ಎಂದರೆ ಓದುಗಾರಿಕೆ. ಹೀಗೆ ಮತ್ತಾವುದಾದರೂ ಅಸಾಮಾನ್ಯಗುಣಗಳಿದ್ದುವೇ ಎನ್ನುವುದನ್ನು ಕಂಡು ಹಿಡಿಯಬೇಕಾಗಿತ್ತಷ್ಟೆ. ಆನಂದಿಬಾಯಿಯನ್ನು ತಿಳಿದಂಥ ಜನರು ಅವಳ ಬಗೆಗಿನ ಪ್ರತಿಯೊಂದೂ ಅಸಾಮಾನ್ಯವಾಗಿತ್ತೆಂದು ಹೇಳಬಹುದು.

ಎರಡು ವಿಷಯಗಳು ಆನಂದಿಬಾಯಿಯನ್ನು ಪದೇ ಪದೇ ಬಾಧಿಸದಿದ್ದರೆ ಅವಳ ಅಮೆರಿಕವಾಸ ಸಂತಸದಾಯಕವಾಗಿರುತ್ತಿತ್ತು. ಒಂದು ಆಕೆಯ ಆರೋಗ್ಯ ಮತ್ತೊಂದು ಆಕೆಯಗಂಡ. ತನ್ನ ಆರೋಗ್ಯದ ಬಗ್ಗೆ ಅವಳು ಸಾಕಷ್ಟು ಲಕ್ಷ್ಯ ವಹಿಸಲಿಲ್ಲ. ತನ್ನ ಪತಿಯ ಬಗ್ಗೆ ಅವಳು ಹೆಚ್ಚಿನ ಗಮನ ಹರಿಸಲಾಗುತ್ತಿರಲಿಲ್ಲ. ಏಕೆಂದರೆ ಅವಳು ಸಹಸ್ರಾರು ಮೈಲಿ ದೂರದಲ್ಲಿದ್ದಳು.

ಗೋಪಾಲರಾವ್ ಚಂಚಲಚಿತ್ತ ಮತ್ತು ವಿಲಕ್ಷಣ ಸ್ವಭಾವದವರಾಗಿದ್ದರು. ಆನಂದಿಬಾಯಿಯ ಗೈರುಹಾಜರಿಯಲ್ಲಿ ಅದು ಮತ್ತಷ್ಟು ಹೆಚ್ಚಾಯಿತು. ಆನಂದಿಬಾಯಿ ಪ್ರತಿವಾರವೂ ತನ್ನೆಲ್ಲ ಚಟುವಟಿಕೆಗಳನ್ನು ಕುರಿತು ಅವರಿಗೆ ಬರೆಯುತ್ತಿದ್ದಳು. ಆತನ ಪ್ರೋತ್ಸಾಹವನ್ನು ಕೋರುತ್ತಿದ್ದಳು. ಪ್ರತಿಯಾಗಿ ಗೋಪಾಲರಾವ್‌ನಿಂದ ಕುಪಿತವಾದ ಪತ್ರಗಳು ಬರುತ್ತಿದ್ದುವು. ಅವರು ಯಾವಾಗಲೂ ಅವಳಲ್ಲಿ ತಪ್ಪುಗಳನ್ನು ಕಾಣುತ್ತಿದ್ದರು. ಯಾವುದೂ ಅವರನ್ನು ಪ್ರಸನ್ನಗೊಳಿಸಿದಂತೆ ಕಾಣಲಿಲ್ಲ. ವಿಲಕ್ಷಣತೆಯ ಜೊತೆಗೆ ಅವರು ಹೊಸ ಗುಣವೊಂದನ್ನು ಬೆಳೆಸಿಕೊಂಡಿದ್ದರು ಅದೆಂದರೆ ಅಸೂಯೆ. ಗೋಪಾಲರಾವ್ ಅವರ ಪತ್ರಗಳು ಆಕೆಗೆ ಯಾತನೆಯನ್ನು ಉಂಟುಮಾಡಿದುವು.

ಗೋಪಾಲರಾವ್ ಅವರು ಮಾರ್ಚ್ ೧೮೮೫ರಲ್ಲಿ ಅಮೆರಿಕವನ್ನು ತಲಪಿದ ಬಳಿಕ ಪರಿಸ್ಥಿತಿ ಸುಧಾರಿಸಿತು. ಆದರೆ ಆನಂದಿಬಾಯಿ ಆರೋಗ್ಯವನ್ನು ನಿರ್ಲಕ್ಷಿಸಿದ್ದುದು ಅವಳ ಶಕ್ತಿಯನ್ನು ಕುಗ್ಗಿಸಿತು. ಈ ಅನಾರೋಗ್ಯದ ನಡುವೆಯೂ ಅವಳು ವೈದ್ಯಕೀಯಪದವಿ ಗಳಿಸಲು ಪರಿಶ್ರಮಪಟ್ಟಳು. ಆಕೆ ತನ್ನ ಕಡೆಯ ಪರೀಕ್ಷೆಯನ್ನು ೧೮೮೬ ಮಾರ್ಚ್‌ನಲ್ಲಿ ತೆಗೆದುಕೊಂಡಳು. ಅವಳ ಪ್ರೌಢ ಪ್ರಬಂಧದ ವಿಷಯ 'ಹಿಂದೂ ಆರ್ಯರಲ್ಲಿ ಪ್ರಸೂತಿಶಾಸ್ತ್ರ.' ಅವಳು ೧೮೮೬ ಮಾರ್ಚ್ ೧೧ರಂದು ಪದವೀಧರೆಯಾದಳು. ಹೀಗೆ ಆನಂದಿಬಾಯಿ ಅಮೆರಿಕದ ವೈದ್ಯಕೀಯ ಪದವಿ ಪಡೆದ ಮೊದಲ ಭಾರತೀಯ ಮಹಿಳೆಯಾದಳು. ಅದರಿಂದ ಅವಳಿಗೆ ಅತೀವ ಸಂತೋಷವಾಯಿತು. ಅವಳ ಪತಿಗೂ, ಆಕೆಯ ಸಾಧನೆಯ ಬಗ್ಗೆ ಅಪಾರ ಹೆಮ್ಮೆ ಉಂಟಾಯಿತು. ತನ್ನ ಗಂಡ, ಕಾರ್ಪೆಂಟರ್ ಮತ್ತು ಡೀನ್ ರಾಚೆಲ್ ಬಾಡ್ಲಿ ಅವರ ಬಗ್ಗೆ ಆನಂದಿಬಾಯಿಯ ಹೃದಯ ಕೃತಜ್ಞತೆಯಿಂದ ತುಂಬಿತು. ಇವರೆಲ್ಲರ ಪ್ರೋತ್ಸಾಹವಿಲ್ಲದೆ ತಾನು ಏನನ್ನೂ ಮಾಡಲಾಗುತ್ತಿರಲಿಲ್ಲವೆಂದು ಹೇಳಿದಳು.

ಪದವಿಗಳಿಸುವ ಕೆಲವು ತಿಂಗಳು ಮೊದಲೇ ಆನಂದಿಬಾಯಿ ತಾಯ್ನಾಡಿಗೆ ಮರಳಿದಳು. ದಕ್ಷಿಣ ಮಹಾರಾಷ್ಟ್ರದ ಕೊಲ್ಹಾಪುರ ರಾಜ್ಯದ ಆಲ್ಬರ್ಟ್

ಎಡ್ವರ್ಡ್ ಆಸ್ಪತ್ರೆಯ ಮಹಿಳಾ ವಾರ್ಡಿನಲ್ಲಿ ಕಾರ್ಯನಿರ್ವಾಹಕ ಫಿಸಿಷಿಯನ್ ಕೆಲಸ ಆಕೆಗಾಗಿ ಕಾದಿತ್ತು. ಕೆಲಸ ಪ್ರಾರಂಭಿಸಲು ಕಾತರಳಾಗಿದ್ದಳು. ಆದರೆ ಹಾಗಾಗಲಿಲ್ಲ. ತನ್ನ ದೇಶದ ಸ್ತ್ರೀಯರ ರೋಗವನ್ನು ಪರಿಹರಿಸುವ ಸಲುವಾಗಿ ಅಮೆರಿಕಕ್ಕೆ ಹೋಗಿ ವೈದ್ಯಕೀಯವನ್ನು ಓದಿದ ಆನಂದಿಬಾಯಿ ಜೋಷಿ ತನ್ನ ರೋಗಕ್ಕೆ ಚಿಕಿತ್ಸೆ ಮಾಡಲಿಲ್ಲ. ಆ ಕಾಲದ ಮೃತ್ಯು ಸ್ವರೂಪಿರೋಗವಾದ ಕ್ಷಯದಿಂದ ಆಕೆ ನರಳುತ್ತಿದ್ದಳು. ಅವಳು ಭಾರತಕ್ಕೆ ಅಕ್ಟೋಬರ್ ೧೮೮೬ರಲ್ಲಿ ಯಾನ ಮಾಡಿದಳು. ಈಗ ನ್ಯೂಯಾರ್ಕ್ ಬಂದರಿನಲ್ಲಿ ಸ್ವಾತಂತ್ರ್ಯದ ಪ್ರತಿಮೆ ಹೆಮ್ಮೆಯಿಂದ ನಿಂತಿದೆ. ಇದನ್ನು ನೋಡಿದುದಕ್ಕೆ ಯಾವುದೇ ದಾಖಲೆ ಅವಳಲ್ಲಿಲ್ಲವಾದರೂ ಡಾ. ಆನಂದಿಬಾಯಿ ಖಂಡಿತವಾಗಿಯೂ ಪಂಜು ಹಿಡಿದವಳನ್ನು ಮೆಚ್ಚುತ್ತಿದ್ದಳು. ಜೋಷಿ ದಂಪತಿಗಳು ಮುಂಬೈ ತಲಪಿದಾಗ ಅವರನ್ನು ಸ್ವಾಗತಿಸಲು ಒಂದು ಗುಂಪು ಕಾದಿತ್ತು. ಕಟುವಾದ ವಿರೋಧವನ್ನು ನಿರೀಕ್ಷಿಸಿದ್ದ ಈ ಅನನ್ಯ ಸಂಕಲ್ಪದ ಮಹಿಳೆಗೆ ಅಲ್ಲಿ ಅಪಾರ ಮೆಚ್ಚುಗೆ ಮತ್ತು ಗೌರವಗಳು ದೊರೆತವು.

ಡಾ. ಆನಂದಿಬಾಯಿ ವೈದ್ಯಳಾಗಿ ಭಾರತಕ್ಕೆ ಬಂದು ತನ್ನ ಕನಸನ್ನು ಮಾತ್ರ ಪೂರೈಸಿದಳು. ಅವಳ ಕುಂದಿದ ಆರೋಗ್ಯ ಹಡಗು ಪ್ರಯಾಣದಿಂದ ಮತ್ತಷ್ಟು ಬಿಗಡಾಯಿಸಿತು. ೨೬-೨-೧೮೮೭ ರಲ್ಲಿ ಗಂಡನ ತೋಳಿನಲ್ಲಿ ಕೊನೆಯುಸಿರೆಳೆದಳು. ಆಗ ಅವಳಿಗೆ ೨೨ ನೆಯ ಜನ್ಮ ದಿನಕ್ಕೆ ಒಂದು ತಿಂಗಳು ಕಡಿಮೆ ಇತ್ತು. 'ನಾನು ಮಾಡಬಹುದಾದ್ದನ್ನೆಲ್ಲ ಮಾಡಿದೆ' ಎನ್ನುವುದು ಅವಳಿಗೆ ಆರೋಪಿಸಿದ ಕಡೆಯ ಮಾತು.

ಅವಳು ತನ್ನ ನೊಂದ ಸೋದರಿಯರಿಗೆ ಸೇವೆ ಮಾಡದಿದ್ದರೂ ಬಹಳವಾಗಿ ಮಾಡಿದ್ದಳು. ಅವಳು ಭಾರತೀಯ ಸ್ತ್ರೀಯರಿಗೆ ತೋರ್ಬೆಳಕಾಗಿದ್ದಳು ಮತ್ತು ಅವರ ದಾರಿ ಸುಗಮವಾಗುವಂತೆ ಮಾಡಿದಳು. ಒಂದು ಶತಮಾನದ ಬಳಿಕ ಭಾರತ ದೇಶ ವಿದೇಶಗಳಲ್ಲಿ ಓದಿದ ಪ್ರಪಂಚದ ಉತ್ತಮ ಮಹಿಳಾ ವೈದ್ಯರನ್ನು ಪಡೆಯಿತು.

ಆನಂದಿಬಾಯಿ ಸಮಾಜಸುಧಾರಕರಿಗೂ ಸ್ಫೂರ್ತಿಯಾದಳು. ಅವಳ ಚರಿತ್ರೆ ಬರಹಗಾರರಿಗೆ ಮತ್ತು ನಾಟಕಕಾರರಿಗೆ ಹೇರಳ ಸಾಮಗ್ರಿ ನೀಡಿತು. ಎಸ್. ಜೆ. ಜೋಷಿ ಈಕೆಯ ಬಗ್ಗೆ ಮರಾಠಿಯಲ್ಲಿ ಸೊಗಸಾದ ಜೀವನ ಚರಿತ್ರಾತ್ಮಕ ಕಾದಂಬರಿಯನ್ನು ಬರೆದರು. 'ಆನಂದಿ ಗೋಪಾಲ' ಕೃತಿಯನ್ನು ಆಧರಿಸಿದ ಮರಾಠಿ ನಾಟಕ ರಂಗಭೂಮಿಯಲ್ಲಿ ಯಶಸ್ವಿಯಾಯಿತು. ಬುದ್ಧಿ

ನಂತರ ನಟಿ ಸುಹಾಸ್ ಜೋಶಿ ಆನಂದಿಬಾಯಿಯ ಪಾತ್ರವನ್ನು ನಿರ್ವಹಿಸಿ ರೀತಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಆದರೆ ಎರಡು ಹಂಡಗಳನ್ನೂ ವ್ಯಾಪಿಸಿದಂತೆ ಜನಸರಂಗದ ಮೇಲೆ ಡಾ. ಆನಂದಿಬಾಯಿ ಜೋಶಿ ಆಡಲು ಉದ್ದೇಶಿಸಿದ ನಾಟಕ ಯಾವುದೇ ನಾಟಕಕ್ಕಿಂತ ಹೆಚ್ಚು ಪ್ರೇಕ್ಷಣೀಯವಾಗಿದೆ.

ವೈ. ಸಿ. ಭಾನುಮ.



ಆಸೆಗಳನ್ನು ಮೀರದಾತ ಬೆತ್ತಲೆ ಓಡಾಡಿದರೇನು, ಜಟೆಗಳನ್ನು ಬಿಟ್ಟರೇನು ಉಪವಾಸ ಮಾಡಿದರೇನು, ಧೂಳನ್ನು ಬಳಿದುಕೊಂಡರೇನು, ನೆಲದ ಮೇಲೆ ಮಲಗಿದರೇನು, ಕುಕ್ಕರಗಾಲಲ್ಲಿ ಕೂತರೇನು - ಶುದ್ಧನಾದಾನೆ?

ಧರ್ಮದ ಅರಿವುಂಟಾದ ಪಂಡಿತರು ಆಳವಾದ ನೀರಿನ ಮಡುವಿನಂತೆ ತಿಳಿಯಾದ ಮನಸ್ಸುಳ್ಳವರಾಗಿರುತ್ತಾರೆ.

—ಭಗವಾನ್ ಬುದ್ಧ

# ನೋವಿನ ಮೇಲೆ ವಿಜಯವನ್ನು ಸಾಧಿಸಿದ ಶಸ್ತ್ರಚಿಕಿತ್ಸಕ

ಹ್ಯಾಂಬರ್ಗ್ ನಿವಾಸಿ ಶ್ರೀಮತಿ ಕರೇನ್ ಹೇಟ್[1] ಎಂಬಾಕೆಗೆ ಮದುವೆಯಾಗಿ ಐದು ವರ್ಷಗಳೇ ಆಗಿದ್ದರೂ ಇನ್ನೂ ಮಕ್ಕಳಾಗಿರಲಿಲ್ಲ. ಗರ್ಭಾಂಕುರವಾಗುವ ಫ್ಯಾಲೋಪಿಯನ್ ನಳಿಕೆಗೆ ಹಿಡಿಗಾತ್ರದ ಜಲಾವೃತ ಕೋಶವೊಂದು ಅಡ್ಡಿಯನ್ನೊಡ್ಡಿದೆ ಎಂಬುದು ಆಕೆಗೆ ತಿಳಿದು ಬಂದಿತು. ಇತ್ತೀಚಿನ ವರ್ಷಗಳವರೆಗೆ ಈ ತೊಂದರೆಗೆ ಇದ್ದ ಏಕೈಕ ಪರಿಹಾರವೆಂದರೆ ಶಸ್ತ್ರಚಿಕಿತ್ಸಕನ ಹರಿತವಾದ ಚಾಕುವಿನಿಂದ ಅದನ್ನು ಕತ್ತರಿಸಿ ತೆಗೆಯುವುದು ಹಾಗೂ ಶಸ್ತ್ರ ಚಿಕಿತ್ಸೆಯ ಅನಂತರವಲ್ಲಿ ಕೆಲವು ತಿಂಗಳವರೆಗೆ ಕಾಡುವ ನೋವನ್ನು ಸಹಿಸಿಕೊಳ್ಳುವುದು. ಆದರೆ, ಜರ್ಮನಿಯ 'ವಿಶ್ವವಿದ್ಯಾನಿಲಯ ಮಹಿಳಾ ಚಿಕಿತ್ಸಾಲಯ'ದಲ್ಲಿನ ವೈದ್ಯರು ಶಸ್ತ್ರಚಿಕಿತ್ಸೆಯ ಬಳಿಕ "ಕಣ್ಣಿಗೆ ಕಾಣುವಂಥ ಒಂದು ಕಲೆಯೂ ಉಳಿದಿರುವುದಿಲ್ಲ" ಎಂದು ಆಕೆಗೆ ಭರವಸೆ ನೀಡಿದರು.

ಕೆಲವು ದಿವಸಗಳ ಬಳಿಕ, ಸಂಪೂರ್ಣವಾಗಿ ಅರಿವಳಿಕೆಯ ಪ್ರಭಾವಕ್ಕೆ ಒಳಪಡಿಸಲಾಗಿದ್ದ ಕರೇನ್‌ಳನ್ನು ಶಸ್ತ್ರಚಿಕಿತ್ಸೆಯ ಕೋಣೆಗೆ ಕರೆತರಲಾಯಿತು. ಅಲ್ಲಿ ಅವಳಿಗಾಗಿ ಐದು ಮಂದಿಯನ್ನು ಒಳಗೊಂಡಿದ್ದ ಶಸ್ತ್ರಚಿಕಿತ್ಸಕರ ತಂಡವೊಂದು ಕಾಯುತ್ತ ಇತ್ತು. ವೈದ್ಯರೊಬ್ಬರು ಆಕೆಯ ಹೊಕ್ಕಳಿನ ಮೂಲಕ ಉದರ-ದರ್ಶಿ ಉಪಕರಣವನ್ನು ತೂರಿಸಿ, ಅದನ್ನು ಫ್ಯಾಲೋಪಿಯನ್ ನಳಿಕೆಯವರೆಗೆ ಕೆಳಕ್ಕೆ ತಳ್ಳಿದರು. ಮುಖ್ಯ ಶಸ್ತ್ರಚಿಕಿತ್ಸಕರಾಗಿದ್ದ ಕುರ್ತ್ ಸೆಮ್ ಅವರು ಬೆಳಕಿನಿಂದ ಕೂಡಿದ್ದ ಕಣ್ಣು-ಕೊಳವೆಯ ಮೂಲಕ ಜಲಾವೃತ ಕೋಶದ ಬೆಳವಣಿಗೆಯನ್ನು ಪರೀಕ್ಷಿಸಿ ನೋಡಿದರು. ಆ ಉದರದರ್ಶಿ ಉಪಕರಣಕ್ಕೆ ಜೋಡಿಸಲಾಗಿದ್ದ ಸೂಕ್ಷ್ಮ ದೂರದರ್ಶನ-ಛಾಯಾಗ್ರಾಹಕ ಅದರ ಚಿತ್ರವನ್ನು ತೆರೆಯ ಮೇಲೆ ಬಿಂಬಿಸಿತು.

ಆ ಬಳಿಕ, ಕರೇನಳ ಕಿಬ್ಬೊಟ್ಟೆಯ ಮೂಳೆಯ ಎಡೆಯಿಂದ ಸ್ವಲ್ಪ ಮೇಲಕ್ಕೆ ಪೆನ್ಸಿಲ್ಲಿನ ಅಗಲದಷ್ಟು ವ್ಯಾಪ್ತಿಯ ಎರಡು ಕಿರುಕಿಂಡಿಗಳನ್ನು

---

೧೯೭೩ರ ಏಪ್ರಿಲ್‌ನ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾಗಿರುವ ರಾಯ್ ಫರ್ಗುಸನ್ ಅವರ 'ದಿ ಸರ್ಜನ್ ಹೂ ಕಾನ್ಕರ್ಡ್ ಪೇಯ್ನ್' ಎಂಬ ಲೇಖನದ ಸರಳಾನುವಾದ.

[1] ಗೋಪ್ಯತೆಯನ್ನು ಕಾಯ್ದುಕೊಂಡು ಬರುವ ಸಲುವಾಗಿ ಹೆಸರನ್ನು ಬದಲಾಯಿಸಿದೆ.

ಏರ್ಪಡಿಸಿದರು. ಅವುಗಳ ಮೂಲಕ ಸೇವ್ ಅವರು ಎರಡು ಟೊಳ್ಳು ನಳಿಕೆಗಳನ್ನು ಆಕೆಯ ಕಿಬ್ಬೊಟ್ಟೆಯ ಒಳಕ್ಕೆ ಇಳಿಸಿದರು. ವರ್ತುಲಾಕಾರದ ಆ ಟೊಳ್ಳು ನಳಿಕೆಗಳು ಬಗೆಬಗೆಯಾದ ಶಸ್ತ್ರಚಿಕಿತ್ಸೆಯ ಉಪಕರಣಗಳನ್ನು ಒಳಗೊಂಡಿದ್ದುವು. ಸೂಕ್ಷ್ಮ ಕತ್ತರಿಯನ್ನು ಬಳಸಿ ಸೇವ್ ಅವರು ಮೊದಲಿಗೆ ಆ ಜಲಾವೃತಕೋಶದ ಹೊರಗಿನ ಕವಚವನ್ನು ಕತ್ತರಿಸಿದರು; ಉದ್ದನೆಯ ಇಕ್ಕಳದಿಂದ, ಅಪಾಯಕಾರಿಯಾಗಿದ್ದ ಆ ಒಳಭಾಗವನ್ನು ಹೊರಕ್ಕೆಳೆದುಕೊಂಡು, ವರ್ತುಲಾಕಾರವಾಗಿದ್ದ ಸೂಕ್ಷ್ಮ ಗರಗಸದಿಂದ ಅದನ್ನು ಕತ್ತರಿಸಿದರು. ನಿರ್ವಾತ ನಳಿಕೆಯೊಂದು ಕತ್ತರಿಸಿದ ಆ ಚೂರುಗಳನ್ನು ಹೊರಕ್ಕೆ ಹೀರಿಹಾಕಿತು. ತೊಂಬತ್ತು ನಿಮಿಷಗಳವರೆಗೆ ನಡೆದ ಈ ಶಸ್ತ್ರಚಿಕಿತ್ಸೆಯ ಬಳಿಕ, ಸೇವ್ ಅವರ ಸಹಾಯಕರು ಕಣ್ಣುಕೊಳವೆ ಹಾಗೂ ಟೊಳ್ಳು ನಳಿಕೆಗಳನ್ನು ಹೊರಕ್ಕೆ ತೆಗೆದರು. ಸೇವ್ ಅವರು ಹೊಲಿಗೆ ಹಾಕಿ ಆ ಗಾಯದ ಎಡೆಗಳನ್ನು ಮುಚ್ಚಿದರು.

೧೯೯೦ರ ಅಕ್ಟೋಬರ್ ತಿಂಗಳಿನಲ್ಲಿ ಶಸ್ತ್ರಚಿಕಿತ್ಸೆ ನಡೆದ ಆ ದಿನದಂದು ಮಧ್ಯಾಹ್ನವೇ ಕರೇನ್ ಯಾವುದೇ ನೋವಿನ ಅನುಭವವೂ ಇಲ್ಲದೆ ಎದ್ದು ಓಡಾಡಬಲ್ಲವಳಾಗಿದ್ದಳು. ಎರಡು ತಿಂಗಳು ತರುವಾಯ ಕಿಬ್ಬೊಟ್ಟೆಯ ಮೇಲಿನ ಕಿಂಡಿಗಳ ಕಲೆಯೂ ಬಹುಮಟ್ಟಿಗೆ ಕಾಣದಂತಾಗಿಬಿಟ್ಟಿತ್ತು. ಆದರೆ, ಅತ್ಯಂತ ಸಂತೋಷಕರವಾದ ಸುದ್ದಿ ಬಂದದ್ದು ಒಂದು ವರ್ಷದ ಬಳಿಕ: ಕರೇನ್ ಆರೋಗ್ಯಪೂರ್ಣವಾಗಿದ್ದ ಒಂದು ಗಂಡು ಮಗುವಿನ ತಾಯಿಯಾಗಿದ್ದಳು.

ಕರೇನಳಿಗೆ ಪ್ರಯೋಜನಕಾರಿಯಾಗಿ ಪರಿಣಮಿಸಿದ ಈ ಶಸ್ತ್ರಚಿಕಿತ್ಸಾ ವಿಧಾನವನ್ನು ಡಾ. ಸೇವ್ ಅವರೇ ರೂಪಿಸಿದ್ದರು. ಇದರೊಂದಿಗೆ ಅವರು 'ಕನಿಷ್ಠತಮ ಆಕ್ರಮಣಶೀಲ ಶಸ್ತ್ರಚಿಕಿತ್ಸೆ' (Minimal Invasive Surgery) ಎಂಬ ಹೊಸ ಕ್ಷೇತ್ರವೊಂದರ ಜನಕರಾಗಿ ಪರಿಣಮಿಸಿದರು. ಜನರ ಅಂಗೋಪಾಂಗಗಳನ್ನು ಕತ್ತರಿಸಿ ತೆರೆದು ಶಸ್ತ್ರಚಿಕಿತ್ಸೆ ನಡೆಸುವುದಕ್ಕೆ ಬದಲಾಗಿ, ಶರೀರದ ಹೊರಗಿನಿಂದಲೇ ಸೇವ್ ಅವರು ಶಸ್ತ್ರಚಿಕಿತ್ಸೆ ನಡೆಸುತ್ತಾರೆ. ಇದಕ್ಕಾಗಿ ಬಳಸುವ ಉಪಕರಣಗಳು ಹಾಗೂ ತಂತ್ರವಿಧಾನಗಳೆಲ್ಲ ಬಹುಮಟ್ಟಿಗೆ ಅವರೇ ರೂಪಿಸಿಕೊಂಡಿರುವಂಥವು.

ಸೇವ್ ಮತ್ತು ಅವರ ವೈದ್ಯಕೀಯ ತಂಡ ಕಳೆದ ಇಪ್ಪತ್ತು ವರ್ಷಗಳಲ್ಲಿ ಇಂಥ ಸುಮಾರು ೧೯,೦೦೦ ಶಸ್ತ್ರಚಿಕಿತ್ಸೆಗಳನ್ನು ನಡೆಸಿದೆ. ಇಂದು ಈ 'ತಂತ್ರ' ಚಿಕಿತ್ಸಾಲಯಗಳಲ್ಲಿ ಮಹಿಳೆಯರ ಮೇಲೆ ನಡೆಸುವ ಸಾಂಪ್ರದಾಯಿಕವಾದ

'ತೆರೆದ-ಕಿಬ್ಬೊಟ್ಟೆ' ಶಸ್ತ್ರಚಿಕಿತ್ಸೆಯ ಶೇಕಡಾ ೮೦ರಷ್ಟು ಶಸ್ತ್ರಚಿಕಿತ್ಸೆಗಳಿಗೆ ಪರ್ಯಾಯವಾಗಿ ಪರಿಣಮಿಸಿದೆ. ಜಗತ್ತಿನಾದ್ಯಂತ ಹೆಚ್ಚು ಹೆಚ್ಚು ಸಂಖ್ಯೆಯ ಆಸ್ಪತ್ರೆಗಳಲ್ಲಿ ಇಂದು 'ಕನಿಷ್ಠತಮ ಆಕ್ರಮಣಶೀಲ' ಶಸ್ತ್ರಚಿಕಿತ್ಸೆ (MIS) ವಿಧಾನವನ್ನು ಬಳಸಲಾಗುತ್ತಿದೆ. ಸೆಮ್ ಅವರು ರೂಪಿಸಿರುವ ಉಪಕರಣಗಳು ಮೂತ್ರಕೋಶದಲ್ಲಿನ ಹರಳುಗಳನ್ನು ತೆಗೆಯಲು, ಅಪಾಯಕ್ಕೊಳಗಾದ ಕರುಳಿನ ಭಾಗಗಳನ್ನು ಸರಿಪಡಿಸಲು, ರಕ್ತನಾಳಗಳಲ್ಲಿ ಆಗುತ್ತಿರುವ ರಕ್ತಸ್ರಾವವನ್ನು ತಡೆಗಟ್ಟಲು ಹಾಗೂ ಹರ್ನಿಯಾ (ದುರ್ಬಲ ಒಳಪದರವನ್ನು ಭೇದಿಸಿಕೊಂಡು ಕರುಳಿನ ಭಾಗ ಹೊರಪದರಕ್ಕೆ ಚಾಚಿಕೊಳ್ಳುವುದು) ದುರಸ್ತಿ ಮಾಡಲು ನೆರವಾಗುತ್ತಿವೆ. ಮೂತ್ರಕೋಶಗಳಲ್ಲಿನ ಗಡ್ಡೆಗಳನ್ನು ಕತ್ತರಿಸಿ ಹೊರತೆಗೆಯಲು ಮೂತ್ರತಜ್ಞರು ಹಾಗೂ ಮಂಡಿಯ ಕೀಲುಗಳಿಗೆ ಸಂಬಂಧಿಸಿದ ತೊಂದರೆಗಳನ್ನು ಸರಿಪಡಿಸಲು ಅಸ್ಥಿತಜ್ಞರು ಇವುಗಳನ್ನು ಉಪಯೋಗಿಸುತ್ತಿದ್ದಾರೆ.

ಶಸ್ತ್ರಕ್ರಿಯೆಯ ಅನಂತರದಲ್ಲಿ ರೋಗಿಗಳು ಎಷ್ಟು ಬೇಗ ಚೇತರಿಸಿಕೊಳ್ಳುತ್ತಾರೆಂದರೆ ಸಂಪ್ರದಾಯಬದ್ಧ ಶಸ್ತ್ರಚಿಕಿತ್ಸೆಯ ಅನಂತರದಲ್ಲಿ ಚೇತರಿಸಿಕೊಳ್ಳಲು ರೋಗಿಗಳಿಗೆ ಸುಮಾರು ಎರಡು ತಿಂಗಳ ಅವಧಿಯೇ ಬೇಕಾದರೆ, ಈ ವಿಧಾನದಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾದವರು ಒಂದು ವಾರಕ್ಕೂ ಕಡಿಮೆ ಅವಧಿಯಲ್ಲಿ ತಮ್ಮ ಕೆಲಸಗಳಿಗೆ ಹಿಂದಿರುಗುತ್ತಾರೆ. ಇದರ ಬಗ್ಗೆ ಸ್ತ್ರೀರೋಗ-ಶಾಸ್ತ್ರೀಯ ಉದರದರ್ಶೀ ಚಿಕಿತ್ಸಾತಜ್ಞರ ಅಮೆರಿಕನ್ ಸಂಘದ ಅಧ್ಯಕ್ಷರಾದ ಡಾ. ಜೋರ್ಡನ್ ಫಿಲಿಪ್ಸ್ ಅವರು ಹೀಗೆಂದಿದ್ದಾರೆ. "ಸೆಮ್ ಅವರು ತಮ್ಮ ಹೊಸ ವಿಧಾನಗಳಿಂದ ಹಳೆಯ ವಿಧಾನಗಳನ್ನು ಮೂಲೆ ಗುಂಪಾಗಿಸಿಬಿಟ್ಟಿದ್ದಾರೆ. ಇದು ನಿಜಕ್ಕೂ ಮಹಾ ಸಾಧನೆ."

ಈಗ ೬೫ ವರ್ಷದವರಾಗಿರುವ ಸೆಮ್ ಅವರು ತಮ್ಮ ಮುಂದೆ ಯಾವಾಗಲೂ ಉನ್ನತ ಗುಣಮಟ್ಟ ಅಥವಾ ಆದರ್ಶಗಳನ್ನೇ ಇರಿಸಿಕೊಂಡು ಬಂದಿದ್ದಾರೆ. ಅವರು ಆಸ್ಪತ್ರೆಯಲ್ಲಿ ಸಾಮಾನ್ಯವಾಗಿ ೧೨ ಘಂಟೆಗಳಷ್ಟು ಕಾಲ ದುಡಿಯುತ್ತಾರೆ. ಆಮೇಲೆ, ತಮ್ಮ ಮನೆಯಲ್ಲಿನ ಕಾರ್ಯಾಗಾರದಲ್ಲಿ ಕೆಲಸಕ್ಕೆ ತೊಡಗಿ, ಹೊಸ ಹೊಸ ಉಪಕರಣಗಳನ್ನು ರೂಪಿಸುತ್ತ ಇರುತ್ತಾರೆ. ಹೊಸ ಶೋಧನೆಗಳಲ್ಲಿ ತೊಡಗುವ ಈ ಪ್ರವೃತ್ತಿಯನ್ನು ಅವರು ಬಾಲ್ಯದಿಂದಲೇ ಬೆಳೆಸಿಕೊಂಡು ಬಂದಿದ್ದಾರೆ. ಅವರಿಗೆ ಒಂಬತ್ತು ವರ್ಷ ವಯಸ್ಸಾಗಿದ್ದಾಗಲೇ, ಇಂಜಿನಿಯರಾಗಿದ್ದ ಅವರ ತಂದೆ ಅವರಿಗೆ ಯಂತ್ರೋಪಕರಣಕಾರರ ಲೇಥ್ ಅನ್ನು ಕೊಂಡು

ಕೊಟ್ಟಿದ್ದರು; ಹಾಗೂ ಆಗಲೇ ಅವರು ನಟ್ಟು ಬೋಲ್ಟುಗಳನ್ನು ತಯಾರಿಸುವ ವಿಧಾನವನ್ನು ಕಲಿತುಕೊಂಡಿದ್ದರು. ಹನ್ನೊಂದು ವರ್ಷ ವಯಸ್ಸಾಗುವ ಹೊತ್ತಿಗೆ ಕುರ್ತ್ ಅವರು ಮಾದರಿ ಆಟಿಕೆ ವಿಮಾನಗಳಿಗೆ ಬೇಕಾದ ಎಲ್ಲ ಎಂಜಿನ್ನುಗಳನ್ನೂ ತಾವೇ ತಯಾರಿಸುತ್ತಿದ್ದರು. ಇದನ್ನು ನೆನಪಿಸಿಕೊಳ್ಳುತ್ತ ಅವರೆನ್ನುತ್ತಾರೆ: "ಇತರ ಮಕ್ಕಳಂತೆ, ಆಟದ ಸಾಮಾನುಗಳು ಬೇಕೆಂದು ಕೇಳದೆ, ನಾನು ಉಕ್ಕೆ-ಪಕ್ಕೆ ವಸ್ತುಗಳನ್ನು ಬಿಸಾಡಿದ್ದ ಅಂಗಳಕ್ಕೆ ಹೋಗಿ, ನನ್ನವೇ ಆದ ವಸ್ತುಗಳನ್ನು ತಯಾರಿಸುವುದಕ್ಕೆ ಬೇಕಾದ ಲೋಹದ ವಸ್ತುಗಳನ್ನು ಅರಸುತ್ತಿದ್ದೆ."

ಯುದ್ಧಾನಂತರದಲ್ಲಿ, ಸೆಮ್ ಅವರು ಮ್ಯೂನಿಕ್ ವಿಶ್ವವಿದ್ಯಾನಿಲಯದಲ್ಲಿ ಸ್ತ್ರೀವೈದ್ಯಕೀಯ ಶಾಸ್ತ್ರವನ್ನು ಅಭ್ಯಾಸಮಾಡಿದರು. ಹೊಟ್ಟೆ ಹೊರೆಯುವ ಸಲುವಾಗಿ ಅವರು ಬಿಡುವಿನ ವೇಳೆಯಲ್ಲಿ ದುಡಿಯುತ್ತಿದ್ದರು. ಪ್ರಯೋಗಶಾಲೆಯ ಉಪಕರಣಗಳನ್ನು ರೂಪಿಸಿ, ಅಷ್ಟೇನೂ ಚೆನ್ನಾಗಿ ಸಜ್ಜುಗೊಂಡಿರದಿದ್ದ ಜೀವ-ರಸಾಯನ ಶಾಸ್ತ್ರ ವಿಭಾಗಕ್ಕೆ ತಮ್ಮ ಉಪಕರಣಗಳನ್ನು ಮಾರುತ್ತಿದ್ದರು.

೧೯೫೦ ರಲ್ಲಿ ಎಲ್ಲರಿಗಿಂತಲೂ ಹೆಚ್ಚಿನ ಅಂಕಗಳನ್ನು ಗಳಿಸಿ ಸೆಮ್ ಅವರು ಪದವೀಧರರಾದರು. ಮೂರು ವರ್ಷಗಳ ತರುವಾಯ ಮ್ಯೂನಿಕ್‌ನಲ್ಲಿನ ವಿಶ್ವವಿದ್ಯಾನಿಲಯದ ಮಹಿಳಾ ಚಿಕಿತ್ಸಾಲಯವೊಂದನ್ನು ಸೇರಿ, ಅಲ್ಲಿ ಸ್ತ್ರೀರೋಗಶಾಸ್ತ್ರಜ್ಞರಾಗಿ ಸೇವೆ ಸಲ್ಲಿಸತೊಡಗಿದರು. ಮೂವತ್ತೊಂದನೆಯ ವರ್ಷದ ಹೊತ್ತಿಗೆ ಅವರು ಮಹಿಳೆಯರಲ್ಲಿನ ಬಂಜೆತನಕ್ಕೆ ಸಂಬಂಧಿಸಿದಂತೆ ೭೦ ವೈಜ್ಞಾನಿಕ ಪ್ರಬಂಧಗಳನ್ನು ಬರೆದು ಪ್ರಕಟಿಸಿದ್ದರು ಹಾಗೂ ಜರ್ಮನ್ ಸ್ತ್ರೀರೋಗ ಶಾಸ್ತ್ರೀಯ ಶಸ್ತ್ರಚಿಕಿತ್ಸಾವಿಭಾಗದ ಹಿರಿಯ ಅಧ್ಯಾಪಕರಲ್ಲಿ ಅವರೇ ಅತ್ಯಂತ ಕಿರಿಯರಾಗಿದ್ದರು. ಆ ದಿನಗಳಲ್ಲಿ ಮಹಿಳೆಯರಲ್ಲಿನ ಬಂಜೆತನದ ಕಾರಣಗಳನ್ನು ಕಂಡುಕೊಳ್ಳುವುದಕ್ಕೆ ಹಾಗೂ ಚಿಕಿತ್ಸೆ ನೀಡುವುದಕ್ಕೆ ಶಸ್ತ್ರಚಿಕಿತ್ಸೆಯೊಂದೇ ಮಾರ್ಗವಾಗಿದ್ದುದು ಅವರಿಗೆ ಚಿಂತೆಯನ್ನುಂಟುಮಾಡುವ ಸಂಗತಿಯಾಗಿತ್ತು. ಎಲ್ಲವೂ ಸುಗಮವಾಗಿ ನಡೆದರೂ, ಸೋಂಕು ತಗಲುವ ಅಪಾಯವನ್ನು ಮತ್ತು ಉದರಪಟಲದ ಅಂಗಾಂಶಗಳಿಗೆ ಅಪಾಯ ಉಂಟಾಗುವ ಸಾಧ್ಯತೆಗಳನ್ನು ರೋಗಿಗಳು ಎದುರಿಸಬೇಕಾಗಿ ಬರುತ್ತಿತ್ತು. **"ರೋಗದ ಕಾರಣಗಳನ್ನು ಕಂಡು ಹಿಡಿದು ಚಿಕಿತ್ಸೆ ನೀಡುವುದಕ್ಕೆ ಇನ್ನೂ ಉತ್ತಮವಾದ ವಿಧಾನ ಇದ್ದಿರಲೇ ಬೇಕು"** ಎಂಬುದಾಗಿ ಅವರು ತಮಗೆ ತಾವೇ ಹೇಳಿಕೊಳ್ಳುತ್ತಿದ್ದರು.

ತಮ್ಮ ಶೋಧನೆಯ ಅಂಗವಾಗಿ ಅವರು ತಮ್ಮೆಲ್ಲ ಆಸೆಗಳನ್ನು ಉದರ ದರ್ಶಿಯಲ್ಲಿಯೇ ಕೇಂದ್ರೀಕರಿಸಿಕೊಂಡಿದ್ದರು. ಏಕೆಂದರೆ, ಆ ಹೊತ್ತಿಗೆ ಆಂತರಿಕ ವೈದ್ಯಶಾಸ್ತ್ರ ಅಥವಾ ಶಸ್ತ್ರಕ್ರಿಯೇತರ ರೋಗ ಚಿಕಿತ್ಸೆಯಲ್ಲಿ ಉದರದರ್ಶಿ ಯನ್ನು ವ್ಯಾಪಕವಾಗಿ ಬಳಸಲಾಗುತ್ತಿತ್ತು. ಉದರವೇಧಕ ತಂತ್ರದ ಮೂಲಕ ಅದನ್ನು ಒಳಗೆ ಇರಿಸುವುದಕ್ಕೆ ಮೊದಲು, ವೈದ್ಯರು ಪರೀಕ್ಷೆಗಳಿಗಾಗಿ ಹೆಚ್ಚಿನ ಸ್ಥಳಾವಕಾಶವನ್ನು ಸೃಷ್ಟಿಸಿಕೊಳ್ಳುವ ಸಲುವಾಗಿ ರೋಗಿಯ ಕಿಬ್ಬೊಟ್ಟೆಯಲ್ಲಿ ಗಾಳಿಯನ್ನು ತುಂಬುತ್ತಿದ್ದರು. ಆದರೆ, ಕಿಬ್ಬೊಟ್ಟೆಯ ಪ್ರದೇಶದಲ್ಲಿ ಹೃದಯ ದತ್ತ ಸಾಗುವ ದೊಡ್ಡ ರಕ್ತನಾಳಗಳು ಇರುವುದರಿಂದ ಸ್ತ್ರೀರೋಗಶಾಸ್ತ್ರಜ್ಞರು ಉದರದರ್ಶಿಯ ಬಳಕೆಯನ್ನು ದೂರದಲ್ಲಿಯೇ ಇಟ್ಟಿದ್ದರು. ಏಕೆಂದರೆ, ಆಕಸ್ಮಿಕವಾಗಿ ಅಂಥ ರಕ್ತನಾಳವೇನಾದರೂ ಕತ್ತರಿಸಿ ಹೋಗಿ, ಗಾಳಿಯಲ್ಲಿನ ನೈಟ್ರೋಜನ್ ರಕ್ತಪರಿಚಲನೆಯ ವ್ಯವಸ್ಥೆಯೊಳಗೆ ಸೇರಿಕೊಂಡು ಬಿಟ್ಟರೆ, ಅದು ಮಾರಕವಾದ ಧಮನಿಬಂಧಕ್ಕೆ (embolism) ಕಾರಣವಾಗ ಬಹುದಾಗಿತ್ತು.

ಸೆಮ್ ಅವರು ಸೂಕ್ತ ಉಪಕರಣವನ್ನು ಸಜ್ಜುಗೊಳಿಸುವ ಪ್ರಯತ್ನ ಮಾಡುತ್ತಲೇ ಇದ್ದರು; ಹಾಗೂ ೧೯೬೩ರಲ್ಲಿ, ಕಾರ್ಬನ್ ಡಯಾಕ್ಸೈಡನ್ನು ಬಳಸಿಕೊಳ್ಳುವ ಊದು-ಉಪಕರಣವೊಂದನ್ನು ರೂಪಿಸಿದರು. ಈ ಅನಿಲ ರಕ್ತ ವಾಹಿನಿಯನ್ನು ಪ್ರವೇಶಿಸುವ ಸಂಭವ ತುಂಬ ಕಡಿಮೆಯಾಗಿತ್ತು. (ಇಂದು ಉದರದರ್ಶಿ ಶಸ್ತ್ರಚಿಕಿತ್ಸೆಯ ಪ್ರಕ್ರಿಯೆಗಳಲ್ಲಿ ಈ ಉಪಕರಣದ ಸಂಪೂರ್ಣ ಸ್ವಯಂಚಾಲಿತ-ಆವೃತ್ತಿಗಳನ್ನು ವ್ಯಾಪಕವಾಗಿ ಬಳಸಲಾಗುತ್ತಿದೆ). ಈ ಹೊಸ ಊದು-ಉಪಕರಣವನ್ನು ಬಳಸಿ ನಡೆಸಿದ ಮೊದಲ ಉದರದರ್ಶಿ ಶಸ್ತ್ರ ಚಿಕಿತ್ಸೆಯ ಸಂದರ್ಭದಲ್ಲಿ ಸೆಮ್ ಅವರು ಮತ್ತು ಅವರ ವರಿಷ್ಠ ವೈದ್ಯರಾಗಿದ್ದ ರಿಚರ್ಡ್ ಫಿಕೆನ್ಷರ್ ಅವರು ಒಬ್ಬರಾದ ಮೇಲೆ ಒಬ್ಬರಂತೆ ಕೊಳವೆಯ ಮೂಲಕ ಇಣಕಿ ನೋಡಿ, ಫ್ಯಾಲೋಪಿಯನ್ ನಳಿಕೆಯೊಂದು ಪ್ರತಿಬಂಧಿತ ವಾಗಿದ್ದುದನ್ನು ಕಂಡುಕೊಂಡರು. ಆ ಮಹಿಳೆಗೆ ಮಕ್ಕಳಾಗದಿರುವುದಕ್ಕೆ ಕಾರಣ ವೇನೆಂಬುದು ಸ್ಪಷ್ಟವಾಗಿತ್ತು. ಕಾರಣವನ್ನು ಪತ್ತೆಹಚ್ಚುವುದಕ್ಕಾಗಿಯೇ ನಡೆಸಲಾಗುತ್ತಿದ್ದ ಅನೇಕ ಶಸ್ತ್ರಚಿಕಿತ್ಸೆಗಳನ್ನು ಇದು ನಿವಾರಿಸುತ್ತದೆ ಎಂಬುದು ಆಗ ಅವರಿಗೆ ಮನವರಿಕೆಯಾದ್ದರಿಂದ, ಸೆಮ್ ಅವರು ಮಾತ್ರವೇ ಶಸ್ತ್ರಚಿಕಿತ್ಸೆಯನ್ನು ನಡೆಸಬೇಕೆಂಬ ಷರತ್ತನ್ನು ಹಾಕಿ, ಉದರದರ್ಶಿಯನ್ನು ಬಳಸಲು ಫಿಕೆನ್ಷರ್ ಅವರು ಅನುಮತಿ ನೀಡಿದರು.

ಫಿಕೆನ್ಷರ್ ಅವರು ಕೈಗೊಂಡ ಈ ತೀರ್ಮಾನಕ್ಕಾಗಿ ಜರ್ಮನಿಯಾದ್ಯಂತ ಇದ್ದ ಸ್ತ್ರೀರೋಗಶಾಸ್ತ್ರಜ್ಞರು ಅವರನ್ನು ನಿಂದಿಸಿದರು. ಆದರೆ, ಇದರಿಂದೇನೂ ವಿಚಲಿತರಾಗದೆ ಸೆಮ್ ಅವರು ಹೊಸ ಹೊಸ ಉದರದರ್ಶಿ–ಶಸ್ತ್ರ ಚಿಕಿತ್ಸಾ–ತಂತ್ರಗಳನ್ನು ರೂಪಿಸತೊಡಗಿದರು. ಉದಾಹರಣೆಗೆ, ಕೆಲವು ಸಂದರ್ಭಗಳಲ್ಲಿ ಮಾರಕವಾದ ಸುಟ್ಟಗಾಯಗಳನ್ನುಂಟುಮಾಡುತ್ತಿದ್ದ ಬಿಸಿ–ಬೆಳಕಿನ ಬಲ್ಬಿಗೆ ಬದಲಾಗಿ, ರೋಗಿಯ ಶರೀರದ ಹೊರಗಿನಿಂದ ಬೆಳಕನ್ನು ಪ್ರವಾಹಿಸುವ ತಂತು–ಗಾಜಿನ (fibre-glass) ಕಂತೆಯನ್ನು ಬಳಸಿದರು.

ಅಕ್ಟೋಬರ್ ೧೯೭೦ ರಲ್ಲಿ ಸೆಮ್ ಅವರು ಕೀಲ್ ವಿಶ್ವವಿದ್ಯಾನಿಲಯದ ಮಹಿಳಾ ಚಿಕಿತ್ಸಾಲಯದ ನಿರ್ದೇಶಕರಾದರು. ಇದು ಪ್ರಸೂತಿಶಾಸ್ತ್ರ ಮತ್ತು ಸ್ತ್ರೀರೋಗ ವಿಜ್ಞಾನ ಕ್ಷೇತ್ರಗಳಲ್ಲಿ ಶಸ್ತ್ರಚಿಕಿತ್ಸೆಯ ನೂತನ ತಂತ್ರಗಳನ್ನು ರೂಪಿಸುವ ವಿಚಾರದಲ್ಲಿ ಖ್ಯಾತಿಯನ್ನು ಗಳಿಸಿತ್ತು. ಒಂದೊಂದೇ ಹೆಜ್ಜೆಯಾಗಿ ಮುಂದುವರಿಯುತ್ತ, ಸೆಮ್ ಅವರು ಕಿಬ್ಬೊಟ್ಟೆ–ದರ್ಶನ ತಂತ್ರವನ್ನು ಒಂದು ವಾಡಿಕೆಯ ಪ್ರಕ್ರಿಯೆಯನ್ನಾಗಿಸಿಬಿಟ್ಟರು. ಇಷ್ಟಾಗಿಯೂ, ಸೆಮ್ ಅವರಿಗೆ ಅತ್ಯಂತ ಹತ್ತಿರದ ಸಹಾಯಕರಾಗಿದ್ದ ಲಿಸೊಲೋತ್ತೆ ಮೆತ್ಲರ್ ಅವರು ೧೯೭೨ ರಲ್ಲಿ ಮ್ಯೂನಿಕ್‌ನಲ್ಲಿ ನಡೆದ ವೈದ್ಯಕೀಯ ಮಹಾಧಿವೇಶನದಲ್ಲಿ ಈ ನೂತನ ತಂತ್ರಗಳನ್ನು ಉತ್ಸಾಹಪೂರ್ವಕವಾಗಿ ವಿವರಿಸಿದಾಗ, ಸುವಿಖ್ಯಾತರಾಗಿದ್ದ ಪ್ರಾಧ್ಯಾಪಕರೊಬ್ಬರು ಹೀಗೆಂದು ಎಚ್ಚರಿಕೆ ನೀಡಿದರು : "ಸ್ತ್ರೀರೋಗಶಾಸ್ತ್ರದ ಕ್ಷೇತ್ರದಲ್ಲಿ ಮುಂದೆ ಏನಾದರೂ ಹೆಸರುಗಳಿಸಬೇಕೆಂದಿದ್ದರೆ, ಸೆಮ್ ಅವರನ್ನು ಹೀಗೆ ಬಹಿರಂಗವಾಗಿ ಹೊಗಳುವುದನ್ನು ನಿಲ್ಲಿಸಿ." ಆದರೆ, ಆಕೆ ಈ ಎಚ್ಚರಿಕೆಯನ್ನು ನಿರ್ಲಕ್ಷಿಸಿದರು.

೧೯೭೦ರ ದಶಕದಲ್ಲಿ ಸೆಮ್ ಅವರು ಸೂಕ್ಷ್ಮ–ಉಪಕರಣಗಳ ಹೊಸ ಸರಣಿಯನ್ನೇ ಸೃಷ್ಟಿಸಿದರು. ಕಂಪ್ಯೂಟರ್ ಕ್ರೀಡೆಯಲ್ಲಿ ಸಂತಸದ ಕಡ್ಡಿಗಳನ್ನು ಹಿಂದೆ ಮುಂದೆ ಆಡಿಸುವ ರೀತಿಯಲ್ಲಿಯೇ, ಇಲ್ಲಿಯೂ ಕಿಬ್ಬೊಟ್ಟೆಯೊಳಕ್ಕೆ ಇವನ್ನು ಇರಿಸಿದ ಬಳಿಕ ಸುಲಭವಾಗಿ ಇವುಗಳನ್ನು ಸಂಚಲಿಸಬಹುದಾಗಿತ್ತು. ೧೯೭೭ ರಲ್ಲಿ ಅವರು ಇನ್ನೊಂದು ದೊಡ್ಡ ಹೆಜ್ಜೆಯನ್ನಿಟ್ಟರು. ರೋಡರ್–ಕುಣಿಕೆ–ತಂತ್ರದ ಮೇಲೆ ಅವರು ಪ್ರಭುತ್ವವನ್ನು ಸ್ಥಾಪಿಸಿಕೊಂಡರು. ಇದು ಮೊದಲೇ ಗಂಟು ಹಾಕಿದ ಜಾರುಕುಣಿಕೆಯನ್ನು ಬಳಸುವ ತಂತ್ರಕ್ಕೆ ಸಂಬಂಧಿಸಿದ್ದು, ೧೮೯೦ ರ ದಶಕದಲ್ಲಿ ಮೊದಲ ಬಾರಿಗೆ ಇದನ್ನು ಜರ್ಮನ್ ವೈದ್ಯ ರೋಡರ್ ಅವರು ವಿವರಿಸಿದ್ದರು. ಇದರಿಂದಾಗಿ, ಕತ್ತರಿಸಿ ಹೋದ

ಯಾವುದೇ ರಕ್ತನಾಳದಿಂದ ರಕ್ತ ಸ್ರಾವವಾಗುವುದನ್ನು ಖಾಯಮ್ಮಾಗಿ ತಡೆಗಟ್ಟಬಹುದಾಗಿತ್ತು. ಏಕೆಂದರೆ, ಅಂಥ ರಕ್ತನಾಳದ ತೆರೆದ ತುದಿಗಳನ್ನು ಈ ತಂತ್ರದಿಂದ ಮುಚ್ಚಿಬಿಡಬಹುದಾಗಿತ್ತು. ಅವುಗಳ ಸುತ್ತ ಹಾಕಲಾದ ಕುಣಿಕೆಗಳು ಅವುಗಳನ್ನು ಬಲವಾಗಿ ಬಂಧಿಸಿಬಿಡುತ್ತಿದ್ದುವು. ಇದರ ಬಗ್ಗೆ ಸೆಮ್ ಅವರು ಹೀಗೆಂದು ಹೇಳುತ್ತಾರೆ: "ಇಂದು ನಮಗೆ ತಿಳಿದಿರುವ ಕನಿಷ್ಠತಮ ಆಕ್ರಮಣಶೀಲ ಶಸ್ತ್ರಚಿಕಿತ್ಸೆಯ (MIS) ನಿಜವಾದ ಆರಂಭ ಆದದ್ದು ಈ ಸರಳ ಹೊಲಿಗೆಯ ಪ್ರಕ್ರಿಯೆಯಿಂದ."

ಇಷ್ಟಾಗಿಯೂ ಈ ಕ್ಷೇತ್ರದಲ್ಲಿನ ಅವರ ಅನೇಕ ಸಹೋದ್ಯೋಗಿಗಳು ಈ ಬೆಳವಣಿಗೆಯತ್ತ ಬೆನ್ನು ತಿರುಗಿಸಿಯೇ ಇದ್ದರು. ಮೆತ್ಲರ್ ಅವರು ಇದಕ್ಕೆ ಕಾರಣವೇನೆಂಬುವನ್ನು ಹೀಗೆ ವಿವರಿಸುತ್ತಾರೆ: "ವೃತ್ತಿನಿರತ ಶಸ್ತ್ರಚಿಕಿತ್ಸಕರಿಗೆ ಒಂದು ಭಯ ಇದ್ದೇ ಇತ್ತು. ತಮ್ಮ ಹಸ್ತಕೌಶಲದ ಬಗ್ಗೆ ಅವರಿಗೆ ಹೆಮ್ಮೆ ಇತ್ತು. ಈ ಹೊಸ ತಂತ್ರಗಳ ಬಳಕೆಯನ್ನು ಕಲಿಯುವುದು ಅವರಿಗೆ ಇಷ್ಟವಿರಲಿಲ್ಲ."

ಅನೇಕ ಯಶಸ್ವಿ ಶಸ್ತ್ರಚಿಕಿತ್ಸೆಗಳ ಬಳಿಕ, ಸೆಮ್ ಅವರು ವೈಜ್ಞಾನಿಕ ಪ್ರಬಂಧವೊಂದನ್ನು ಸಿದ್ಧಪಡಿಸಿದರು. ಅದು ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ ಪ್ರಕಟವಾಯಿತು. ಇಷ್ಟಾಗಿಯೂ ಜರ್ಮನ್ ವೈದ್ಯಕೀಯ ಪ್ರೌಢ ಪತ್ರಿಕೆಯೊಂದು "ಕೆಲಸಕ್ಕೆ ಬಾರದ ಕಸದ ರಾಶಿ" ಎಂದು ಅದನ್ನು ಹೀಯಾಳಿಸಿತು. ಕೊನೆಗೆ ಏಪ್ರಿಲ್ ೧೯೮೩ ರಲ್ಲಿ ಅದು ಅಚ್ಚಾಗಿ ಹೊರಬಂದಾಗ, ಬಹು ಸಂಖ್ಯೆಯ ಜರ್ಮನ್ ಶಸ್ತ್ರಚಿಕಿತ್ಸಕರು ಅದನ್ನು ಕಟುವಾಗಿ ಟೀಕಿಸಿದರು. ಅದಕ್ಕೆ ಬೆಂಬಲ ನೀಡಿದ್ದಂಥ ಅಮೆರಿಕೆಯ ಸ್ತ್ರೀರೋಗಶಸ್ತ್ರಜ್ಞರೂ ಆಗ ಈ ಅಸಾಂಪ್ರದಾಯಿಕ ಶಸ್ತ್ರಕ್ರಿಯಾ ವಿಧಾನವನ್ನು ಪ್ರಶ್ನಿಸತೊಡಗಿದರು.

ಅಮೆರಿಕೆಯ ಬಂಜೆತನದ ನಿವಾರಣೆ ಸಂಸ್ಥೆಯ ಹಿಂದಿನ ಅಧ್ಯಕ್ಷರಾಗಿದ್ದ ಎಸ್. ಜಾನ್ ಬೆಹ್ರ್‌ಮನ್ ಅವರು ೧೯೮೫ ರ ಆಗಸ್ಟ್ ತಿಂಗಳಿನ ಒಂದು ದಿವಸ ಸೆಮ್ ಅವರ ಕಛೇರಿಗೆ ಧಾವಿಸಿ ಬಂದು ಹೀಗೆಂದು ಹೇಳಿದರು: "ನಿಮ್ಮ ಚಿತ್ರಗಳಲ್ಲಿ ನೀವು ತೋರಿಸಿರುವುದನ್ನು ನಾನು ಮತ್ತು ನನ್ನ ಸಹೋದ್ಯೋಗಿಗಳು ನಂಬಲಾರದೆ ಹೋಗಿದ್ದೇವೆ. ನಾನೇ ಖುದ್ದಾಗಿ ಅಂಥ ಶಸ್ತ್ರಚಿಕಿತ್ಸೆಯೊಂದನ್ನು ನೋಡಬಯಸುತ್ತೇನೆ." ಸೆಮ್ ಅವರಿಗೆ ಆಶ್ಚರ್ಯವಾಯಿತು. ಆದರೂ, ಅವರ ಕೋರಿಕೆಯನ್ನು ಒಪ್ಪಿದರು. ಮಾರನೆಯ ದಿವಸ ಸೆಮ್ ಅವರು ರೋಗಗ್ರಸ್ತವಾಗಿದ್ದ ಅಂಡಾಶಯ ಮತ್ತು ಫ್ಯಾಲೋಪಿಯನ್ ನಳಿಕೆ

ಯನ್ನು ಕತ್ತರಿಸಿ ತೆಗೆದಾಗ, ಉದರದರ್ಶಿಗೆ ಲಗತ್ತಿಸಲಾಗಿದ್ದ ಇನ್ನೊಂದು ದರ್ಶಕ–ಉಪಕರಣದ ಮೂಲಕ ಬೆರ್ಗ್‌ಮನ್ ಅವರು ಶಸ್ತ್ರಚಿಕಿತ್ಸೆಯ ಒಂದೊಂದು ಹೆಜ್ಜೆಯನ್ನೂ ಎಚ್ಚರಿಕೆಯಿಂದ ಪರಿಶೀಲಿಸಿದರು. ಶಸ್ತ್ರಚಿಕಿತ್ಸೆ ಮುಗಿದ ಬಳಿಕ ಅವರು ಹೀಗೆಂದರು: “ಅದ್ಭುತ!”

ಐದು ತಿಂಗಳ ಬಳಿಕ ಸೆಮ್ ಅವರು ಮಿಯಾಮಿಯಲ್ಲಿ ನಡೆಸಿಕೊಟ್ಟ ‘ಕನಿಷ್ಠತಮ ಆಕ್ರಮಣಶೀಲ ಶಸ್ತ್ರಚಿಕಿತ್ಸೆ’ಯ ಬಗೆಗಿನ ಒಂದು ವಾರದ ಅವಧಿಯ ತರಬೇತಿ ಶಿಕ್ಷಣದಲ್ಲಿ ಅಮೆರಿಕೆಯ ಸುಮಾರು ೨೦೦ ಮಂದಿ ಸ್ತ್ರೀರೋಗ ಶಾಸ್ತ್ರಜ್ಞರು ಪಾಲ್ಗೊಂಡರು. ಇದು ಅವರ ವೃತ್ತಿಯಲ್ಲಿನ ಮಹತ್ವದ ಸಾಧನೆಯನ್ನು ಸಾರಿ ಹೇಳುವ ಸಂಧಿಕಾಲವೇ ಆಗಿತ್ತು. ಆದರೆ, ಅವರು ಕೀರ್ತಿಯ ಶಿಖರವನ್ನು ಏರುತ್ತ ನಡೆದಂತೆ, ವೈಯಕ್ತಿಕ ದುರಂತ ಅವರ ಮೇಲೆ ಎರಗಿತು. ೧೯೮೬ ರ ಜೂನ್ ತಿಂಗಳಲ್ಲಿ ಇಪ್ಪತ್ತೆಂಟು ವರ್ಷಗಳ ಕಾಲ ಅವರ ಬಾಳ ಸಂಗಾತಿಯಾಗಿದ್ದ ರೋಸ್‌ವಿತಾ ಕ್ಯಾನ್ಸರ್ ರೋಗಕ್ಕೆ ಬಲಿಯಾದರು. ಆಗಿನ ಸನ್ನಿವೇಶದ ಬಗ್ಗೆ ಮೆತ್ಲರ್ ಹೀಗೆನ್ನುತ್ತಾರೆ: “ಅಗಲಿಕೆಯ ನೋವಿನ ಎರಡು ವರ್ಷಗಳು ಉರುಳಿದವು. ಆದರೆ, ಆ ಬಳಿಕ ಕುರ್ತ್ ಸೆಮ್ ಅವರ ಯಾರೂ ತಡೆಯಲಾಗದ ಶಕ್ತಿ–ಉತ್ಸಾಹಗಳು ಮರಳಿ ಬಂದವು.”

ಇಂದು ಸೆಮ್ ಅವರ ಚಟುವಟಿಕೆಯ ಬಿರುಗಾಳಿಯೇ ಆಗಿಬಿಟ್ಟಿದ್ದಾರೆ. ಶಸ್ತ್ರಚಿಕಿತ್ಸೆಗಳನ್ನು ನಡೆಸದಿರುವ ಅವಧಿಗಳಲ್ಲಿ ಅವರು ಅಂತರ–ರಾಷ್ಟ್ರೀಯ ವೈದ್ಯಕೀಯ ಮಹಾಧಿವೇಶನಗಳಲ್ಲಿ ಮತ್ತು ವಿಚಾರಗೋಷ್ಠಿಗಳಲ್ಲಿ ಅಧ್ಯಕ್ಷರಾಗಿ ಪಾಲ್ಗೊಳ್ಳುವ ಸಲುವಾಗಿ ಜಗತ್ತಿನಾದ್ಯಂತ ವಿಮಾನ–ಸಂಚಾರವನ್ನು ಕೈಗೊಳ್ಳುತ್ತಾರೆ. ಜಗತ್ತಿನ ಎಲ್ಲ ಕಡೆಗಳಿಂದ ಬಂದ ವೈದ್ಯಕೀಯ ಯಾತ್ರಾರ್ಥಿಗಳು ಅವರ ಶಸ್ತ್ರಚಿಕಿತ್ಸೆಯ ಕೋಣೆಗಳಿಗೆ ಧಾವಿಸುತ್ತಾರೆ. ಉದರದರ್ಶಿ ಕಿಬ್ಬೊಟ್ಟೆ ಶಸ್ತ್ರಚಿಕಿತ್ಸೆಯನ್ನು ಕುರಿತಂತೆ ಅವರು ಬರೆದಿರುವ ಪುಸ್ತಕಗಳು ‘ಕನಿಷ್ಠತಮ ಆಕ್ರಮಣಶೀಲ ಶಸ್ತ್ರಚಿಕಿತ್ಸೆ’ಯ ಬಗೆಗಿನ ಅಧ್ಯಯನ ಕ್ಷೇತ್ರಗಳಲ್ಲಿನ ಬೈಬಲ್ಲುಗಳೇ ಆಗಿಬಿಟ್ಟಿವೆ.

೧೯೯೧ ರಲ್ಲಿ ಸೆಮ್ ಅವರನ್ನು ‘ಜರ್ಮನಿಯ ವರ್ಷದ ವೈದ್ಯ’ ಎಂದು ಹೆಸರಿಸಿದಾಗ, ಅವರಿಗೆ ಮಹಾ ಗೌರವವೇ ಸಂದಂತೆ ಆಯಿತು. ಸೆಮ್ ಅವರಿಗೆ ಇದಕ್ಕಿಂತಲೂ ಹೆಚ್ಚು ತೃಪ್ತಿಯನ್ನು ತಂದುಕೊಟ್ಟ ಸಂಗತಿಯೆಂದರೆ ಇದಕ್ಕೆ ಮೊದಲು ಅವರನ್ನು ಟೀಕಿಸುತ್ತಿದ್ದ ವೃತ್ತಿಬಾಂಧವರಿಂದಲೇ ಅವರಿಗೆ ದೊರೆತ ಮಾನ್ಯತೆ. ಒಬ್ಬರಂತೂ ವೈಯಕ್ತಿಕವಾಗಿ ಅವರಿಗೆ ಬರೆದ ಪತ್ರದಲ್ಲಿ ಕ್ಷಮೆ

ಯನ್ನು ಕೋರಿದ್ದರು: "ನೀವು ಶಸ್ತ್ರಚಿಕಿತ್ಸೆಯ ಮಹಾ ಬೋಧಕರಲ್ಲಿ ಒಬ್ಬರಾಗಿಬಿಟ್ಟದ್ದೀರಿ" ಎಂದೂ ಅವರು ಬರೆದಿದ್ದರು.


ದೋಣಿ ಸಂಚಾರ ಮತ್ತು ವಿಮಾನ ಹಾರಾಟದಂಥ ಹೊರಾಂಗಣ ಹವ್ಯಾಸಗಳಿಗೆ ಅವರ ಕೆಲಸಗಳಿಂದಾಗಿ ಕಾಲಾವಕಾಶ ದೊರೆಯದಂತಾಗಿಬಿಟ್ಟದೆಯಾದರೂ, ಉಪಕರಣಗಳನ್ನು ರೂಪಿಸುವ ತಮ್ಮ ಮೆಚ್ಚಿನ ಹವ್ಯಾಸಕ್ಕೆ ಅವರು ತಿಲಾಂಜಲಿಯನ್ನೇನೂ ಕೊಟ್ಟಿಲ್ಲ. ಅವರ ಇತ್ತೀಚಿನ ಶೋಧನೆಗಳಲ್ಲಿ ಒಂದಾಗಿರುವ ಉಪಕರಣವೊಂದು ಗರ್ಭಾಶಯದ ಗಂತಿಯ ಶಸ್ತ್ರಚಿಕಿತ್ಸೆಯ ವಿಷಯದಲ್ಲಿ ಕ್ರಾಂತಿಯನ್ನೇ ಉಂಟುಮಾಡಿದೆ. ಇದು ಸಾಮಾನ್ಯವಾಗಿ ಮೂರರಲ್ಲಿ ಒಬ್ಬ ಮಹಿಳೆಯಲ್ಲಿ ಕಾಣಿಸಿಕೊಳ್ಳುವಂಥ ದೋಷವಾಗಿದ್ದು ಗರ್ಭಾಶಯವನ್ನು ತೆಗೆದುಹಾಕುವುದು ಮಾತ್ರವೇ ಇದಕ್ಕಿದ್ದ ಶಿಷ್ಟ ವೈದ್ಯಕೀಯ ಚಿಕಿತ್ಸೆಯಾಗಿತ್ತು. ಹಾಗೆ ಮಾಡದೆ ಇದ್ದಲ್ಲಿ, ಗಂತಿಯ ಪರಿಣಾಮವಾಗಿ ಮೂತ್ರಕೋಶ ಅಥವಾ ಕರುಳಿನ ಮೇಲೆ ಒತ್ತಡ ಏರ್ಪಡುವಂಥ, ಲೈಂಗಿಕ ಕ್ರಿಯೆಯ ಸಂದರ್ಭದಲ್ಲಿ ನೋವು ಉಂಟಾಗುವಂಥ ವೇದನೆಗಳು ಮಾತ್ರವಲ್ಲದೆ, ಗರ್ಭಪಾತವಾಗುವ ಅಥವಾ ಬಂಜೆತನ ಉಂಟಾಗುವ ಅಪಾಯವೂ ಎದುರಾಗುತ್ತಿತ್ತು. ಅಂಥ ಶಸ್ತ್ರಚಿಕಿತ್ಸೆಯ ಬಳಿಕ, ಚೇತರಿಸಿಕೊಳ್ಳಲು ರೋಗಿಗಳಿಗೆ ಕನಿಷ್ಠ ಪಕ್ಷ ಮೂರು ತಿಂಗಳ ಅವಧಿಯೇ ಬೇಕಾಗುತ್ತಿತ್ತು. ಗರ್ಭಾಶಯಕ್ಕೆ ಅಪಾಯವನ್ನುಂಟುಮಾಡದೆಯೇ ಈ ಬಗೆಯ ಗಂತಿಗಳನ್ನು ತೆಗೆದು ಹಾಕಲು ಬಳಸಬಹುದಾದ ಸಣ್ಣ ವರ್ತುಲಾಕಾರದ ಗರಗಸವೊಂದನ್ನು ಸೆಮ್ ಅವರು ರೂಪಿಸಿದರು.

೧೯೯೧ರ ಆಗಸ್ಟ್ ತಿಂಗಳಿನಲ್ಲಿ ಅವರು ನಲವತ್ತೆರಡು ವರ್ಷದ ಮಹಿಳೆಯೊಬ್ಬಳಿಗೆ, ಮೊಟ್ಟಮೊದಲ ಬಾರಿಗೆ ಕನಿಷ್ಠತಮ ಆಕ್ರಮಣಶೀಲ ಶಸ್ತ್ರಚಿಕಿತ್ಸೆ ವಿಧಾನದ ಮೂಲಕ, ಗರ್ಭಾಶಯ ಉಚ್ಛೇದನದ ಶಸ್ತ್ರಚಿಕಿತ್ಸೆ ಮಾಡಿದರು. ಈ ಶಸ್ತ್ರಚಿಕಿತ್ಸೆಯಲ್ಲಿ ನಿರ್ಣಾಯಕ ಪಾತ್ರ ವಹಿಸಿದ ಉಪಕರಣಗಳೆಂದರೆ ಸೆಮ್ ಅವರು ಹೊಸದಾಗಿ ರೂಪಿಸಿದ್ದ ವರ್ತುಲಾಕಾರದ ಗರಗಸ ಮತ್ತು ಗಂತಿಗಳನ್ನು ಕತ್ತರಿಸಿ ತೆಗೆಯುವ ವಿಶಿಷ್ಟ ಉಪಕರಣವೊಂದರ ಸಂಯುಕ್ತ ರೂಪವಾಗಿದ್ದಂಥ ಉಪಕರಣ. ಶಸ್ತ್ರಚಿಕಿತ್ಸೆ ಅದೆಷ್ಟು ಕರಾರುವಾಕ್ಕಾಗಿದಿತೆಂದರೆ ಆ ಮಹಿಳೆಯ ಗರ್ಭಾಶಯದ ರಜ್ಜುಬಂಧಗಳಿಗಾಗಲೀ, ಯೋನಿಗಾಗಲೀ ಯಾವುದೇ ಅಪಾಯವೂ ಉಂಟಾಗಿರಲಿಲ್ಲ. "ಆಕೆಯ ಲೈಂಗಿಕ ಚಟುವಟಿಕೆಗೆ ಇದರಿಂದ ಯಾವ ತೊಂದರೆಯೂ ಉಂಟಾಗುವುದಿಲ್ಲ" ಎಂದು ಸೆಮ್ ತಿಳಿಸಿ

ದರು. ನಾಲ್ಕು ದಿವಸಗಳ ಒಳಗಾಗಿ ಆ ರೋಗಿ ಸಾಮಾನ್ಯ ಜೀವನವನ್ನು ನಡೆಸತೊಡಗಿದ್ದಳು.

ಇಷ್ಟೆಲ್ಲ ಕೀರ್ತಿ-ಪ್ರತಿಷ್ಠೆಗಳು ಲಭಿಸಿದ್ದರೂ, ಸೆವರ್ ಅವರು ತುಂಬ ವಿನಯಶೀಲ ವ್ಯಕ್ತಿಯಾಗಿಯೇ ಉಳಿದಿದ್ದಾರೆ. "ರೋಗಿಗಳ ಜೀವನದ ಗುಣಮಟ್ಟವನ್ನು ಉತ್ತಮಪಡಿಸುವುದೇ ಶಸ್ತ್ರಚಿಕಿತ್ಸಕನ ಪರಮ ಧ್ಯೇಯವಾಗಿರಬೇಕು" ಎಂದು ಅವರು ಹೇಳುತ್ತಾರೆ. ಜಗತ್ತಿನಾದ್ಯಂತ ಲಕ್ಷೋಪಲಕ್ಷ ಮಂದಿಯ ಪಾಲಿಗೆ ಈ ಉದಾತ್ತ ಧ್ಯೇಯ ವಾಸ್ತವ ಸಂಗತಿಯಾಗಿ ಪರಿಣಮಿಸುವಂಥ ಸಾಧನೆಯನ್ನು ಕುರ್ತ್ ಸೆವರ್ ಅವರು ತಮ್ಮದಾಗಿಸಿಕೊಂಡಿದ್ದಾರೆ ಎಂಬುದರಲ್ಲಿ ಅನುಮಾನವೇನೂ ಇಲ್ಲ.

ಡಾ. ಪ್ರಧಾನ್ ಗುರುದತ್ತ



ಸಾಹಿತ್ಯ ಸಂಸ್ಕಾರವಿಲ್ಲದ ಸಂಗೀತ ಜೀವಾಳವಿಲ್ಲದ ತಂತಿಯಂತೆ ಸೊರಗಿ ಹೋಗುವುದು.

—ರಾಳ್ಳಪಲ್ಲಿ ವಾಣಿ

# ಒಂದು ರೂಪಾಯಿ

ಪ್ರಕಾಶ್‌ಮಾಥುರ್ ತಮ್ಮ ಮನೆಯ ಎದುರಿನ ತೋಟದಲ್ಲಿ ನೀಲಿ ಬಣ್ಣದ 'ಥ್ರೀ ಪೀಸ್ ಸೂಟ್' ಧರಿಸಿ ಹೊಳೆಯುತ್ತಿದ್ದುದು ಕಾಣುತ್ತಿತ್ತು. ಅಲ್ಲಿಯೇ ಕುರ್ಚಿಯ ಮೇಲೆ ಕುಳಿತು ಪತ್ರಿಕೆಯೊಂದನ್ನು ಓದುತ್ತಿದ್ದರು. ಕೈನಲ್ಲಿ ಎಂದಿನಂತೆ ಪೈಪ್ ಉರಿಯುತ್ತಿತ್ತು.

"ಏನಪ್ಪಾ ! ಸೂಟ್ ಹೊಸದೇನು ?" ಎನ್ನುತ್ತಾ ನಾನು ಇಂಗ್ಲೀಷಿನಲ್ಲಿ ಪ್ರಶ್ನಿಸಿ ಬಾಗಿಲು ತೆರೆದು ಒಳನುಗ್ಗಿದೆ.

"ಹೌದೌದು ! ದೀಪಾವಳಿ ಸಂದರ್ಭದಲ್ಲಿ ಹೊಲಿಸಿದ್ದು. ಒಂದು ಸಾವಿರವಾಯ್ತು" ಅವರ ಮುಖದಲ್ಲಿ ಹೆಮ್ಮೆಯು ನೋಟವಿತ್ತು.

"ಬಹಳ ಚೆನ್ನಾಗಿದೆ"

"ಥ್ಯಾಂಕ್ಸ್ ! ಏನ್ ಬಂದಿದ್ದು ?"

"ಸಿಟಿಗೆ ಹೊರಟಿದ್ದೆ. ತಾವು ತೋಟದಲ್ಲಿ ಕಂಡಿರಿ. ನಿಮ್ಮ ಜತೆ ಭೇಟಿಯಾಗಿ ಬಹಳ ದಿನಗಳಾಯ್ತು ಅಂದ್ಕೊಂಡೆ ; ಆದ್ದರಿಂದಲೇ ಒಮ್ಮೆ 'ಹಲೋ' ಹೇಳಿ ಹೋಗೋಣಾಂತ ಬಂದೆ."

"ಕೂತ್ಕೊಳೋದಿಲ್ಲವೇನು !'

"ಹೂಂ. ಹೌದೌದು....ಪರವಾಗಿಲ್ಲ....ತಾವೆಲ್ಲೋ ಹೊರಗಡೆ ಹೋಗಲಿಕ್ಕೆ ರೆಡಿಯಾಗಿದ್ದೀರಿ ಅನ್ಸುತ್ತೆ....ಇನ್ನೊಂದ್ ದಿನ ವ್ರಾವಮುವಾಗಿ ಭೇಟಿಯಾಗ್ತೇನೆ."

"ಹೌದು. ಬಹಳ ದಿವ್ಸಗಳಿಂದ ಹೆಂಡತಿಯಾಸೆ 'ಬ್ಲೂ ಲಗೂನ್' ಫಿಲ್ಮ್ ನೋಡಬೇಕೂಂತ್ತಿತ್ತು. ಟಿಕೆಟ್ ಸಿಕ್ಕಿರಲಿಲ್ಲ. ಕೊನೆಗೆ ನೌಕರನ ಹತ್ರ ಬ್ಲಾಕ್‌ನಲ್ಲಿ ಟಿಕೆಟ್ ತರ್ಸಿದ್ದಾಗಿದೆ. ಐದು ರೂಪಾಯಿನ ಟಿಕೆಟ್ ಹದಿನಾರು ರೂಪಾಯಿಗೆ ಕೊಂಡಿದ್ದಾಗಿದೆ."

"ಒಳ್ಳೇದು !" ಎನ್ನುತ್ತಾ ನಾನು ಸುತ್ತಾಡತೊಡಗಿದೆ. ತೋಟದಲ್ಲಿ ಅರಳಿದ ದೊಡ್ಡ ದೊಡ್ಡ ಗುಲಾಬಿಗಳು ನನ್ನ ಗಮನವನ್ನು ಆಕರ್ಷಿಸಿದ ಅನುಭವವಾಯಿತು. ಪ್ರತಿಯೊಂದು ಹೂವೂ ಚಿಕ್ಕ ತಾವರೆಗಳಂತೆ ಎನಿಸುತ್ತಿತ್ತು.

---

೧೯೮೮ರ ಜೂನ್ ತಿಂಗಳ 'ನವನೀತ' ಮಾಸಪತ್ರಿಕೆಯಲ್ಲಿ ಪ್ರಕಟವಾದ ಶ್ರೀಮತಿ ಜಯಲಕ್ಷ್ಮಿ ಸುಬ್ರಹ್ಮಣ್ಯನ್ ಅವರ (ಮೂಲ : ತಮಿಳು ಕಥೆ—ಲಕ್ಷ್ಮೀರಮಣನ್) "ಏಕ್ ರುಪಯಾ" ಲೇಖನದ ಅನುವಾದ.

ವಾಹ್! ಅದೆಷ್ಟು ಬಣ್ಣಗಳ ಹೂವರಳಿವೆ. ನಾನು ಸಂತೋಷಚಿತ್ತನಾಗಿ ಪುಳಕಗೊಂಡು, "ಬ್ಯೂಟಿಫುಲ್ ರೋಸಸ್" ಎಂದು ಉದ್ಗಾರ ತೆಗೆದೆ.

"ಈ ಗಿಡಗಳನ್ನು ನಾನು ಡೆಹರಾಡೂನ್‌ನಿಂದ ತರಿಸಿದ್ದೆ. ಒಂದು ಗಿಡವ ಬೆಲೆ ೨೫ ರೂಪಾಯಿ." ಅವರ ಧ್ವನಿಯಲ್ಲಿ ದರ್ಪವಿತ್ತು. ಮುಂದೆ ಅವರು ಆ ಗಿಡಗಳಿಗೆ ಪೋಷಣೆಗೆ ಪ್ರಯುಕ್ತಿಸಿ ಮಾಡಿದ ಉಪಚಾರ ಮತ್ತು ಉತ್ಕೃಷ್ಟ ಜೀವಣಿಗೆಗೆ ರಸಗೊಬ್ಬರ ಹಾಕುವಷ್ಟರಲ್ಲಿ ಚೌಕೀದಾರ್ ಬಹಾದುರ್ ಬಂದ.

ಮಾಥುರ್ ಅನ್ಯಮನಸ್ಕರಾಗಿ, "ಏನ್ ಬೇಕು ಬಹಾದುರ್?" ಎಂದು ಕೇಳಿತರು.

"ಸಾರ್! ಏನಿಲ್ಲ, ಸಾರ್!....ಮುಂದಿನ ತಿಂಗಳಿನಿಂದ ನನ್ನ ಸಂಬಳದಲ್ಲಿ ಒಂದು ರೂಪಾಯಿ ಹೆಚ್ಚಿಸಿಬಿಡಿ. ನನ್ನ ಸಂಸಾರಾನ ನಾನು ನೇಪಾಳದಿಂದ ಇಲ್ಲಿಗೆ ಕರ್ಕೊಂಡ್ ಬಂದಿದ್ದೇನೆ. ಈಗಿನ ಸಂಪಾದನೆಯೂ ಸಾಕಷ್ಟಿಲ್ಲ. ಎಲ್ಲ ಪದಾರ್ಥಗಳ ಬೆಲೆಯೂ ಹೆಚ್ಚಾಗಿದೆ."

"ನಿನಗೆ ಮೊಹಲ್ಲಾದವರು ಎಷ್ಟು ಹಣ ಕೊಡ್ತಾರೆ?" ಎಂದು ಪ್ರಶ್ನಿಸಿದರು ಮಾಥುರ್.

"ಪ್ರತಿ ಮನೆಗೆ ಎರಡು ರೂಪಾಯಿ"

"ಈ ಮೊಹಲ್ಲಾದಲ್ಲಿ ಎಷ್ಟು ಮನೆಗಳಿವೆ?"

ಬಹಾದುರ್ ತನ್ನ ಲೆಕ್ಕದ ಪುಸ್ತಕ ತೆಗೆದು, "ಸಾರ್! ಒಟ್ಟು ನೂರ-ಮೂವತ್ತು ಮನೆಗಳಿವೆ" ಎಂದು ಉತ್ತರಿಸಿದ.

"ಹಾಗಿದ್ಮೇಲೆ ೨೬೦ ರೂಪಾಯಿ ನಿನಗೆ ಸಾಕಾಗೋದಿಲ್ವೆ?"

"ಸಾರ್, ಹೆಚ್ತಾ ಇರೋ ಪದಾರ್ಥಗಳ ಬೆಲೆ...."

ಮಾಥುರ್ ಮುಷ್ಠಿ ಬಾಯಿಸಿಹಾಕಿ, "ಶಟ್‌ಅಪ್!" ಎಂದು ಕಿರುಚಿದರು. ಬಹಾದುರ್ ತೆಪ್ಪಗಾದ.

"ಸಾಹೇಬ್ರೆ! ಒಂದೇ ರೂಪಾಯಿ ಹೆಚ್ಚು ಕೇಳಿದ್ದು!"

"ಸಾಧ್ಯವೇ ಇಲ್ಲ"

ಬಹಾದುರ್ ನನ್ನತ್ತ ದಯಾರ್ದ್ರ ಭಾವದಿಂದ ನೋಡಿದ. ಆ ಪರಿಸ್ಥಿತಿಯಲ್ಲಿ ಮಾಥುರ್‌ಗೆ ನನ್ನ ಶಿಫಾರಸ್ಸು ಒಪ್ಪಿಗೆಯಾಗುತ್ತೋ ಇಲ್ಲವೋ ಎಂಬ ಅನುಮಾನವಿತ್ತು!

ನಾನು ಆ ಮೊಹಲ್ಲಾ ನಿವಾಸಿಯಾಗುವ ಮೊದಲೇ ಒಂದು ರೂಪಾಯಿ ಹೆಚ್ಚು ಕೊಡುವ ಮಾತು ಕೊಟ್ಟಿದ್ದೆ. ಅದನ್ನು ಪುನಃ ಹೇಳುವ ಅಗತ್ಯ ನನಗೆ ಕಾಣಲಿಲ್ಲ.

ಸುಮಾರು ಐದು ನಿಮಿಷಗಳ ಕಾಲ ಅವರಿಬ್ಬರ ನಡುವೆ ಆ ಒಂದು ರೂಪಾಯಿಗಾಗಿ (ವಿಷಯದ ಮೇಲೆ) ಬಿಸಿಬಿಸಿ ಚರ್ಚೆ ನಡೆಯಿತು. ಕೊನೆಗೆ ಬಹಾದುರ್ ಸೋತುಹೋದ. ಜೋಲುಮುಖದೊಂದಿಗೆ ಅವನು ಹಿಂದಿರುಗಿದ ದೃಶ್ಯ ನೋಡಲು ಅತ್ಯಂತ ಕರುಣಾಜನಕವಾಗಿತ್ತು. ಅನಂತರ ಮಾಥುರ್ ಅವನನ್ನು ಹೇಗೆ ಬೈದರು ಎಂಬುದನ್ನು ಸ್ಮರಿಸಲೂ ಸಹ ಈಗ ಕಷ್ಟವಾಗುತ್ತದೆ.

ಅಲ್ಲಿ ನಿಲ್ಲಲು ನನಗಿಷ್ಟವಿಲ್ಲದೆ ಹೊರಟುಬಿಟ್ಟೆ. ಸಾವಿರಾರು ರೂಪಾಯಿಗಳ ಸೂಟ್‌ನಲ್ಲಿ ಕಂಗೊಳಿಸುವ, ೨೫ ರೂಪಾಯಿಗಳಿಗೆ ಗುಲಾಬಿಗಿಡ ಕೊಂಡು ತೋಟವನ್ನು ಅಲಂಕರಿಸುವ, ಬ್ಲಾಕ್‌ನಲ್ಲಿ ಟಿಕೆಟ್ ಪಡೆದುಕೊಂಡು ಸಿನಿಮಾ ನೋಡಲು ಬಯಸುವ ಮಾಥುರ್, ರಾತ್ರಿಯೆಲ್ಲ ಎಚ್ಚರವಿದ್ದು ಕಾವಲು ಕೂತು ಬದುಕು ಸಾಗಿಸುವ ಬಹಾದೂರ್‌ನ ನ್ಯಾಯಯುತ ಬೇಡಿಕೆಯನ್ನು ಹೀಗೆ ತಿರಸ್ಕರಿಸಬಾರದಾಗಿತ್ತೆನ್ನುವುದು ನನ್ನ ಅಭಿಪ್ರಾಯ.

ಅವನ ಬೇಡಿಕೆ ಕೇವಲ ಒಂದು ರೂಪಾಯಿಯದಾಗಿತ್ತು. ಮಾಥುರ್ ವಿಷಯವಷ್ಟೇ ಆಗಿರಲಿಲ್ಲ.

ಮಾಥುರ್ ನನ್ನನ್ನು ಎಚ್ಚರಿಸುತ್ತಾ, "ಬಹುಶಃ ಬಹಾದುರ್ ಸಂಬಳ ಹೆಚ್ಚಿಸುವ ಪ್ರಾರ್ಥನೆ (ತೆಗೆದುಕೊಂಡು) ಮಾಡ್ತಾ ನಿಮ್ಮ ಬಳಿಗೂ ಬರಬಹುದು. ಅವನಿಗೆ ಏನೂ ಕೊಡಬೇಡಿ. ಒಳ್ಳೇ ನೊಣ ಇದ್ದಾಗೆ ಜನ"— ಎಂದರು. ನಾನೇನೂ ಉತ್ತರಿಸಲಿಲ್ಲ.

ಮಾರನೆಯ ದಿನ ನಾನು ಕಛೇರಿಯಿಂದ ಹಿಂದಿರುಗಿದಾಗ, ಉತ್ಸಾಹ ಪೂರ್ವಕವಾಗಿ ಮಗಳು ಸೌಮ್ಯ ಪ್ರಶ್ನಿಸತೊಡಗಿದಳು–"ಪಾಪ್ಪ ! ನಿಮಗೊಂದು ವಿಷಯ ಗೊತ್ತಿದೆಯಾ ?"

"ಏನಾಯ್ತಮ್ಮ ?"

"ಅಪ್ಪಾ, ೬೯ನೇ ನಂಬರ್ ಮನೆ ಅಂಕಲ್ ಮತ್ತೆ ಆಂಟಿ ನೆನ್ನೆ ಸಂಜೆ ತಿರುಗಾಡೋದಿಕ್ಕೆ ಹೋಗ್ತಾ ಇದ್ದರು. ಆಗ ರಸ್ತೆಯಲ್ಲಿ ಯಾವನೋ ಗೂಂಡಾ ಅವರನ್ನು ತಡೆದು, ಆಂಟಿ ಹತ್ತಿರ ಇರೋ ಒಡವೆ ಬಿಚ್ಚಿಕೊಡೋದಿಕ್ಕೆ ಹೇಳಿದ. ಆ ಸಮಯಕ್ಕೆ ಸರಿಯಾಗಿ ಬಹಾದುರ್ ಅದೇ ರಸ್ತೆಯಲ್ಲಿ ಹೋಗ್ತಾ ಇದ್ದವನು ಆ ಗೂಂಡಾನ ಹಿಡ್ಕೊಂಡು ಚೆನ್ನಾಗಿ ಬಡಿದ. ಆ ಗೂಂಡಾ ತಿರುಗಿಬಿದ್ದವನೇ, ಬಹಾದುರ್ ಮೇಲೆ ಚೂರಿ ಹಾಕಿ ಓಡಿದ. ಬಹಾದುರ್ ಈಗ ಆಸ್ಪತ್ರೇಲಿದಾನೇಂತ ನನ್ನ ಜತೆಗಾರ್ತಿ (ಗೆಳತಿ) ಹೇಳಿದಳು."

"ಯಾವ ಆಸ್ಪತ್ರೆ ?"

"ಸಫ್ದರ್‌ಜಂಗ್"

ಅಮ್ಮನಿಗೆ ಬೇಗ ಕಾಫಿ ಮಾಡೋದಿಕ್ಕೆ ಹೇಳು. ನಾನು ಈಗಲೇ ಅವನನ್ನು ನೋಡೋದಿಕ್ಕೆ ಹೋಗ್ತೇನೆ."

"ಅಯ್ಯಪ್ಪಾ" ಎನ್ನುತ್ತಾ ಸೌಮ್ಯ ಒಳಗೋಡಿದಳು

ನನಗೇಕೋ ತಡೆಯಲಾರದ ನೋವಾಗುತ್ತಿದ್ದುದು ತಿಳಿಯಲಿಲ್ಲ. ಬಹಾದುರ್‌ಗೆ ಜೂಬಿ ಹಾಕಿದ್ದಕ್ಕಷ್ಟೇ ಅಲ್ಲ, ೬೯ನೇ ನಂಬರ್ ಮನೆ ಮಾಲೀಕ ಮತ್ತ್ಯಾರೂ ಅಲ್ಲದೆ ಮಾಥುರ್ ಆಗಿದ್ದುದು ಕಾರಣವಾಗಿದ್ದಿತು.

ಕಲ್ಯಾಣಿ ಮೂರ್ತಿ ರಾಮನಾಥಪುರ



ಅಧಿಕಾರಕ್ಕೆ ಗೌರವ ಕೊಡುವುದು ಜನರ ಕರ್ತವ್ಯ; ಜನತೆಯ ಅಭಿಪ್ರಾಯಕ್ಕೆ ಬೆಲೆ ಕೊಡುವುದು ಅಧಿಕಾರದ ಕರ್ತವ್ಯ.

—ಹಿತನುಡಿ

# ಸಾಮರ್‌ಸೆಟ್ ಮಾಮ್‌ನ ಆತ್ಮಚರಿತ್ರೆ—ಒಂದು ಪರಿಚಯ

ವರ್ಣರಂಜಿತವೂ, ವೈವಿಧ್ಯಮಯವೂ ಆದ ಬದುಕಿನ ತತ್ವ ಮತ್ತು ಅನುಭವಗಳನ್ನು ಜಗತ್ತಿನ ಅತ್ಯಂತ ಜನಪ್ರಿಯ ಲೇಖಕರಲ್ಲೊಬ್ಬನಾದ ಸಾಮರ್‌ಸೆಟ್ ಮಾಮ್ (೧೮೭೪-೧೯೬೫) ತನ್ನ 'ದಿ ಸಮ್ಮಿಂಗ್ ಆಫ್' ಗ್ರಂಥದಲ್ಲಿ ಪಡಿಮೂಡಿಸಿದ್ದಾನೆ. ಒಂದರ್ಥದಲ್ಲಿ ಬರಹಗಾರನೊಬ್ಬನ ಬದುಕಿನ ವಿಕಾಸವನ್ನು ಪ್ರತಿಫಲಿಸುವ ಪುಸ್ತಕವಿದು. ಸರಳತೆ, ಪಾರದರ್ಶಕತೆ ಮತ್ತು ಪದಲಾಲಿತ್ಯದ ಮಹತ್ವವನ್ನು ಮಾಮ್ ಈ ಕೃತಿಯ ಉದ್ದಕ್ಕೂ ಎತ್ತಿ ಹಿಡಿದಿದ್ದಾನೆ. ಇದು ಮಾಮ್ ತನ್ನ ಕೃತಿಗಳಿಗೆ ತಾನೇ ವಿಧಿಸಿಕೊಂಡು ಪರಿಪಾಲಿಸಿದ ಶಿಸ್ತು.

೧೮೭೪ ರಲ್ಲಿ ಪ್ಯಾರಿಸ್‌ನಲ್ಲಿ ಹುಟ್ಟಿದ ಮಾಮ್ ತನ್ನ ನಿಜಜೀವನದ ಅನುಭವಗಳನ್ನು ತನ್ನ ಬರವಣಿಗೆಯಲ್ಲಿ ಮುಂಚಿನಿಂದಲೂ ಉಪಯೋಗಿಸುತ್ತಲೇ ಬಂದಿದ್ದಾನೆ. ಲಂಡನ್‌ನಲ್ಲಿ ಅವನು ವೈದ್ಯಕೀಯ ವಿದ್ಯಾರ್ಥಿಯಾಗಿದ್ದಾಗಿನ ಜೀವನವನ್ನು 'ಆಫ್ ಹ್ಯೂಮನ್ ಬಾಂಡೇಜ್' ಕೃತಿ ರಚಿಸಿದರೆ 'ಲಿಝಾ ಆಫ್ ಲ್ಯಾಂಬೆತ್' ಕಾದಂಬರಿಯಲ್ಲಿ ಅವನು ವೈದ್ಯನಾಗಿ ತರಬೇತಿ ಪಡೆದ ದಿನಗಳು ದಾಖಲಾಗಿವೆ. ರಿವಿಯೆರಾ ಸಮಾಜದಲ್ಲಿ ಅವನು ಸಂಪರ್ಕಿಸಿದ ಸಮಾಜ ಸೇವಾ ಧುರೀಣರು, ದಾಸಿಗಳು, ಹಾಗೂ ಪೆಸಿಫಿಕ್, ಮಲಯ ದ್ವೀಪಗಳು ಮತ್ತು ಚೀನದಲ್ಲಿ ಅವನು ಭೇಟಿಯಾದ ನಾವಿಕರು ಮತ್ತು ಹೆಂಗೆಳೆಯರು ಮಾಮ್‌ನ ಕತೆ, ಕಾದಂಬರಿ ಮತ್ತು ನಾಟಕಗಳಲ್ಲಿ ಪಾತ್ರಗಳಾಗಿ ರೂಪು ತಳೆದಿದ್ದಾರೆ.

ಇಂಥ ವಿಶಿಷ್ಟವಾದ ನೆನಪುಗಳೊಡನೆ ಜೀವನ ಮತ್ತು ಕಲೆಯ ಬಗ್ಗೆ ಮಾರ್ಮಿಕವಾದ ಒಳನೋಟಗಳು ಕೂಡಿಕೊಂಡಿರುವುದರಿಂದ ಅವನ ಆತ್ಮಚರಿತ್ರೆ ಎಲ್ಲ ಲೇಖಕರಿಗೆ ಮತ್ತು ಓದುಗರಿಗೆ ಒಂದು ಅತ್ಯಾವಶ್ಯಕ ಹೊತ್ತಿಗೆಯಾಗಿದೆ.

ಸುಮಾರು ಎಪ್ಪತ್ತೇಳು ಪುಟ್ಟ ಅಧ್ಯಾಯಗಳನ್ನೊಳಗೊಂಡ ಇನ್ನೂರು ಪುಟಗಳ ಈ ಗ್ರಂಥದ ಆರಂಭದಲ್ಲಿ ಮಾಮ್ ಹೇಳುವ ಮಾತುಗಳು ಅತ್ಯಂತ ಗಮನಾರ್ಹವಾಗಿವೆ:

"ಇದು ಆತ್ಮಚರಿತ್ರೆಯಲ್ಲ; ಹಾಗೆಯೇ ನೆನಪುಗಳನ್ನು ಹೊತ್ತ ಗ್ರಂಥವೂ ಅಲ್ಲ. ನನ್ನ ಜೀವನದಲ್ಲಿ ಸಂಭವಿಸಿರುವ ಘಟನೆಗಳನ್ನು

ಒಂದಲ್ಲಾ ಒಂದು ರೀತಿಯಲ್ಲಿ ನನ್ನ ಕೃತಿಗಳಲ್ಲಿ ಈಗಾಗಲೇ ಉಪಯೋಗಿಸಿಕೊಂಡಿದ್ದೇನೆ. ಕೆಲವೊಮ್ಮೆ ನನಗಾದ ಒಂದು ಅನುಭವ ಒಂದು ವಸ್ತುವಾಗಿ ನನ್ನ ಅನುಕೂಲಕ್ಕೆ ಬಂದಿದೆ; ಅದನ್ನು ಅರ್ಥೈಸಲು ನಾನು ಘಟನಾವಳಿಗಳ ಸರಮಾಲೆಯನ್ನೇ ಸೃಷ್ಟಿಮಾಡಿದ್ದುಂಟು. ಸಾಮಾನ್ಯವಾಗಿ ಆಪ್ತವಾಗಿ ನನ್ನೊಡನೆ ಒಡನಾಡಿದ ವ್ಯಕ್ತಿಗಳನ್ನೇ ಆಧಾರವಾಗಿಟ್ಟುಕೊಂಡು ನನ್ನ ಕಥೆಯ ಪಾತ್ರಗಳನ್ನು ರಚಿಸಿದ್ದೇನೆ. ವಾಸ್ತವಿಕ ಅಂಶಗಳು ಕಾಲ್ಪನಿಕ ಅಂಶಗಳೊಡನೆ ಪೂರ್ತಿಯಾಗಿ ಬೆರೆತು ಹೋಗಿರುವುದರಿಂದ ಈಗ ಮತ್ತೆ ಹಿಂತಿರುಗಿ ನೋಡಿ ಒಂದರಿಂದ ಇನ್ನೊಂದನ್ನು ಬೇರ್ಪಡಿಸುವ ಪ್ರಯತ್ನದಲ್ಲಿ ಖಂಡಿತ ಸಫಲನಾಗಲಾರೆ. ವಾಸ್ತವಾಂಶಗಳನ್ನು ದಾಖಲು ಮಾಡುವುದೆಂದರೆ ನನಗೆ ಒಗ್ಗದ ಕಗ್ಗ; ಮೇಲಾಗಿ, ಈಗಾಗಲೇ ಅವುಗಳನ್ನು ಇನ್ನೂ ಉತ್ತಮವಾದ ರೀತಿಯಲ್ಲಿ ಉಪಯೋಗಿಸಿಯಾಗಿದೆ. ಅವುಗಳನ್ನು ಯಥಾವತ್ತಾಗಿ ಬರೆದರೆ ತುಂಬಾ ಮೃದುವಾಗಿ ಕಾಣಬಹುದೂ ಕೂಡ. ವೈವಿಧ್ಯಮಯವಾದ ಮತ್ತು ಕೃಷಿ ಎನ್ನಿಸುವ (ಲವಲವಿಕೆಯ) ಬದುಕನ್ನು ಬಾಳಿರುವೆ ನಾವರೂ ಸಾಹಸಮಯವಾದ್ದು ಎಂದು ಮಾತ್ರ ಹೇಳಲಾರೆ. ನನ್ನ ನೆನಪಿನ ಶಕ್ತಿ ಬಹಳ ದುರ್ಬಲವಾದದ್ದು. ಒಂದು ಒಳ್ಳೆಯ ಕಥೆಯನ್ನು ಮತ್ತೊಮ್ಮೆ ಕೇಳದೆ ನೆನಪಿಡುವುದಕ್ಕಾಗುವುದೇ ಇಲ್ಲ; ಹಾಗಾಗಿ, ಇನ್ನೊಬ್ಬರಿಗೆ ಅದನ್ನು ಹೇಳುವುದಕ್ಕೆ ಮೊದಲೇ ಮರೆತುಹೋಗಿರುತ್ತದೆ. ನನ್ನ ಸ್ವಂತ ಜೋಕುಗಳನ್ನೂ ಸಹ ನೆನಪಿನಲ್ಲಿಟ್ಟುಕೊಳ್ಳಲಾರೆ. ಈ ಕಾರಣದಿಂದ ನಾನು ಯಾವಾಗಲೂ ಹೊಸ ಹೊಸ ತಮಾಷೆಯನ್ನು ಸೃಷ್ಟಿಸಬೇಕಾದದ್ದು ಅನಿವಾರ್ಯವಾಗುತ್ತದೆ. ನನ್ನಲ್ಲಿರುವ ಈ ದೋಷದಿಂದಾಗಿ ಪ್ರಾಯಶಃ ನನ್ನ ಒಡನಾಟ ಹೆಚ್ಚು ಜನರಿಗೆ ಪ್ರಿಯವಾಗಲಾರದು ಎಂದು ನನ್ನ ಭಾವನೆ."

ಹೀಗೆ ಸರಾಗವಾಗಿ ಸಾಗುವ ಮಾಮ್‌ನ ಲೇಖನಿ ಅವನ ವೃತ್ತಿ ಜೀವನದ ಆರಂಭದ ದಿನಗಳಲ್ಲಿ ಸುಳಿದು ಮರೆಯಾದ ಮಂದಿಯ ಪರಿಚಯ ಮಾಡಿಸುತ್ತದೆ. ಮಾಮ್‌ಗೆ ಮೊದಲು ನೆನಪಾಗುವುದು ಮುಂದೆ ಗಮನಾರ್ಹ ವ್ಯಕ್ತಿಗಳಾಗಿ ಅರಳುವರೆಂದು ಭರವಸೆ ಮೂಡಿಸಿದ್ದ ಆ ಕಾಲದ ಕೆಲವು ರಾಜಕಾರಣಿಗಳು. ಅವರ ಬಗ್ಗೆ ಭವ್ಯ ಕಲ್ಪನೆಯನ್ನು ಹೊಂದಿದ್ದ ಮಾಮ್‌ನ ಹತ್ತಿರದಿಂದ ಅವರನ್ನು ಕಂಡಾಗ ಭ್ರಮನಿರಸನಗೊಳ್ಳುತ್ತಾನೆ. ಅವರಲ್ಲಿ ಬೌದ್ಧಿಕ ಸೂಕ್ಷ್ಮತೆ

ಯಾಗಲೀ, ಕಲ್ಪನೆಯ ಆಹ್ಲಾದವಾಗಲೀ ಇರದೆ ದೈನಂದಿನ ಜೀವನದ ಸಾಮಾನ್ಯ ವಿಷಯಗಳ ಬಗ್ಗೆ ಕೂಡ ಅವರು ಮೂಢರಾಗಿದ್ದುದು ಗಮನಕ್ಕೆ ಬರುತ್ತದೆ. ಆ ಜನರ ನುಡಿಯ ಬಡತನ ಅವರ ಸಂಭಾಷಣೆಗಳ ಮೂಲಕ ವ್ಯಕ್ತವಾಗುತ್ತದೆ. ಆ ಗುಂಪಿನಲ್ಲೆಲ್ಲ ಎಡ್ಮಂಡ್ ಗಾಸ್‌ನ ವ್ಯಕ್ತಿತ್ವ ಮಾತ್ರ ಎದ್ದು ಕಾಣುತ್ತದೆ. ಕಾರಣ, ಶೆಲ್ಲಿ ಮತ್ತು ಸ್ವಿನ್‌ಬರ್ನ್ ಕವಿಗಳ ಬಗ್ಗೆ ಗಾಸ್ ವೈಮರೆತು ಮಾತನಾಡುತ್ತಿದ್ದ ರೀತಿ ಹರ್ಷವುಂಟುಮಾಡುತ್ತಿತ್ತು. ಅಷ್ಟೇ ಅಲ್ಲ, ಯಾವ ವ್ಯಕ್ತಿಯ ಬಗ್ಗೆಯಾಗಲೀ ಗಾಸ್ ಮಾತನಾಡುವಾಗ ಕೇಳುವವರಿಗೂ ಆ ವ್ಯಕ್ತಿ ಆಪ್ತವಾಗುವಂತೆ ಮಾಡುತ್ತಿದ್ದ. ಮೊದಲನೆಯ ಅಧ್ಯಾಯದಲ್ಲೇ ಉತ್ತಮ ಸಂಭಾಷಣೆಯನ್ನು ಇಷ್ಟು ಮೆಚ್ಚಿಕೊಳ್ಳುವ ಮಾಮ್‌ನ ಮನೋಧರ್ಮ ಎಂಥದು ಎಂದು ಮನದಟ್ಟಾಗುತ್ತದೆ.

ಕಾದಂಬರಿಕಾರನಾಗಿ ಮಾಮ್ ತನ್ನ ಸುತ್ತಮುತ್ತಲ ಜನರನ್ನು ಹೇಗೆ ಕಂಡುಕೊಂಡ ಎನ್ನುವುದನ್ನು ಒಂದು ಪುಟದ ಎರಡನೆಯ ಅಧ್ಯಾಯ ಬಹಳ ಚೆನ್ನಾಗಿ ತಿಳಿಸುತ್ತದೆ. ಪೂರ್ತಿಯಾಗಿ ಅದನ್ನು ಉದ್ಧರಿಸುವುದು ಮಾಮ್‌ನ ಸೃಜನಶೀಲ ಮನಸ್ಸನ್ನು ಅರಿಯುವ ದೃಷ್ಟಿಯಿಂದ ಹೆಚ್ಚು ಅನುಕೂಲಕರವಾಗಿದೆ :

> "ಸುಪ್ರಸಿದ್ಧರನ್ನು ಭೇಟಿ ಮಾಡಲು ಜನ ಏಕೆ ತವಕಪಡುತ್ತಾರೆ ಎಂದು ನನಗೆ ಆಶ್ಚರ್ಯವಾಗುತ್ತದೆ. ಪ್ರಸಿದ್ಧರನ್ನು ಭೇಟಿ ಮಾಡಿ ಅದರ ಬಗ್ಗೆ ನಿಮ್ಮ ಗೆಳೆಯರಿಗೆ ಹೇಳಿಕೊಳ್ಳುವಾಗ ನಿಮ್ಮ ಘನತೆ ಹೆಚ್ಚಿತು ಎಂದು ಅಂದುಕೊಂಡರೆ, ನೀವು ಮಾತ್ರ ಕುಬ್ಜ ವ್ಯಕ್ತಿ ಎಂದು ಸ್ವಯಂ ಸ್ಪಷ್ಟವಾಗುತ್ತದೆ. ತಮ್ಮನ್ನು ಭೇಟಿ ಮಾಡಲು ಬರುವ ಜನರೊಡನೆ ವ್ಯವಹರಿಸುವ ತಂತ್ರವನ್ನು ಪ್ರಸಿದ್ಧರು ರೂಢಿಸಿಕೊಳ್ಳುತ್ತಾರೆ. ಹೊರ ಜಗತ್ತಿಗೆ ಒಂದು ಮುಖವಾಡವನ್ನು (ಸಾಮಾನ್ಯವಾಗಿ ಇದು ಚೆನ್ನಾಗಿಯೇ ಇರುತ್ತದೆ) ಪ್ರದರ್ಶಿಸುತ್ತ, ತಮ್ಮ ನೈಜ ವ್ಯಕ್ತಿತ್ವವನ್ನು ಮುಚ್ಚಿಕೊಳ್ಳುತ್ತಾರೆ. ತಮ್ಮಿಂದ ಜನರು ನಿರೀಕ್ಷಿಸುವ ಪಾತ್ರವನ್ನಂತೂ ಅವರು ಅಚ್ಚುಕಟ್ಟಾಗಿ ನಿಭಾಯಿಸುತ್ತಾರೆ; ತರಬೇತಿಯಿಂದ ತುಂಬಾ ಚೆನ್ನಾಗಿ ನಿರ್ವಹಿಸುವುದನ್ನು ಕಲಿಯುತ್ತಾರೆ. ಆದರೆ, ಸಾರ್ವಜನಿಕರ ಮುಂದಿನ ಅವರ ಪ್ರದರ್ಶನ ಅಂತರಂಗದ ವ್ಯಕ್ತಿಯನ್ನು ಪ್ರತಿಫಲಿಸುತ್ತದೆ ಎಂದುಕೊಂಡರೆ ನೀವು ಮೂರ್ಖರಾಗುತ್ತೀರಿ.

ನಾನು ಕೆಲವೇ ಕೆಲವು ಜನರನ್ನು ಹಚ್ಚಿಕೊಂಡಿದ್ದೇನೆ; ಆದರೆ, ಅನೇಕ ಜನರ ಸಂಪರ್ಕ ನನಗೆ ಅನಿವಾರ್ಯವಾಗಿದೆ; ಅವರ ಬಗ್ಗೆ ನಾನು ಕುತೂಹಲಿಯಾಗಿರುವುದು ನನ್ನ ಕೃತಿಗಳಿಗೆ ಅವರು ಬೇಕಾಗಿರುವುದರಿಂದ, ಸುಪ್ರಸಿದ್ಧರಿಗಿಂತ ಸಾಮಾನ್ಯರು, ಹೆಚ್ಚು ಬೆಳಕಿಗೆ ಬಾರದ ತೆರೆಯಮರೆಯ ಮಂದಿ ನನಗೆ ಆಪ್ತರಾದವರು. ಸಾಮಾನ್ಯವಾಗಿ ಈ ತರಹದ ಜನ ಸಹಜವಾಗಿರುತ್ತಾರೆ. ಜಗವನ್ನು ಮೆಚ್ಚಿಸುವ ಸಲುವಾಗಿ ಬೇರೊಂದು ಮುಖವಾಡವನ್ನು ಹೊತ್ತು ತಿರುಗುವುದು ಅವರಿಗೆ ಎಂದೂ ಅನಿವಾರ್ಯವಾಗುವುದಿಲ್ಲ. ತಾವು ವ್ಯವಹರಿಸುವ ಪುಟ್ಟ ಪ್ರಪಂಚದಲ್ಲಿ ತಮ್ಮ ತಮ್ಮ ಸ್ವಭಾವವನ್ನು ಉದ್ದೀಪನಗೊಳಿಸಿಕೊಳ್ಳುವುದಕ್ಕೆ ಅವರಿಗೆ ಅವಕಾಶ ಹೆಚ್ಚಿರುತ್ತದೆ ಮತ್ತು ಸಾರ್ವಜನಿಕರ ದೃಷ್ಟಿಗೆ ಅವರು ಬೀಳದೇ ಇರುವುದರಿಂದ ತಾವು ಏನನ್ನಾದರೂ ಮುಚ್ಚಿಕೊಳ್ಳಬೇಕು ಎಂದು ಅವರಿಗೆ ಅನ್ನಿಸುವುದೇ ಇಲ್ಲ. ತಮ್ಮ ವ್ಯಕ್ತಿತ್ವದ ವೈಚಿತ್ರ್ಯವನ್ನು ಅವರು ಮುಜುಗರವಿಲ್ಲದೆ ಪ್ರದರ್ಶಿಸುತ್ತಾರೆ; ಏಕೆಂದರೆ, ಅದು ವಿಚಿತ್ರವೆಂದು ಅವರಿಗೆ ತಿಳಿಯುವುದೇ ಇಲ್ಲ. ಜೊತೆಗೆ ಬರಹಗಾರರಾದ ನಮ್ಮಂಥವರು ಸಾಮಾನ್ಯ ಜನರನ್ನು ಕುರಿತೇ ಹೆಚ್ಚು ಬರೆಯುವುದು. ದೊರೆಗಳಾಗಲೀ, ಸರ್ವಾಧಿಕಾರಿಗಳಾಗಲೀ, ಶ್ರೀಮಂತ ವ್ಯಾಪಾರಿಗಳಾಗಲೀ ನಮ್ಮ ದೃಷ್ಟಿಯಲ್ಲಿ ತೃಪ್ತಿಕೊಡುವವರಲ್ಲ. ಇಂಥವರ ಬಗ್ಗೆ ಬರೆಯಲು ಅನೇಕರು ಉತ್ಸುಕತೆ ತೋರಿದುಂಟು; ಪರಿಣಾಮವಾಗಿ ಅವರು ಅನುಭವಿಸಿದ ಅಪಯಶಸ್ಸಿಗೆ ಕಾರಣವೇನೆಂದರೆ ಈ ವ್ಯಕ್ತಿಗಳು ಅಪವಾದವಾಗಿ ಉಳಿದು ಅವರ ಬಗ್ಗೆ ಕಲಾಕೃತಿಯೊಂದರ ನಿರ್ಮಾಣಕ್ಕೆ ಬೇಕಾದ ಪರಿಕರ ಲಭ್ಯವಾಗದೇ ಹೋಗುವುದು. ಸಹಜವಾಗಿ ಅವರನ್ನು ಪಡಿಮೂಡಿಸಲಾಗುವುದಿಲ್ಲ. ಸಾಮಾನ್ಯವಾದದ್ದೇ ಬರಹಗಾರನ ಆಡುಂಬೊಲ. ಅದರ ಅನಿರೀಕ್ಷಿತತೆ, ಅದರ ವಿಲಕ್ಷಣತೆ ಮತ್ತು ಅದರ ಅನಂತವಾದ ವೈವಿಧ್ಯ ಮುಗಿಯಲಾರದಷ್ಟು ವಸ್ತುವನ್ನು ಸೃಷ್ಟಿಸುತ್ತದೆ. ದೊಡ್ಡ ಮನುಷ್ಯನೊಬ್ಬನ ವ್ಯಕ್ತಿತ್ವ ಏಕರೂಪದ್ದಾಗಿ ಇರುತ್ತದೆ; ಕುಬ್ಜನಾದವನು ಪರಸ್ಪರ ವಿರೋಧವಾದ ಅಂಶಗಳ ಸರಮಾಲೆ. ಅವನು ಅನಂತ. ನಿಮ್ಮನ್ನು ಅವನು ಚಕಿತಗೊಳಿಸುವ ರೀತಿಗೆ ಎಂದೂ ಕೊನೆಯೆಂಬುದಿಲ್ಲ. ನನ್ನ ಮಟ್ಟಿಗೆ ಹೇಳುವುದಾದರೆ ಮರಳುಗಾಡಿನಲ್ಲಿ ಒಂದು ತಿಂಗಳ ಕಾಲ ಒಬ್ಬ ಪಶುವೈದ್ಯನ ಜೊತೆಗೆ ಇರಬಲ್ಲೆನಾದರೂ ಪ್ರಧಾನಮಂತ್ರಿಯೊಡನಲ್ಲ.

ಈ ಮೇಲಿನ ಮಾತುಗಳು ಮಾಮ್‌ನ ಮನೋಧರ್ಮದ ಬಗ್ಗೆ ಹೆಚ್ಚು ಬೆಳಕು ಚೆಲ್ಲುತ್ತವೆ. ಕುಂದದ ಜನಪ್ರಿಯತೆಯನ್ನು ಗಳಿಸಿರುವ ಮಾಮ್‌ನ ಯಶಸ್ಸಿನ ಗುಟ್ಟು ಇದೇ ಇರಬೇಕು. ಸದಾ ಕಣ್ಣು ತೆರೆದು ತನ್ನ ಸುತ್ತಣ ಜಗತ್ತನ್ನು ನೋಡಿ ಅದನ್ನು ಕೃತಿಗಿಳಿಸಿದ ಈ ಲೇಖಕನನ್ನು ಓದುತ್ತಿದ್ದಂತೆ ತನಗೆ ಚಿರಪರಿಚಿತವಾದ ಪರಿಸರದಲ್ಲಿ ಲೀಲಾಜಾಲವಾಗಿ ವಿಹರಿಸುತ್ತಿರುವ ಅನುಭವ ಓದುಗನಿಗೆ ಉಂಟಾಗುವುದರಿಂದ ಬೇರೆ ಕಡೆ ಅಲಭ್ಯವಾದ ವಿಶಿಷ್ಟ ಬಗೆಯ ಆಪ್ತತೆ ಮಾಮ್‌ನಲ್ಲಿ ದೊರಕೊಳ್ಳುತ್ತದೆ. ಪ್ರಸಿದ್ಧರ ಬಗ್ಗೆ ತನಗಿರುವ ಅಲರ್ಜಿಯನ್ನು ಹೇಳಿದ ಮಾಮ್ ಓದುಗರೊಡನೆ ಬಹಳ ಬೇಗ ಸ್ನೇಹ ಕುದುರಿಸಿ ತನ್ನ ಅಂತರಂಗದ ಅನುಭವಗಳನ್ನು ಸರಸ ಸಂಭಾಷಣೆಯ ಶೈಲಿಯಲ್ಲಿ ಹಂಚಿಕೊಳ್ಳುತ್ತಾನೆ. ಮೂರನೆಯ ಅಧ್ಯಾಯದಲ್ಲಿ ಅವನು ಹೇಳುವ ಮಾತುಗಳು ಸಹ ಈ ಆತ್ಮ ಚರಿತ್ರೆಯನ್ನು ಅರ್ಥಮಾಡಿಕೊಳ್ಳುವ ದೃಷ್ಟಿಯಿಂದ ಮುಖ್ಯವೆನಿಸುತ್ತವೆ:

> “ನನ್ನ ಜೀವನದಲ್ಲಿ ಬಹಳ ಮುಖ್ಯವಾಗಿ ನನ್ನ ಗಮನ ಸೆಳೆದ ವಿಷಯಗಳ ಮೇಲೆ ನನ್ನ ಆಲೋಚನೆಯನ್ನು ಹರಿಯಬಿಡಲು ಈ ಪುಸ್ತಕದಲ್ಲಿ ಪ್ರಯತ್ನಿಸುತ್ತೇನೆ. ಆದರೆ ಹೀಗೆ ಅಂದುಕೊಂಡಾಗಲೆಲ್ಲ ಅಶಾಂತ ಸಮುದ್ರದಲ್ಲಿ ಛಿದ್ರವಾಗುವ ಹಡಗಿನ ಹಾಗೆ ನನ್ನ ಮನಸ್ಸು ಅಂಕೆ ತಪ್ಪುತ್ತದೆ. ಯಾವುದೋ ಒಂದು ಕ್ರಮದಲ್ಲಿ ನನ್ನ ಆಲೋಚನೆಗಳನ್ನು ಬರೆದರೆ ಲಭ್ಯವಾಗುವ ವಿನ್ಯಾಸದಿಂದ ಅವುಗಳಿಗೆ ಒಂದು ಬಗೆಯ ಸಾಮಂಜಸ್ಯ ದೊರೆಯಬಹುದು ಎಂದು ಅಂದುಕೊಂಡಿದ್ದೇನೆ. ಅಂಥ ಪ್ರಯತ್ನವನ್ನು ಮಾಡಿಯೇ ತೀರಬೇಕೆಂದು ಅನೇಕ ಬಾರಿ ಸಂಕಲ್ಪ ಮಾಡಿಕೊಂಡು ತಯಾರಿ ನಡೆಸಿ, ಘಳಿಗೆ ಪ್ರಶಸ್ತವಾಗಿದೆ ಎಂದುಕೊಂಡರೆ ಅನೇಕ ಚಿತ್ರಗಳು, ವಿಚಿತ್ರಗಳು, ವ್ಯಕ್ತಿಗಳು ತನ್ನ ಕಲ್ಪನೆಯನ್ನು ಕೆರಳಿಸಿ ನಾನು ವಿಷಯದ ಬಗ್ಗೆ ಏಕಾಗ್ರತೆಯಿಂದ ಯೋಚಿಸುವುದಕ್ಕೆ ಆಗದಂತೆ ಆಗಿದೆ. ಆ ಕ್ಷಣದ ಅನುಭವ ಅಷ್ಟೊಂದು ಢಾಳಾಗಿ ಗೋಚರಿಸುವುದರಿಂದ ಸಮಗ್ರವಾಗಿ ತೆಕ್ಕೆಗೆ ತೆಗೆದುಕೊಂಡು ಆತ್ಮವೀಕ್ಷಣೆಗೆ ಒಳಪಡಿಸುವುದು ಕಠಿಣವಾಗಿದೆ.
>
> ಮೇಲಾಗಿ ನನ್ನ ಆಲೋಚನೆಗಳನ್ನು ನಾನು ನಾನಾಗೇ ಬರೆಯುವುದು ನನಗೆ ಇಷ್ಟು ಹಿಡಿಸದ ಕರ್ಮ. ಇಂಥ ಆಲೋಚನೆಗಳನ್ನು ಬೇರೊಂದು

ಸಿಟ್ಟಿನಲ್ಲಿ ಬರೆದಿದ್ದೇನೆ, ಆದರೆ ಕಾದಂಬರಿಕಾರನಾಗಿ; ಅಂದ ಮೇಲೆ ಒಂದು ವಿಧದಲ್ಲಿ ನನ್ನ ಕೃತಿಗಳಲ್ಲಿ ನಾನೇ ಒಂದು ಪಾತ್ರವಾಗಿ ಗೋಚರಿಸಿದ್ದೇನೆ. ದೀರ್ಘಕಾಲದ ಅಭ್ಯಾಸದಿಂದಾಗಿ ನಾನು ಸೃಷ್ಟಿಸಿರುವ ಪಾತ್ರಗಳನ್ನು ಪ್ರವೇಶ ಮಾಡಿ ಮಾತನಾಡುವುದು ನನಗೆ ಹೆಚ್ಚು ಸುಖ ಕೊಡುತ್ತದೆ. ನಾನು ಏನು ಯೋಚಿಸುತ್ತೇನೆ ಎನ್ನುವುದನ್ನು ನಿರ್ಧರಿಸುವುದಕ್ಕಿಂತ ಶೀಘ್ರವಾಗಿ ಅವರು ಏನನ್ನು ಯೋಚಿಸುತ್ತಾರೆ ಎಂದು ನಿಖರವಾಗಿ ಹೇಳಬಲ್ಲೆ. ಹಾಗಾಗಿ, ಮೊದಲನೆಯ ಕೆಲಸ ಮಾನಸಿಕವಾಗಿ ನನಗೆ ತ್ರಾಸ ಕೊಡುವುದರಿಂದ ಅದನ್ನು ಮುಂದೂಡುತ್ತ ಬಂದಿದ್ದೇನೆ, ಎರಡನೆಯದು ಹೆಚ್ಚು ಅಪ್ಯಾಯಮಾನವಾಗಿರುವುದರಿಂದ ಪ್ರೀತಿಸುತ್ತಾ ಬಂದಿದ್ದೇನೆ.

ತಾರುಣ್ಯದಲ್ಲಿ ಕಾಲ ನಿಧಾನವಾಗಿ ಸಾಗುವುದರಿಂದ ಯೌವನ ಮುಗಿಯುತ್ತದೆಯೋ ಎಂದು ಅನುಮಾನ ಕೂಡ ಬರುತ್ತದೆ; ಮಧ್ಯವಯಸ್ಸಿನಲ್ಲಿ ಬದುಕಿಸಿಂಪ ನಾವು ನಿರೀಕ್ಷಿಸಿದ ವಸ್ತುಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ನಿರತವಾಗುವುದರಿಂದ, ಆಗಲೂ ನಾವು ಮಾಡಬೇಕೆಂದುಕೊಂಡಿರುವ ಕೆಲಸವನ್ನು ಮಾಡದೆ ಮುಂದೂಡಲು ಸಾಕಷ್ಟು ನೆಪ ಸಿಕ್ಕುತ್ತದೆ. ಆದರೆ ಸಾವಿನ ಸಾಮೀಪ್ಯವನ್ನು ಮನಗಾಣುವಂಥ ಸನ್ನಿವೇಶವಂತೂ ಬಂದೇ ಬರುತ್ತದೆ. ಅಲ್ಲೊಬ್ಬರು ಇಲ್ಲೊಬ್ಬರು ವಾರಗೆಯವರು ತೀರಿ ಕೊಳ್ಳುತ್ತಾರೆ. ಮನುಷ್ಯರೆಲ್ಲ ಮರ್ತ್ಯರೆಂಬುದು ನಮಗೆ ತಿಳಿದಿದೆ; ಆದರೂ ದೈನಂದಿನ ಉಪದ್ವ್ಯಾಪದಲ್ಲಿ ಸಿಲುಕಿರುವ ನಮಗೆ ಅಂತ್ಯ ಬಹು ದೂರದಲ್ಲಿಲ್ಲ ಸಮೀಪದಲ್ಲೇ ಇದೆ ಎಂದು ಅರಿವಾಗಲು ತರ್ಕಕ್ಕಿಂತ ಕೊಂಚ ಹೆಚ್ಚಾದ ತಿಳುವಳಿಕೆ ಬೇಕಾಗುತ್ತದೆ. 'ದಿ ಟೈಮ್ಸ್' ಪತ್ರಿಕೆಯ ಶ್ರದ್ಧಾಂಜಲಿ ಕಲಮನ್ನು ಒಮ್ಮೆ ನೋಡಿದಾಗ ನನಗನ್ನಿಸಿದೆ —ಅರವತ್ತರ ಗಡಿ ಬಹಳ ಮಾರಕವಾದದ್ದು ಎಂದು; ಈ ಗ್ರಂಥವನ್ನು ಬರೆಯುವ ಮೊದಲೇ ನಾನು ಸತ್ತರೆ ನನಗೆ ದುಃಖವಾಗುವುದೆಂದು ಬಹಳ ಹಿಂದೆಯೇ ಅನ್ನಿಸಿರುವುದರಿಂದ ಕೂಡಲೇ ಇದನ್ನು ಪ್ರಾರಂಭ ಮಾಡಲು ಮುಂದಾದೆ. ಇದನ್ನು ಮುಗಿಸಿದ ಅನಂತರ ಭವಿಷ್ಯವನ್ನು ನಿರುಮ್ಮಳವಾಗಿ ಎದುರಿಸಬಲ್ಲೆ. ಏಕೆಂದರೆ ನನ್ನ ಜೀವನದ ಕಾರ್ಯವನ್ನು ಸಮರ್ಪಕವಾಗಿ ಮಾಡಿ ಮುಗಿಸಿದಂತಾಗುವುದರಿಂದ. ಈ ಕಾರ್ಯಕ್ಕೆ ತೊಡಗಲು ಇದು ಸಕಾಲವಲ್ಲ ಎಂದು ಇನ್ನು ಮುಂದೆ ನೆಪ ಒಡ್ಡಲಾರೆ; ನನ್ನ ಬದುಕಿನ ಈ ಘಟ್ಟದಲ್ಲಿ

ನನಗೆ ಮುಖ್ಯವಾದದ್ದು ಏನು ಎಂದು ನಾನು ನಿರ್ಧರಿಸಲಾರೆನಾದರೆ, ಮುಂದೊಂದು ದಿನ ಹಾಗೆ ತೀರ್ಮಾನಿಸುತ್ತೇನೆ ಎನ್ನುವುದು ಊಹಾತೀತವಾದ ಮಾತು. ನನ್ನ ಪ್ರಜ್ಞೆಯ ನಾನಾ ಸ್ತರಗಳಲ್ಲಿ ದಿಕ್ಕು ದೆಶೆ ಇಲ್ಲದೆ ದೀರ್ಘ ಕಾಲದಿಂದಲೂ ತೇಲಾಡುತ್ತಿದ್ದ ಆಲೋಚನೆಗಳನ್ನು ಒಂದು ಕಡೆ ಕಲೆ ಹಾಕುವ ಕ್ರಿಯೆ ನನಗೆ ಸಂತಸ ತರುತ್ತಿದೆ. ಅವುಗಳನ್ನು ಬರೆದು ಮುಗಿಸಿದ ಅನಂತರ ಅವುಗಳ ಹಂಗು ನನಗೆ ಇಲ್ಲವಾಗಿ ಮತ್ತೆ ನನ್ನ ಮನಸ್ಸು ಬೇರೆ ಕೆಲಸವನ್ನು ಹಮ್ಮಿಕೊಳ್ಳಲು ಮುಕ್ತವಾಗುತ್ತದೆ. ಏಕೆಂದರೆ, ಇದೇ ನನ್ನ ಕಡೆಯ ಪುಸ್ತಕವಾಗುವುದಿಲ್ಲ ಎಂಬುದೂ ನನ್ನ ಆಶಯ. ಉಯಿಲು ಬರೆದಾಕ್ಷಣವೇ ವ್ಯಕ್ತಿ ಸಾಯುವುದಿಲ್ಲ; ಮುನ್ನೆಚ್ಚರಿಕೆಯಾಗಿ ಮಾತ್ರ ಉಯಿಲು ಬರೆಯುವುದು. ಲೌಕಿಕ ವ್ಯವಹಾರಗಳನ್ನು ಚುಕ್ತ ಮಾಡುವುದರ ಮೂಲಕ ವ್ಯಕ್ತಿ ಭವಿಷ್ಯದ ಬಗ್ಗೆ ಹೆಚ್ಚು ಆತಂಕ ಪಡೆದ ಬದುಕಿನ ಉಳಿದ ಕಾಲವನ್ನು ಶಾಂತಿಯಿಂದ ಕಳೆಯುವುದಕ್ಕೆ ಮಾರ್ಗ ನಿರ್ಮಿಸಿಕೊಳ್ಳುತ್ತಾನೆ. ಈ ಪುಸ್ತಕವನ್ನು ಬರೆದು ಮುಗಿಸಿದ ಅನಂತರ ನಾನು ಎಲ್ಲಿ ನಿಂತಿದ್ದೇನೆ ಎನ್ನುವುದರ ಸ್ಪಷ್ಟ ಕಲ್ಪನೆ ನನಗಾತ್ತದೆ. ನನ್ನ ಉಳಿದ ಆಯುಃಷ್ಯವನ್ನು ನನಗೆ ಇಷ್ಟ ಬಂದ ಕೆಲಸವನ್ನು ಮಾಡುವುದಕ್ಕೆ ವಿನಿಯೋಗಿಸಲು ಸಮರ್ಥನಾಗುತ್ತೇನೆ. ನಾನು ಈಗಾಗಲೇ ಹೇಳಿರುವ ಅನೇಕ ಸಂಗತಿಗಳನ್ನು ಈ ಗ್ರಂಥದಲ್ಲಿ ಮತ್ತೆ ಹೇಳಬೇಕಾಗಿರುವುದು ಅನಿವಾರ್ಯವಾಗಿರುವುದರಿಂದ ಇದನ್ನು ನಾನು ದಿ ಸಮ್ಮಿಂಗ್ ಅಪ್ ಎಂದು ಕರೆದಿದ್ದೇನೆ. ಒಬ್ಬ ನ್ಯಾಯಾಧೀಶ ಒಂದು ಮೊಕದ್ದಮೆಯನ್ನು ಸಮ್ಅಪ್ ಮಾಡುವಾಗ ತನ್ನ ಮುಂದೆ ಇಡಲ್ಪಟ್ಟ ವಾಸ್ತವಾಂಶಗಳನ್ನು ಕ್ರೋಢೀಕರಿಸಿ ವಕೀಲರ ಮಾತುಗಳನ್ನು ಸಂಗ್ರಹವಾಗಿ ಹೇಳುತ್ತಾನೆ. ಹೊಸ ಸಾಬೀತನ್ನು ತಾನೇ ಕೊಡುವುದಿಲ್ಲ. ನನ್ನ ಜೀವನವನ್ನೆಲ್ಲ ನನ್ನ ಕೃತಿಗಳಲ್ಲಿ ಮೂಡಿಸಿರುವುದರಿಂದ ನಾನು ಮುಖ್ಯವೆಂದುಕೊಂಡದ್ದೆಲ್ಲಾ ಅಲ್ಲಿ ಅವಕಾಶ ಪಡೆದುಕೊಂಡೇ ಇದೆ. ನನ್ನ ಅಭಿರುಚಿಯ ವಲಯಕ್ಕೆ ಸಿಲುಕುವ ಎಲ್ಲ ವಸ್ತುಗಳ ಬಗ್ಗೆ ನಾನು ಇದುವರೆಗೆ ತೇಲಿಸಿಯೋ ಅಥವಾ ಒತ್ತುಕೊಟ್ಟೋ ಹೇಳಿಬಿಟ್ಟಿದ್ದೇನೆ. ನನ್ನ ಭಾವನೆಗಳು ಮತ್ತು ಅಭಿಪ್ರಾಯಗಳ ಸ್ಪಷ್ಟ ಚಿತ್ರವನ್ನು ಕೊಡಲು ಮಾತ್ರ ಇಲ್ಲಿ ಪ್ರಯತ್ನ ಪಡಬಲ್ಲೆ. ಕಾದಂಬರಿ ಅಥವಾ ನಾಟಕದ ಶಿಸ್ತಿಗೆ ಒಳಪಡದು ಎಂಬ ಕಾರಣಕ್ಕಾಗಿ ಆ ಪ್ರಕಾರ

ಗಳಲ್ಲಿ ಕೇವಲ ಸೂಚ್ಯವಾಗಿ ಬಂದಿರಬಹುದಾದ ಕೆಲವು ವಿಷಯಗಳನ್ನು ಈಗ ಕೊಂಚ ದೀರ್ಘವಾಗಿ ಚರ್ಚಿಸುವ ಪ್ರಯತ್ನ ಮಾಡುತ್ತೇನೆ.

ಈ ಪುಸ್ತಕ ನನ್ನ ಅಹಂ ಅನ್ನು ಕೂಡ ಪ್ರತಿಫಲಿಸಬಹುದು. ನನಗೆ ಮುಖ್ಯವೆಂದು ಕಂಡ ಕೆಲವು ವಿಚಾರಗಳ ಬಗ್ಗೆ ಮತ್ತು ಈ ಸಂಗತಿಗಳು ನನ್ನನ್ನು ಹೇಗೆ ತಾಕಿದುವು ಎನ್ನುವುದರ ಬಗ್ಗೆ ಈ ಪುಸ್ತಕ ತಿಳಿಸುತ್ತದೆ. ಆದರೆ ನನ್ನ ಹೃದಯ ಬಿಚ್ಚಿ ಪ್ರದರ್ಶನಕ್ಕಿಡಬೇಕೆಂಬ ಇಚ್ಛೆ ನನಗಿಲ್ಲ ವಾದ್ದರಿಂದ ತೀರಾ ಆಪ್ತವಲಯಕ್ಕೆ ಓದುಗರನ್ನು ಬರಗೊಡಲಾರೆ. ಕೆಲವನ್ನು ರಹಸ್ಯವಾಗಿಟ್ಟುಕೊಂಡರೇ ನನಗೆ ಹೆಚ್ಚು ಸುಖ. ಯಾವ ವ್ಯಕ್ತಿಯೂ ತನ್ನ ಬಗ್ಗೆ ಸಂಪೂರ್ಣ ಸತ್ಯ ಹೇಳಲಾರ....

ಬರೆಯುವ ಕೈಂಕರ್ಯದಲ್ಲಿ ತೊಡಗಿದ ಲೇಖಕ ಜಗತ್ತಿನಲ್ಲೇ ತಾನು ಶ್ರೇಷ್ಠ ಎಂದು ತಾತ್ಕಾಲಿಕವಾಗಿಯಾದರೂ ತಿಳಿದುಕೊಳ್ಳದೆ ವಿಧಿ ಇಲ್ಲ ಎಂದು ಮಾಮ್ ಅಭಿಪ್ರಾಯಪಡುತ್ತಾನೆ. ಸಾಹಿತ್ಯ ಕೃತಿ ರಚನೆಯ ಮೂಲಕ ಅಮರತ್ವ ಸಾಧಿಸಲಾಗದು ಎಂದುಕೊಂಡರೂ ಒಂದೆರಡು ತಲೆಮಾರಿನ ಓದುಗರ ಪ್ರೀತಿಗೆ ಪಾತ್ರವಾಗಿದ್ದು, ಒಂದು ದೇಶದ ಸಾಹಿತ್ಯ ಚರಿತ್ರೆಯಲ್ಲಿ, ಅದು ಎಷ್ಟೇ ಚಿಕ್ಕದಾದರೂ, ಕೊಂಚ ಜಾಗ ಪಡೆದುಕೊಳ್ಳುವುದು ಯಶಸ್ಸಿನ ಸೂಚನೆ, ನಿಜ. ಈ ನಂಬಿಕೆ ಹುಸಿಯಾದುದು ಎನ್ನುವುದನ್ನು ತಿಳಿಸುತ್ತ ಈ ಸಾಧ್ಯತೆಯ ಬಗ್ಗೆಯೂ ತನ್ನ ಅನುಮಾನ ವ್ಯಕ್ತಪಡಿಸುತ್ತಾನೆ.

ಮಾಮ್‌ಗೆ ಎಂಟು ವರ್ಷವಾಗಿದ್ದಾಗ ಅವನ ತಾಯಿ ತೀರಿಕೊಂಡಳು, ಇನ್ನೆರಡು ವರ್ಷದಲ್ಲಿ ತಂದೆ ತೀರಿಕೊಂಡ. ಹಾಗಾಗಿ ಬೇರೆಯವರು ನನ್ನ ತಂದೆ ತಾಯಿಗಳ ಬಗ್ಗೆ ಹೇಳುವುದು ನೆನಪಿನಲ್ಲಿ ಉಳಿಯಿತೇ ಹೊರತು ಆತನ ನೇರ ಅನುಭವಕ್ಕೆ ಬಂದದ್ದು ತೀರಾ ಕಡಿಮೆ. ಬ್ರಿಟಿಷ್ ರಾಯಭಾರಿಯಲ್ಲಿ ಸಲಹೆ ವಕೀಲನಾಗಿ (ಸಾಲಿಸಿಟರ್) ಸೇವೆ ಸಲ್ಲಿಸುತ್ತಿದ್ದ ಅಪ್ಪ ಟರ್ಕಿ, ಗ್ರೀಸ್, ಏಷ್ಯಾ ಮೈನರ್ ಮತ್ತು ಮೊರಾಕ್ಕೊ ದೇಶಗಳಲ್ಲಿ ಸಂಚರಿಸಿ ಪ್ರಯಾಣ ಕಾಲದಲ್ಲಿ ಅನೇಕ ಗ್ರಂಥಗಳನ್ನು ಓದುತ್ತಿದ್ದ. ಮಾಮ್‌ನ ತಾಯಿಯನ್ನು ಮದುವೆಯಾದಾಗ ತಂದೆಗೆ ನಲವತ್ತು ವರ್ಷ ವಯಸ್ಸು: ದಂಪತಿಗಳ ವಯಸ್ಸಿನ ಅಂತರ ಇಪ್ಪತ್ತಕ್ಕಿಂತಲೂ ಹೆಚ್ಚಿರಬೇಕು. ತಾಯಿ ಅತ್ಯಂತ ರೂಪವತಿ, ತಂದೆ ಬಹಳ ಕುರೂಪಿ. ಆ ಕಾಲದಲ್ಲಿ ಪ್ಯಾರಿಸ್‌ನಲ್ಲಿ ಈ ದಂಪತಿಗಳು ತಿರುಗಾಡುವಾಗ ಜನ ಇವರನ್ನು 'ಕೋಮಲೆ ಮತ್ತು ಕೋಡಗ' ಎಂದು ಆಡಿಕೊಳ್ಳುತ್ತಿದ್ದರಂತೆ. ಮಾಮ್‌ನ ತಾಯಿಯ ತಂದೆ ಭಾರತದಲ್ಲಿ ಸೈನ್ಯದ

ಅನಂತರ ವಿಧವೆ ಅಜ್ಜಿ ಪಿಂಚಣಿ ತೆಗೆದುಕೊಂಡು ಪ್ಯಾರಿಸ್‌ನಲ್ಲಿ ನೆಲಸಿದಳು. ಸ್ವಲ್ಪ ಪ್ರತಿಭೆ ಇದ್ದ ಆ ಹೆಂಗಸು ಘನವಂತೆ, ಸಂಗೀತ ರಚನೆ ಮಾಡುವುದರ ಜೊತೆಗೆ ಫ್ರೆಂಚ್ ಭಾಷೆಯಲ್ಲೂ ಕಾದಂಬರಿಯನ್ನು ಕೂಡ ಬರೆದಿದ್ದಳೆಂದು ತಿಳಿದುಬರುತ್ತದೆ.

ಮಾಮ್‌ನ ತಾಯಿಯ ಆಪ್ತಗೆಳತಿ ಅಮೆರಿಕದ ಲೇಡಿ ಎಂಗಲ್‌ಸಿ ಒಮ್ಮೆ ಅವಳನ್ನು ಹೀಗೆ ಕೇಳಿದಳಂತೆ: "ಇಷ್ಟು ಸುಂದರಿಯಾದ ನಿನ್ನನ್ನ ಅದೆಷ್ಟು ಜನ ಪ್ರೀತಿಸುತ್ತಾರೆ, ನೀನು ಮದುವೆಯಾಗಿರುವ ಆ ಕುರೂಪಿಗೆ ಏಕೆ ಕಟ್ಟು ಬಿದ್ದಿರುವೆ?" ಅದಕ್ಕೆ ಅವನ ತಾಯಿಯ ಉತ್ತರ "ಆತ ನನ್ನ ಭಾವನೆಯನ್ನು ಎಂದೂ ಭಗ್ನಗೊಳಿಸುವುದಿಲ್ಲ."

ಕಾದಂಬರಿಯನ್ನು ಓದುವುದರಲ್ಲಿ ಆಕೆಗೆ ಬಹಳ ಹುಚ್ಚು. ಕ್ಷಯರೋಗಕ್ಕೆ ಪಕ್ಕಾದ ಆಕೆ ಆರು ಮಕ್ಕಳನ್ನು ಹಡೆದು ಹೆರಿಗೆಯಲ್ಲಿ ಸತ್ತಳು. ಮಕ್ಕಳನ್ನು ಹಡೆದರೆ ಕ್ಷಯರೋಗದಲ್ಲಿ ಬಳಲುತ್ತಿರುವ ಹೆಂಗಸರಿಗೆ ಒಳ್ಳೆಯದಾಗುತ್ತದೆಂಬುದು ಆ ಕಾಲದ ವೈದ್ಯರ ನಂಬಿಕೆ. ಮಾಮ್‌ನ ತಾಯಿ ಸತ್ತಾಗ ಅವಳಿಗೆ ಮುವ್ವತ್ತೆಂಟು ವರ್ಷ. ತಾಯಿ ಸತ್ತಮೇಲೆ ಅವಳ ದಾದಿ ಮಾಮ್‌ನ ಯೋಗಕ್ಷೇಮಕ್ಕೆ ನಿಂತಳು. ಮೊದಲು ಫ್ರೆಂಚ್ ಶಾಲೆ ಸೇರಿದ್ದ ಮಾಮ್‌ಗೆ ಇಂಗ್ಲಿಷ್ ಅಷ್ಟಾಗಿ ಬರುತ್ತಿರಲಿಲ್ಲ. ತಂದೆ ಸತ್ತಮೇಲೆ ಫ್ರೆಂಚ್ ಶಾಲೆ ಬಿಟ್ಟು ಇಂಗ್ಲಿಷ್ ಪಾದ್ರಿಯೊಬ್ಬರ ಮನೆಗೆ ನಿತ್ಯ ಪಾಠಕ್ಕೆ ಹೋಗುವುದು ರೂಢಿಯಾಯಿತು. ಆಗಿನ ಅವನ ಇಂಗ್ಲಿಷ್ ಪದಗಳ ಉಚ್ಚಾರಣೆಯಿಂದ ಉಳಿದವರು ಗೊಳ್ಳೆಂದು ನಗುತ್ತಿದ್ದರಂತೆ!

ಸೋಜಿಗವೆಂದರೆ ಸರಾಗವಾಗಿ ಹರಿಯುವ ಸಂಭಾಷಣೆಯನ್ನು ಬರೆಯುವುದು ಸುಲಭವೆಂದು ಮೊದಲಿನಿಂದಲೂ ಮಾಮ್‌ಗೆ ಅನ್ನಿಸಿತ್ತು. ಮಾಮ್‌ನೇ ಹೇಳಿಕೊಳ್ಳುವಂತೆ, ಅವನ ಭಾಷೆ ಸಾಮಾನ್ಯವಾದದ್ದು, ಶಬ್ದ ಸಂಪತ್ತು ಮಿತವಾದದ್ದು, ವ್ಯಾಕರಣದ ಮೇಲಿನ ಹಿಡಿತ ದುರ್ಬಲವಾದದ್ದು, ನುಡಿಗಟ್ಟುಗಳು ಸವಕಲಾದವು. ಹೀಗಿದ್ದೂ ಬರವಣಿಗೆ ಆತನಿಗೆ ಉಸಿರಾಟದಷ್ಟೇ ಸಹಜವಾಗಿ ಕಂಡಿತು. ಬರೆದದ್ದು ಒಳ್ಳೆಯದೋ ಕೆಟ್ಟದೋ ಎಂದು ಯೋಚಿಸುವ ಗೋಜಿಗೆ ಅವನು ಹೋಗಲಿಲ್ಲ. ವಾಲ್ಟರ್ ಪೇಟರ್‌ನನ್ನು ಜನರು ಆರಾಧಿಸುತ್ತಿದ್ದ ಕಾಲದಲ್ಲಿ ಇದಕ್ಕಿಂತ ತೀರಾ ಭಿನ್ನವಾದದ್ದನ್ನು ಬರೆಯಬೇಕೆಂದು ಮಾಮ್‌ಗೆ ಅನ್ನಿಸಿತು. ತಾರುಣ್ಯ ಮತ್ತು ಹೊಸ ಹುರುಪಿನಿಂದ ಪುಟಿಯುತ್ತಿದ್ದುದರಿಂದ ಹೊಸ ಗಾಳಿ, ಕ್ರಿಯೆ ಮತ್ತು ಕೊಂಚ ಹಿಂಸೆ ಕೂಡ ಬೇಕೆನಿಸಿದ್ದು ಆ ಉಸಿರುಕಟ್ಟಿಸುವ ವಾತಾವರಣದಲ್ಲಿ ಸಹಜ; ಏಕೆಂದರೆ ಪಿಸುಮಾತಿ

ಗಿಂತ ಸ್ವಲ್ಪ ಎತ್ತರದ ದನಿಯಲ್ಲಿ ಮಾತನಾಡುವುದೂ ಅಲ್ಲಿ ಅಸಭ್ಯ ವರ್ತನೆಯಾಗುತ್ತಿತ್ತು !

ಈ ಕಾಲದಲ್ಲೇ ಮಾಮ್ ಸ್ವಿಫ್ಟ್‌ನ ಗದ್ಯದಿಂದ ಆಕರ್ಷಿತನಾದದ್ದು. ಸ್ವಿಫ್ಟ್‌ನ ಗದ್ಯ ಸುಸಂಸ್ಕೃತ ಗದ್ಯ. ಸಹಜವೂ, ನೇರವೂ ಆದ ಆ ಶೈಲಿಯಲ್ಲಿ ಆಡಂಬರದ ಆಟಾಟೋಪಗಳಿಲ್ಲ. ಪರಿಶುದ್ಧ ಗದ್ಯ ಅದು. ಇಷ್ಟಾದರೂ ಶೈಲಿಯ ಏಕತಾನತೆಯಿಂದಾಗಿ ಸ್ವಿಫ್ಟ್‌ನನ್ನು ಓದುವಾಗ ಏಕಾಗ್ರತೆ ಪಲ್ಲಟವಾಗುತ್ತದೆ. ಕಳೆದುಹೋದ ದಿನಗಳನ್ನು ಮತ್ತೆ ಪಡೆಯಬಹುದಾದರೆ ಸ್ವಿಫ್ಟ್‌ನಿಗೆ ಕೊಟ್ಟ ದಿನಗಳನ್ನು ಡ್ರೈಡನ್‌ನ ಗದ್ಯ ಓದಲು ವಿನಿಯೋಗಿಸುವುದಾಗಿ ಮಾಮ್ ಹೇಳುತ್ತಾನೆ. ಏಕೆಂದರೆ, ಸ್ವಿಫ್ಟ್‌ನ ಪರಿಪೂರ್ಣತೆಯಾಗಲೀ, ಅಡಿಸನ್‌ನ ಗಾಂಭೀರ್ಯವಾಗಲೀ ಡ್ರೈಡನ್‌ಗದ್ಯಕ್ಕೆ ಇಲ್ಲದಿದ್ದರೂ ಅದರ ನಡಿಗೆ ವಸಂತ ಕಾಲದ ನಡಿಗೆ, ಸಂಭಾಷಣಾತ್ಮಕವಾದ ಲಾಲಿತ್ಯ ಆಕರ್ಷಣೀಯ....ಇಂಗ್ಲೆಂಡಿನಲ್ಲಿ ಆ ತರಹದ ಗದ್ಯವನ್ನು ಅವನಿಗೆ ಮೊದಲು ಯಾರೂ ಬರೆದಿರಲಿಲ್ಲ. ಆ ನಂತರವೂ ಅದಕ್ಕೆ ಸರಿಸಮನಾಗಿ ಬರೆಯಲಾಗಿಲ್ಲ. ಸ್ವಿಫ್ಟ್‌ನ ಗದ್ಯ ಫ್ರೆಂಚ್ ಕಾಲುವೆಯಂತೆ ಇಕ್ಕೆಲಗಳ ಮರಗಳಿಂದ ಕೂಡಿದ ಏರಿಯ ಮಧ್ಯ ಶಾಂತವಾಗಿ ಹರಿದರೆ, ಡ್ರೈಡನ್‌ನ ಗದ್ಯ ಶೈಲಿ ಇಂಗ್ಲಿಷ್ ನದಿಯಂತೆ, ಗುಡ್ಡಗಳನ್ನು ಬಳಸಿ, ಹಳ್ಳಿ ಮತ್ತು ಪಟ್ಟಣಗಳನ್ನು ಮುಟ್ಟಿ, ಕಾಡಿನ ಮಧ್ಯೆ ಭೋರ್ಗರೆದು ಹರಿಯುವ ಶೈಲಿ.

ಸ್ವಲ್ಪ ಕಾಲದ ಅನಂತರ ಈ ಪೂರ್ವಸೂರಿಗಳ ಶೈಲಿಯನ್ನು ವ್ಯವಸ್ಥಿತವಾಗಿ ಅಭ್ಯಾಸ ಮಾಡುವುದನ್ನು ಬಿಟ್ಟು ತನ್ನ ಹಿಡಿತಕ್ಕೆ ನಿಲುಕುವ ಸರಳವಾದ, ಪಾರದರ್ಶಕವಾದ, ಸುಲಲಿತವಾದ ಶೈಲಿಯನ್ನು ರೂಢಿಸಿಕೊಂಡರೆ ಲಾಭ ಹೆಚ್ಚು ಎಂದು ಮಾಮ್‌ಗೆ ಅನ್ನಿಸಿತು. ತಮ್ಮ ಬರವಣಿಗೆ ಓದುಗರಿಗೆ ನೇರವಾಗಿ ಮುಟ್ಟಬಾರದು, ಸ್ವಲ್ಪ ಶ್ರಮದಿಂದಲೇ ಅವರು ತಮ್ಮ ಕೃತಿಯನ್ನು ಅರ್ಥಮಾಡಿಕೊಳ್ಳಬೇಕು ಎಂದು ಬಯಸುವ ಲೇಖಕರ ಬಗ್ಗೆ ಮಾಮ್‌ಗೆ ಸಹಾನುಭೂತಿ ಇರಲಿಲ್ಲ. ಈ ಕಾರಣದಿಂದಾಗಿ, ಸರ್ ಥಾಮಸ್ ಬ್ರೌನ್. ಗಿಬ್ಬನ್ ಮತ್ತು ರಸ್ಕಿನ್‌ರ ಗದ್ಯ ಎಷ್ಟೇ ಸಮೃದ್ಧವಾಗಿದ್ದರೂ ಡ್ರೈಡನ್, ಹ್ಯಾಜ್ಲಿಟ್ ಮತ್ತು ಲ್ಯಾಂಬ್‌ರವರ ಗದ್ಯದಷ್ಟು ಆಪ್ತವಾಗುವುದಿಲ್ಲ ಎನ್ನುತ್ತಾನೆ. ಡೀಕ್ವಿನ್ಸಿ, ಕಾರ್ಲೈಲ್, ವಾಲ್ಟರ್ ಪೇಟರ್ ಮತ್ತು ಮೆರಿಡಿತ್ ಕೂಡ ಮೊದಲನೆಯ ಗುಂಪಿಗೆ ಸೇರಿದವರು. ಅತ್ಯಂತ ಸಹಜವಾಗಿ ದಕ್ಕಿದ ವಾಲ್ಟೇರ್‌ನ ಗದ್ಯ ಶೈಲಿ ಇಂಗ್ಲಿಷ್ ಲೇಖಕರಲ್ಲಿ ಬಹಳ ಅಪರೂಪಕ್ಕೆ ಕಾಣಸಿಗುತ್ತದೆ.

ಮಾಮ್‌ನ ಪ್ರಕಾರ ಅರ್ಥವನ್ನು ಮರೆಮಾಚುವಂಥ ಯಾವ ಮಾರ್ಗವೂ ಖಂಡನಾರ್ಹ. ಸ್ಪಷ್ಟವಾಗಿ ಬರೆಯಬೇಕಾದದ್ದೇ ಎಲ್ಲ ಬರವಣಿಗೆಯ ಗುರಿ. ಪಾರದರ್ಶಕವಾದ ಬರವಣಿಗೆ ಎಂದರೆ ಇದು ತೀರಾ ಲಲಿತವಾಗಿ ಕಿವಿಗೆ ಕೇಳುವ ಪ್ರಕ್ರಿಯೆಯಲ್ಲಿ ಒಂದು ಬಗೆಯ ಏಕತಾನತೆ ಪ್ರಾಪ್ತವಾಗುವ ಅಪಾಯವೂ ಇದೆ. ತನ್ನ ಬರವಣಿಗೆಯ ಧಾಟಿಯಿಂದ ಓದುಗನಿಗೆ ಬೇಸರವಾಗುವುದಕ್ಕೆ ಮೊದಲು ಲೇಖಕನಿಗೆ ಬೇಸರ ಬಂದರೆ ಆ ಅಪಾಯವನ್ನು ತಪ್ಪಿಸಬಹುದು. ಕೆಲವು ಸ್ವರಗಳು ಹೆಚ್ಚು ಹೆಚ್ಚು ಬರವಣಿಗೆಯಲ್ಲಿ ಬಳಕೆಯಾದವೆಂದರೆ ಯಾಂತ್ರಿಕವಾಗಿ ಅವು ಧುಮುಕುತ್ತಿಲ್ಲವೇ ಎಂಬುದನ್ನು ಲೇಖಕ ತನಗೆ ತಾನೇ ಕೇಳಿಕೊಳ್ಳಬೇಕು. ಒಳ್ಳೆಯ ಶೈಲಿ ಶ್ರಮದ ಚಿಹ್ನೆಯನ್ನೇ ತೋರಬಾರದು. ವಾಲ್ಟೇರ್‌ನ ಬರವಣಿಗೆ ಈ ತರಹದ್ದು.

ತನ್ನ ಕಾಲದ ರೀತಿಯಲ್ಲೇ ಒಬ್ಬ ಲೇಖಕ ಬರೆಯಬೇಕು. ಏಕೆಂದರೆ ಭಾಷೆ ಜೀವಂತವಾದದ್ದಷ್ಟೇ ಅಲ್ಲ ಅದು ಬದಲಾಗುತ್ತಿರುತ್ತದೆ: ಗತಕಾಲದ ಲೇಖಕರಂತೆ ಬರೆಯಲು ಪ್ರಯತ್ನ ಮಾಡಿದರೆ ಬರವಣಿಗೆಗೆ ಕೃತಕತೆ ಬಂದುಬಿಡುತ್ತದೆ ಎನ್ನುತ್ತಾನೆ ಮಾಮ್.

ಈ ದೃಷ್ಟಿಯಿಂದ ಗಮನಿಸಿದರೆ ಮಾಮ್ ಅಮೆರಿಕದ ಪತ್ರಿಕೋದ್ಯಮದ ಲೇಖಕರು ಬರೆಯುವ ಬರವಣಿಗೆಯನ್ನು ಇಷ್ಟಪಡುತ್ತಾನೆ. ಕಾರಣ ಆ ಬರವಣಿಗೆಯಲ್ಲಿ ಮೊನಚಾದ, ಚಿತ್ರವತ್ತಾದ ಶೈಲಿ ಇರುವುದರಿಂದ. ಈ ರೀತಿಯ ಬರವಣಿಗೆಯ ಜೊತೆಗೆ ಸ್ವಲ್ಪ ಹಳೆಯ ತಲೆಮಾರಿನ ಬರವಣಿಗೆಯನ್ನು ಓದುವುದರಿಂದ ಹೆಚ್ಚು ಲಾಭವಿದೆ ಎಂದು ಅವನ ಅಭಿಮತ. ಆದ್ದರಿಂದಲೇ ಹ್ಯಾಜ್ಲಿಟ್ ಮತ್ತು ಕಾರ್ಡಿನಲ್ ನ್ಯೂಮನ್ ಅವನ ಗಮನ ಸೆಳೆಯುತ್ತಾರೆ. ಮಾಮ್ ಇವರಾರನ್ನೂ ಅನುಕರಿಸಿಲ್ಲವಾದರೂ ಆತನಿಗೆ ಇಷ್ಟವಾದ ಅನೇಕ ಅಂಶಗಳು ಅವರ ಬರವಣಿಗೆಯಲ್ಲಿವೆ. ಇವರಿಬ್ಬರಿಗೂ ದಕ್ಕದ ಸೂಕ್ಷ್ಮತೆ ಮಾಥ್ಯೂ ಆರ್ನಾಲ್ಡ್‌ನ ಬರವಣಿಗೆಯಲ್ಲಿ ಗೋಚರಿಸುತ್ತದೆ. ಇವರೆಲ್ಲರಲ್ಲಿ ಕಂಡುಬರುವ ಉತ್ತಮ ಗುಣಗಳನ್ನು ತನ್ನಲ್ಲಿ ವಿಲೀನಗೊಳಿಸಿಕೊಂಡು ವರ್ತಮಾನದ ರೀತಿಯಲ್ಲಿ ಬರೆಯಬಹುದಾದರೆ ಒಬ್ಬ ಲೇಖಕ ಅತ್ಯಂತ ಶ್ರೇಷ್ಠ ಮಟ್ಟದ ಶೈಲಿಯನ್ನು ತನ್ನದಾಗಿಸಿಕೊಳ್ಳುತ್ತಾನೆ ಎಂದು ಮಾಮ್ ಹೇಳುತ್ತಾನೆ

ಸಾಹಿತ್ಯಕ್ಕೆ ತನ್ನನ್ನು ತಾನು ಸಂಪೂರ್ಣವಾಗಿ ತೊಡಗಿಸಿಕೊಂಡಿರಲಿಲ್ಲವೆಂದು ಮಾಮ್ ಹೇಳಿಕೊಂಡಿದ್ದಾನೆ. 'ಒಂದು ವೇಳೆ ಹಾಗೆ ಮಾಡಿದ್ದಿದ್ದರೆ ಇನ್ನೂ

ಉತ್ತಮ ಲೇಖಕನಾಗಿರುತ್ತಿದ್ದೆನೊ ಏನೋ?" ಎನ್ನುತ್ತಾನೆ. ತನ್ನ ಬದುಕಿನಲ್ಲಿ ಬರಹ ಕೇವಲ ಒಂದು ಪ್ರಮುಖವಾದ ಅಂಶವಾಗಿರಬೇಕೆಂದುಕೊಂಡಿದ್ದನೇ ಹೊರತು ಅದೇ ಸರ್ವಸ್ವವಾಗಿರಬೇಕು ಎಂದಲ್ಲ. ಮನುಷ್ಯನಿಗೆ ಅಗತ್ಯವಾದ ಉಳಿದ ಚಟುವಟಿಕೆಗಳಿಗೂ ಪ್ರಾಧಾನ್ಯತೆ ಕೊಡಬೇಕೆಂದು ಅವನಿಗೆ ತಿಳಿದಿತ್ತು. ತನ್ನ ದೈಹಿಕ ಹಾಗೂ ಮಾನಸಿಕ ಸ್ಥಿತಿಗತಿಗಳನ್ನು ಕುರಿತು ಮಾಮ್ ಹೇಳುವ ಮಾತುಗಳು ಗಮನಾರ್ಹವಾದುವು:

> ನನ್ನಲ್ಲಿ ಅನೇಕ ದೋಷಗಳಿದ್ದುವು. ನನ್ನ ಆಕಾರ ಚಿಕ್ಕದು. ನನ್ನಲ್ಲಿ ಧಾರಣಶಕ್ತಿ ಇದ್ದರೂ ದೈಹಿಕ ಶಕ್ತಿ ಇರಲಿಲ್ಲ; ನನಗೆ ಉಗ್ಗುವಿಕೆ ಇತ್ತು; ನಾಚಿಕೆ ಸ್ವಭಾವ; ಆರೋಗ್ಯ ಚೆನ್ನಾಗಿಲ್ಲದ ಕಾರಣ ಆಟೋಟಗಳಲ್ಲಿ ಅಷ್ಟಾಗಿ ಇಷ್ಟವಿರಲಿಲ್ಲ. ಒಬ್ಬ ಇಂಗ್ಲಿಷ್‌ನವನ ಜೀವನದಲ್ಲಿ ಆಟೋಟಗಳ ಪಾತ್ರ ಪ್ರಮುಖವಾದದೆಂಬುದು ಸರ್ವವಿದಿತ. ಸ್ವಭಾವದಿಂದಲೋ ಅಥವಾ ಇನ್ನಾವುದೋ ಕಾರಣದಿಂದಲೋ ಜನರಿಂದ ದೂರ ಸರಿಯುವುದು ಅಪೇಕ್ಷಣೀಯವೆನಿಸಿ ಯಾರೊಡನೆಯೂ ಆಪ್ತವಾಗಿ ವ್ಯವಹರಿಸಲಾರದವನಾದೆ. ಮಾದಕ ದ್ರವ್ಯವನ್ನು ಸೇವಿಸಿ ಮೈಮರೆತು, ಜಗತ್ತಿನಲ್ಲಿರುವವರೆಲ್ಲ ನನ್ನ ಸಹೋದರರು ಎಂದು ಅಪ್ಪಿಕೊಳ್ಳುವ ಜನರನ್ನು ನಾನು ನೋಡಿರುವೆನಾದರೂ ನನಗೆ ಮತ್ತು ಬರುವುದಕ್ಕೆ ಮೊದಲೇ ವಮನವಾದ್ದರಿಂದ ಈ ರೀತಿಯ ಸುಖವೂ ತಪ್ಪಿಹೋಯಿತು. ಇನ್ನು ಕೆಲವರು ಲೈಂಗಿಕತೆಯಲ್ಲಿ ಹೆಚ್ಚು ಲೋಲುಪ್ತರಾಗುತ್ತಾರೆ. ತಮ್ಮ ಇಡೀ ಜೀವನವನ್ನು ಇದಕ್ಕೆ ಧಾರೆ ಎರೆದ ಜನರನ್ನು ನಾನು ಕಂಡಿದ್ದೇನೆ. ನಾನು ಸುಲಭವಾಗಿ ಯಾವುದಕ್ಕೂ ಪೂರ್ತಿ ಶರಣಾಗದವನಾದ್ದರಿಂದಲೋ ಏನೋ ಈ ಕ್ಷೇತ್ರದಲ್ಲಿ ಕೂಡ ಹೆಚ್ಚು ಸುಖ ಕಾಣಲು ಅಪೇಕ್ಷಿಸಲಿಲ್ಲ. ಸಿಕ್ಕಿದ್ದನ್ನು ಮುಕ್ಕಿಬಿಡುವ ಕೆಲವರನ್ನು ಕಂಡಾಗ ಅವರ ಹಸಿವನ್ನು ಕಂಡು ನನಗೆ ಆಶ್ಚರ್ಯವಾಗಿದೆಯೇ ವಿನಃ ಅವರ ಗೆಲುವಿನ ಬಗ್ಗೆ ಎಂದೂ ಅಸೂಯೆ ಉಂಟಾಗಿಲ್ಲ.

ಜಗತ್ತನ್ನು, ಜನರನ್ನು ಅರ್ಥಮಾಡಿಕೊಳ್ಳಲು ಮಾಮ್ ಬಹಳ ಆರೋಗ್ಯಕರವಾದ ನಿಲುವಿನಿಂದ ಹೊರಡುತ್ತಾನೆ. ಅವನ ಪ್ರಕಾರ ನಮ್ಮ ನಮ್ಮ ತಪ್ಪುಗಳನ್ನು ನಾವು ಗೌಣವಾಗಿ ಕಂಡು ಇತರರ ತಪ್ಪುಗಳನ್ನು ಹಿಗ್ಗಿಸಿಬಿಡುತ್ತೇವೆ. ಇದಕ್ಕೆ ಕಾರಣ ನಾವು ತಪ್ಪು

ಮಾಡಲು ಒದಗಿ ಬಂದ ಸಂದರ್ಭಗಳು ನನಗೆ ಚೆನ್ನಾಗಿ ಗೊತ್ತಿರುತ್ತವೆ. ಅಂದ ಮೇಲೆ ಮನುಷ್ಯ ಎಷ್ಟು ಎತ್ತರದವನಾದರೂ ದೋಷಗಳು ಇದ್ದೇ ಇರುತ್ತವೆ.

ಆದರೆ ಯಾವುದೇ ಸಮಾಜವೂ ತನ್ನ ಹೀರೋಗಳ ತಪ್ಪುಗಳನ್ನು ಎತ್ತಿ ಹೇಳುವುದಿಲ್ಲ. ಒಟ್ಟಿನಲ್ಲಿ ಮನುಷ್ಯರೆಲ್ಲ ದೊಡ್ಡತನ ಮತ್ತು ಸಣ್ಣತನಗಳ ಮಿಶ್ರಣವಾಗಿದ್ದಾರೆ. ತನ್ನ ಮಟ್ಟಿಗೆ ಹೇಳಿಕೊಳ್ಳುತ್ತಾ ಮಾಮ್ ತಾನು ಇತರರಿಗಿಂತ ಉತ್ತಮನೂ ಅಲ್ಲ ಹಾಗೆಯೇ ಅಧಮನೂ ಅಲ್ಲ ಎಂದು ಹೇಳುತ್ತಾನೆ.ಒಂದು ಮಾತು ನಿಜ,ತಾನು ಜೀವನದಲ್ಲಿ ಎಸಗಿರುವುದನ್ನೆಲ್ಲ ಬರೆದ ಪಕ್ಷದಲ್ಲಿ ಜನರು ನನ್ನನ್ನೂ ಪರಮ ನೀಚ ಎಂದು ಪರಿಗಣಿಸು ವುದರಲ್ಲಿ ಆಶ್ಚರ್ಯವಿಲ್ಲ ಎಂದು ಮಾಮ್ ತಿಳಿಸುತ್ತಾನೆ.

ಮಾಮ್‌ನನ್ನು ಸಿನಿಕನೆಂದು ಕರೆಯುವವರಿಗೆ ಅವನು ಉತ್ತರ ಕೊಡುವ ರೀತಿಯನ್ನು ಗಮನಿಸಬೇಕು. ಇತರ ಲೇಖಕರಿಗೆ ಕಾಣದ ಕೆಲವು ವಿಲಕ್ಷಣಗಳ ಬಗ್ಗೆ ತಾನು ಒತ್ತುಕೊಟ್ಟು ಬರೆದದ್ದು ಜನರಿಗೆ ಸಿನಿಕತನದ ಚಿನ್ಹೆಯಾಗಿ ಕಂಡಿರಬೇಕು ಎನ್ನುತ್ತಾನೆ. ಬೇರೆಯವರ ವರ್ತನೆಯಿಂದ ಊನವಾದರೂ ಅದನ್ನು ಕ್ಷಮಿಸಲು ಕಲಿತಿದ್ದಾನೆ. ಬೇರೆಯವರಿಂದ ಹೆಚ್ಚು ನಿರೀಕ್ಷಿಸುವುದು ಒಳ್ಳೆಯದಲ್ಲ. ನಮ್ಮನ್ನನವರು ಚೆನ್ನಾಗಿ ನೋಡಿಕೊಂಡರೆ ನಾವು ಅವರಿಗೆ ಕೃತಜ್ಞರಾಗಿರಬೇಕು. ತುಚ್ಛವಾಗಿ ಕಂಡರೆ ವಿಚಲಿತರಾಗದೆ ಇರಬೇಕು. ಅಥೆನ್ಸ್‌ನ ಆಗಂತುಕನೊಬ್ಬ ಹೇಳಿದಂತೆ: ನಾವು ಪ್ರತಿಯೊಬ್ಬರೂ ನಮ್ಮ ಆಸೆ ಆಕಾಂಕ್ಷೆ ಮತ್ತು ಆತ್ಮದ ಗುಣಕ್ಕೆ ಅನುಗುಣವಾಗಿ ರೂಪಿಸಲ್ಪಟ್ಟವರು" ಎಂದು ಮಾಮ್ ದೃಷ್ಟಾಂತವನ್ನು ಉದ್ಧರಿಸುತ್ತಾನೆ.

ಮಾಮ್‌ನ ಪೂರ್ವಿಕರೆಲ್ಲ ವಕೀಲಿ ವೃತ್ತಿಯಲ್ಲಿದ್ದುದರಿಂದಲೋ ಏನೋ ಅವನಿಗೆ ವ್ಯಕ್ತಿಗಳನ್ನು ಪರೀಕ್ಷಿಸದೆ ಒಪ್ಪುವುದಕ್ಕಾಗುತ್ತಿರಲಿಲ್ಲ. ವೈದ್ಯವೃತ್ತಿ ಮಾತ್ರ ಸುತರಾಂ ಒಗ್ಗದಾಗಿತ್ತು. ಹಾಗೆ ಬಹಿರಂಗವಾಗಿ ಮನೆಯವರೊಡನೆ ಹೇಳುವಂತಿರಲಿಲ್ಲ. ಆತನಿಗೆ ಮಾತ್ರ ತಾನು ಲೇಖಕನಾಗದೆ ಬೇರೇನೂ ಆಗಲಾರನೆಂಬ ದೃಢವಾದ ನಂಬಿಕೆ ಇತ್ತು. ಘನವಂತ ಕುಟುಂಬಕ್ಕೆ ಸೇರಿದ ಹದಿನೆಂಟು ವರ್ಷದ ಹುಡುಗನೊಬ್ಬ ಸಾಹಿತ್ಯವನ್ನು ವೃತ್ತಿಯಾಗಿ ಸ್ವೀಕರಿಸುವ ಕರ್ಮವನ್ನು ಯಾರೂ ಊಹಿಸರು. ಕಂಡು ಕೇಳರಿಯರು. ವಕೀಲಿ ವೃತ್ತಿ ಹಿಡಿಯುವುದೆಂದು ಕೆಲವೊಮ್ಮೆ ಮನಸ್ಸಿದ್ದರೂ ವಯಸ್ಸಿನಲ್ಲಿ ತನಗಿಂತ

ದೊಡ್ಡವರಾದ ಅವನ ಮೂವರು ಅಣ್ಣಂದಿರು ಆ ವೇಳೆಗಾಗಲೇ ಆ ವೃತ್ತಿಯಲ್ಲಿ ತೊಡಗಿದ್ದರು: ಅವನಿಗೆ ಅಲ್ಲಿಯೂ ಸ್ಥಾನವಿಲ್ಲದ್ದು ಮನವರಿಕೆಯಾಯಿತು.

ವಿದ್ಯಾರ್ಥಿಯಾಗಿ ಲಂಡನ್‌ನ ಸೇಂಟ್ ಥಾಮಸ್ ಆಸ್ಪತ್ರೆ ಸೇರಿದ ಮೇಲೆ ಆತ ಅದುವರೆಗೂ ಬಯಸಿದ್ದ ಸ್ವಾತಂತ್ರ್ಯ, ಸ್ವೇಚ್ಛೆ ಲಭಿಸಿದವು. ಆ ದಿನಗಳಲ್ಲಿ ಮಹತ್ತರವಾದದ್ದೇನನ್ನೂ ಸಾಧಿಸಲಿಲ್ಲವಾದರೂ, ಬಿಡುವಿನ ಕಾಲದಲ್ಲಿ ಹೆಚ್ಚು ಹೆಚ್ಚು ಓದುವುದನ್ನು ಅಭ್ಯಾಸಮಾಡಿಕೊಂಡ; ಮುಂದೆ ಸಣ್ಣಕತೆಗಳಾಗ ಬಹುದಾಗಿದ್ದ ಸಂಗತಿಗಳ ಟಿಪ್ಪಣಿ ತಯಾರಿಸಿಕೊಂಡ. ಎರಡು ವರ್ಷಗಳ ಅನಂತರ ಹೊರರೋಗಿಗಳ ವಿಭಾಗದಲ್ಲಿ ಗುಮಾಸ್ತನಾದ. ವಾರ್ಡುಗಳಿಗೆ ಹೋಗಲು ಪ್ರಾರಂಭಮಾಡಿದ. ಒಮ್ಮೆ ತೀರಾ ಜೀರ್ಣವಾದ ಶವವೊಂದರ ಪರೀಕ್ಷೆಯ ಕಾಲದಲ್ಲಿ ಸೆಪ್ಟಿಕ್ ಟಾನ್ಸಿಲೈಟಿಸ್‌ಗೆ ತುತ್ತಾದ. ಅನಂತರ ಸರ್ಟಿಫಿಕೇಟ್‌ನ ಗಳಿಕೆಗಾಗಿ ಲ್ಯಾಂಬೆತ್‌ನ ಕೊಳಚೆ ಪ್ರದೇಶದಲ್ಲಿ ಕೆಲಸ ಮಾಡಿದ. ತುರ್ತು ಕೇಸುಗಳಿಗೆ ಪ್ರಥಮ ಚಿಕಿತ್ಸೆ ನೀಡಲು ಆ್ಯಕ್ಸಿಡೆಂಟ್ ಡ್ಯೂಟಿಯಲ್ಲಿ ಹಗಲು ರಾತ್ರಿ ಕೆಲಸ ಮಾಡಿದ. ಇದರಿಂದ ಅತಿಯಾದ ಬಳಲಿಕೆ ಉಂಟಾದರೂ ಕೆಲಸ ಒಂದು ಬಗೆಯ ತೃಪ್ತಿಯನ್ನು ನೀಡಿತ್ತು.

ಈ ಮೂರು ವರ್ಷಗಳ ಕಾಲ ತಾನು ಅತ್ಯಂತ ಆಪ್ತವಾಗಿ ಪ್ರೀತಿಸುತ್ತಿದ್ದ ಬದುಕಿನೊಡನೆ ಸಂಪರ್ಕ ಹೊಂದಿದ್ದ. ಅವನ ಮುಂದೆ ನಡೆದ ಘಟನೆಗಳು, ಅನುಭವಗಳು, ಅವನೊಳಗಿದ್ದ ಕಾದಂಬರಿಕಾರನನ್ನು ಎಚ್ಚರಿಸಿದವು. ಮನುಷ್ಯನ ಸ್ವಭಾವವನ್ನು ಚೆನ್ನಾಗಿ ತಿಳಿಯಲು ವೈದ್ಯವೃತ್ತಿಗಿಂತ ಸರಿಯಾದ ವೃತ್ತಿ ಬೇರೊಂದಿಲ್ಲ. ವಕೀಲಿ ವೃತ್ತಿಯಲ್ಲಿ ಮನುಷ್ಯ ಸ್ವಭಾವವನ್ನು ಚೆನ್ನಾಗಿ ನೋಡಬಹುದಾದರೂ, ವಕೀಲರ ಬಳಿಗೆ ಬರುವ ಮಂದಿ ತಮ್ಮ ಪ್ರಜ್ಞೆಯನ್ನು ಚೆನ್ನಾಗಿ ಅಂಕೆಯಲ್ಲಿಟ್ಟುಕೊಳ್ಳಲು ಸಮರ್ಥರಾದವರು; ಸುಳ್ಳು ಹೇಳುವುದಕ್ಕೂ ಅವರು ಪೂರ್ವಸಿದ್ಧತೆ ಮಾಡಿಕೊಂಡಿರುತ್ತಾರೆ.

ತನ್ನ ಉಗ್ಗುವಿಕೆಯಿಂದಾಗಿ ಮಾಮ್‌ಗೆ ಜನಸಮುದಾಯದೊಡನೆ ಹೆಚ್ಚು ಬೆರೆಯಲು ಮನಸ್ಸಾಗುತ್ತಿರಲಿಲ್ಲ. ಉಗ್ಗನ್ನು ಸ್ವಲ್ಪಮಟ್ಟಿಗೆ ಸರಿಪಡಿಸಿಕೊಂಡ ಮೇಲೂ ಉದ್ದುದ್ದ ಸಂಭಾಷಣೆಯಲ್ಲಿ ತೊಡಗುವುದೆಂದರೆ ಆತನಿಗೆ ತ್ರಾಸವೇ ಆಗುತ್ತಿತ್ತು. ಮಾತನಾಡುವುದನ್ನು ಬಿಟ್ಟು ಯಾವುದಾದರೂ ಒಂದು ಪುಸ್ತಕವನ್ನು ಹಿಡಿದು ಕುಳಿತರೆ ಆತನಿಗೆ ಹೆಚ್ಚು ಸಂತಸವಾಗುತ್ತಿತ್ತು.

—ಸಿ. ನಾಗಣ್ಣ

(ಮುಂದುವರಿಯುವುದು)

# ಪುಸ್ತಕ ಪ್ರಪಂಚ

## (ಮಾಸ ಪತ್ರಿಕೆ)

ಕ್ರೌನ್ ಅಷ್ಟದಳ ೬೪ ಪುಟಗಳು

ಬಿಡಿ ಪ್ರತಿ : **ಮೂರು ರೂಪಾಯಿ**

ವಾರ್ಷಿಕ ಚಂದಾ : **೩೦ ರೂಪಾಯಿ**

ಸಾರ್ವಜನಿಕ ವಿದ್ಯಾವಂತರ ಉಪಯೋಗಕ್ಕಾಗಿ, ಮುಖ್ಯವಾಗಿ ಗ್ರಾಮಸ್ಥರ ಮತ್ತು ಗ್ರಾಮ ಪುಸ್ತಕ ಭಂಡಾರಗಳ ಅಧಿಕಾರಿಗಳ ಉಪಯೋಗಕ್ಕಾಗಿ ಈ ಪತ್ರಿಕೆ ಪ್ರಕಟವಾಗುತ್ತಿದೆ.

(ಅ) ಕನ್ನಡೇತರ ಭಾಷೆಗಳಲ್ಲಿ ಪ್ರಕಟವಾದ ಪುಸ್ತಗಳ ಮತ್ತು ಲೇಖನಗಳ ಸಾರಾಂಶಗಳನ್ನು ಪ್ರಕಟಿಸಿ ಅವುಗಳ ಪರಿಚಯವನ್ನು ಮಾಡಿ ಕೊಡುವುದು.

(ಆ) ಆಯಾ ತಿಂಗಳಲ್ಲಿ ಪ್ರಕಟವಾದ ಎಲ್ಲ ಕನ್ನಡ ಪುಸ್ತಕಗಳ ಮತ್ತು ಮುಖ್ಯ ಕನ್ನಡ ಲೇಖನಗನ್ನು ಪ್ರಕಟಿಸುವುದು.

(ಇ) ಕನ್ನಡದಲ್ಲಿ ಪ್ರಕಟವಾಗಿರುವ ಉತ್ತಮ ಪುಸ್ತಕಗಳ ಬಗ್ಗೆ ವಿಮರ್ಶಾತ್ಮಕ ಲೇಖನಗಳನ್ನು ಪ್ರಕಟಿಸುವುದು.

(ಈ) ಪುಸ್ತಕ ಭಂಡಾರ ವ್ಯವಸ್ಥೆ ವಿಚಾರವಾಗಿ ಲೇಖನಗಳನ್ನು ಪ್ರಕಟಿಸುವುದು.

(ಉ) ಒಬ್ಬ ಲೇಖಕರ ಎಲ್ಲ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು. ಒಂದು ವಿಷಯದ ಮೇಲೆ ಬರೆದಿರುವ ಅನೇಕ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು.

(ಊ) ಗ್ರಾಮ ಜೀವನಕ್ಕೆ ಸಂಬಂಧಪಟ್ಟ ಕಥೆಗಳು, ಕವಿತೆಗಳು, ಪ್ರಬಂಧಗಳ ಮತ್ತು ವ್ಯಕ್ತಿ ಚಿತ್ರಗಳನ್ನು ಪ್ರಕಟಿಸುವುದು.

(ಋ) ಕಲಾಚಿತ್ರಗಳನ್ನು ಅಚ್ಚು ಮಾಡುವುದು

(ೠ) ಕನ್ನಡದಲ್ಲಿ ಪ್ರಕಟವಾದ ಅತಿ ಮುಖ್ಯ ಲೇಖನದ ಸಾರಾಂಶವನ್ನು ಪ್ರಕಟಿಸುವುದು.

(ಎ) ಗ್ರಾಮಸ್ಥರಿಗೆ ರುಚಿಸುವ ವಿಷಯಗಳ ಮೇಲೆ ಸುಲಭ ಶೈಲಿಯಲ್ಲಿ ಲೇಖನಗಳನ್ನು ಪ್ರಕಟಿಸುವುದು.

**ಪ್ರಧಾನ ಕಾರ್ಯದರ್ಶಿ**

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ನಂ. ೫/೧, ವಿನೋಬಾ ರಸ್ತೆ,
ಮಾನಸ ಗಂಗೋತ್ರಿ ಆವರಣ : : ಮೈಸೂರು-೫೭೦ ೦೦೬

Reg. No. KRNN. 29 / WPP 6

LICENSE No. 21
LICENSED TO POST WITH PAYMENT



Edited by R. Boraiah, Printed by H. V. Sreenivasachar, Manager at Karnataka State Adult Education Council Press and Published by Karnataka State Adult Education Council Mysore city (India)